ಮಂಗಳವಾರ, ನವೆಂಬರ್ 1, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು

ಜಾನ್ವಿ ಝಲಕ್

ನವದೆಹಲಿಯಲ್ಲಿ ಸೋಮವಾರ ಬಾಲಿವುಡ್ ನಟಿ ಜಾನ್ವಿ ಕಪೂರ್ ತಮ್ಮ ಹೊಸ ಚಿತ್ರ 'ಮಿಲಿ' ಪ್ರಚಾರದಲ್ಲಿ ಪಾಲ್ಗೊಂಡಿದ್ದರು



‘ರಾಜ್ಯೋತ್ಸವ ಪ್ರಶಸ್ತಿ ಸುಗಮ ಸಂಗೀತ ಕಡೆಗಣನೆ’

ಬೆಂಗಳೂರು: ‘ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಯಲ್ಲಿ ಸುಗಮ ಸಂಗೀತ ಕ್ಷೇತ್ರವನ್ನು ಕಡೆಗಣಿಸಿರುವುದು ಖಂಡನೀಯ ವಿಚಾರ’ ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ದೂರಿದ್ದಾರೆ.

‘ಏಳು ದಶಕಗಳಿಂದ ಕನ್ನಡ ನಾಡು, ನುಡಿ ಹಾಗೂ ಸಂಸ್ಕೃತಿಯ ವಿಚಾರದಲ್ಲಿ ಪರಿಣಾಮಕಾರಿ ಸೇವೆ ಸಲ್ಲಿಸುತ್ತಿರುವ ಸುಗಮ ಸಂಗೀತ ಕ್ಷೇತ್ರ ಈ ಬಾರಿ ಕಡೆಗಣಿಸಲಾಗಿದೆ. ಅ.28ರಂದು ಕೋಟಿ ಕಂಠ ಗಾಯನ ಅದ್ದೂರಿಯಾಗಿ ನಡೆಯಿತು. ನಾಡಿನ ಹಿರಿಮೆ ಎತ್ತಿ ಹಿಡಿದವರು ಸುಗಮ ಸಂಗೀತ ಗಾಯಕರು ಅಲ್ಲವೇ’ ಎಂದು ಪ್ರಶ್ನಿಸಿದ್ದಾರೆ.

‘ಈ ಹಿಂದೆ ಕರ್ನಾಟಕ ಶಾಸ್ತ್ರೀಯ ಸಂಗೀತ, ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಗಮಕ ಕ್ಷೇತ್ರಕ್ಕೆ ಪ್ರತ್ಯೇಕ ಪ್ರಶಸ್ತಿ ನೀಡಲಾಗುತ್ತಿತ್ತು. ಆದರೆ, ಈ ಬಾರಿ ಸುಗಮ ಕ್ಷೇತ್ರ ಕಡೆಗಣಿಸಿರುವುದು ಖಂಡನೀಯ. ಸರ್ಕಾರ ಸರಿಯಾದ ನಿರ್ಧಾರ ಕೈಗೊಳ್ಳದಿದ್ದರೆ ರಾಜ್ಯದಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು’ ಎಂದು ಪರಿಷತ್ ಕಾರ್ಯಾಧ್ಯಕ್ಷ ಡಾ.ಕಿಕ್ಕೇರಿ ಕೃಷ್ಣಮೂರ್ತಿ, ಪ್ರಧಾನ ಕಾರ್ಯದರ್ಶಿ ನಗರ ಶ್ರೀನಿವಾಸ ಉಡುಪ, ಗೌರವ ಖಜಾಂಚಿ ಪ್ರಶಾಂತ ಉಡುಪ ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ.

29 ಹೊಸ ಪಿಯು ಕಾಲೇಜುಗಳು ಮಂಜೂರು

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 29 ಹೊಸ ಪದವಿಪೂರ್ವ ಕಾಲೇಜುಗಳನ್ನು ಆರಂಭಿಸಲು ಪದವಿ ಪೂರ್ವ ಶಿಕ್ಷಣ ಇಲಾಖೆ ಮಂಜೂರಾತಿ ನೀಡಿದೆ.

ಯಾದಗಿರಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಲಾ 2, ಕೊಪ್ಪಳ ಜಿಲ್ಲೆಯಲ್ಲಿ 3, ರಾಯಚೂರು, ಉಡುಪಿ, ಹಾವೇರಿ, ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ತಲಾ 1, ವಿಜಯಪುರ ಜಿಲ್ಲೆಯಲ್ಲಿ 2, ಬಾಗಲಕೋಟೆಯಲ್ಲಿ 5, ಬೆಳಗಾವಿ ಜಿಲ್ಲೆಯಲ್ಲಿ 10 ಕಾಲೇಜುಗಳನ್ನು ಮಂಜೂರು ಮಾಡಲಾಗಿದೆ.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್‌ರಿಂದ ಶಿಸ್ತುಕ್ರಮದ ಎಚ್ಚರಿಕೆ

ಗುಂಡಿ ಮುಚ್ಚಲು ನ.10ರ ಗಡುವು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಇನ್ನೂ 11 ಸಾವಿರಕ್ಕೂ ಹೆಚ್ಚು ಗುಂಡಿಗಳು ಮುಚ್ಚಲು ಬಾಕಿ
- ಮುಚ್ಚಿರುವ ಗುಂಡಿಗಳ ಸಂಖ್ಯೆ 19 ಸಾವಿರ
- ನಿರೀಕ್ಷಿತ ಫಲಿತಾಂಶ ನೀಡದ ಪೈಥಾನ್ ಯಂತ್ರ
- ಪೈಥಾನ್ ಗುತ್ತಿಗೆ ರದ್ದತಿಗೆ ಸರ್ಕಾರಕ್ಕೆ ಬಿಬಿಎಂಪಿ ಪತ್ರ

ಬೆಂಗಳೂರು: ನಗರದ ರಸ್ತೆಗಳಲ್ಲಿ ಇನ್ನೂ 11 ಸಾವಿರಕ್ಕೂ ಹೆಚ್ಚು ಗುಂಡಿಗಳಿವೆ. ಇವುಗಳೆಲ್ಲವನ್ನು ಮುಚ್ಚಲು ಬಿಬಿಎಂಪಿ ಎಂಜಿನಿಯರ್‌ಗಳಿಗೆ ಮತ್ತೆ ಹೊಸ ಗಡುವು ನೀಡಿದೆ. ನ.10ರೊಳಗೆ ಎಲ್ಲ ಗುಂಡಿ ಮುಚ್ಚದಿದ್ದರೆ ಶಿಸ್ತುಕ್ರಮ ತೆಗೆದುಕೊಳ್ಳುವುದಾಗಿಯೂ ಎಚ್ಚರಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರತಿ ಸಹಾಯಕ ಎಂಜಿನಿಯರ್‌ಗೂ ಅವರ ವ್ಯಾಪ್ತಿಯಲ್ಲಿ ರಸ್ತೆ ಗುಂಡಿ ಮುಚ್ಚಲು ಗುರಿ ನೀಡಲಾಗಿದೆ.

ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್, ಮುಖ್ಯ ಎಂಜಿನಿಯರ್‌ಗಳು ಇದರ ನೇತೃತ್ವ ವಹಿಸಲಿದ್ದಾರೆ. ಜಂಟಿ ಆಯುಕ್ತರು ಮೇಲ್ವಿಚಾರಣೆ ನಡೆಸಲಿದ್ದಾರೆ.

ನ.5ರೊಳಗೆ ಕಾಮಗಾರಿ ಮುಗಿಸಲು ಸೂಚಿಸಲಾಗಿದೆ. ಇನ್ನಷ್ಟು ಉಳಿದರೆ ನ.10ರೊಳಗೆ ಎಲ್ಲ ಗುಂಡಿಗಳು ಮುಚ್ಚಬೇಕು. ಅದಾಗದಿದ್ದರೆ ಶಿಸ್ತುಕ್ರಮ ಎದುರಿಸಬೇಕಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ಸುತ್ತೋಲೆ ರವಾನಿಸಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಅತಿಹೆಚ್ಚು ಮಳೆಯಿಂದ ರಸ್ತೆ ಗುಂಡಿಗಳ ಸಂಖ್ಯೆ ಹೆಚ್ಚಾಗಿದೆ. ಇವುಗಳನ್ನು ಮುಚ್ಚಲು ಮಳೆ ಅಡ್ಡಿಯಾಗಿತ್ತು. ಕಳೆದ ಒಂದು ವಾರದಲ್ಲಿ ಮಳೆ ಇಲ್ಲದ್ದರಿಂದ ಗುಂಡಿ ಮುಚ್ಚುವ ಕಾರ್ಯ ಸಾಕಷ್ಟು ವೇಗವಾಗಿ ನಡೆದಿದೆ. ಸುಮಾರು 19 ಸಾವಿರ ಗುಂಡಿಗಳನ್ನು ಮುಚ್ಚಲಾಗಿದೆ ಎಂದು ಬಿಬಿಎಂಪಿ ಯೋಜನೆ ವಿಭಾಗದ ವಿಶೇಷ ಆಯುಕ್ತ ರವೀಂದ್ರ ತಿಳಿಸಿದರು.

ನ.1ರೊಳಗೆ ರಸ್ತೆಗಳ ಗುಂಡಿಗಳನ್ನು ಮುಚ್ಚಲು ಯೋಜನೆ ರೂಪಿಸಲಾಗಿತ್ತು. ಆದರೆ, ಡಾಂಬರು ಘಟಕಗಳಲ್ಲಿ ಕಾರ್ಯನಿರ್ವಹಿಸುವವರು ದೀಪಾವಳಿ ಹಬ್ಬದಿಂದಾಗಿ ಕೆಲಸಕ್ಕೆ ಬಂದಿರಲಿಲ್ಲ. ಹೀಗಾಗಿ, ಗುರಿ ಮುಟ್ಟಲು ಸಾಧ್ಯವಾಗಲಿಲ್ಲ ಎಂದು ಹೇಳಿದರು.

ಪೂರ್ವದಲ್ಲಿ ಅತಿಹೆಚ್ಚು: ಬಿಬಿಎಂಪಿಯ ಪೂರ್ವ ವಲಯದಲ್ಲಿ ಈ ವರ್ಷ ಒಟ್ಟು 5,776 ಗುಂಡಿಗಳನ್ನು ಗುರುತಿಸಲಾಗಿದೆ. ಈವರೆಗೆ ಗುಂಡಿಗಳನ್ನು ಮುಚ್ಚುವ ಕೆಲಸ ಮಾಡಿದ್ದರೂ ಇನ್ನೂ 1,646 ಗುಂಡಿಗಳು ಬಾಯಿ ತೆರೆದುಕೊಂಡೇ ಇವೆ. ಬಾಕಿ ಇರುವ ಗುಂಡಿಯಲ್ಲೂ ವಲಯಗಳಲ್ಲಿ ‘ಪೂರ್ವ’ವೇ ಮುಂದು. ಇನ್ನು, ಅತ್ಯಾಧುನಿಕ ತಂತ್ರಜ್ಞಾನದಲ್ಲಿ ಗುಂಡಿ ಮುಚ್ಚುವ ಪೈಥಾನ್ ಯಂತ್ರ ಕೆಲಸವೇ ಮಾಡುತ್ತಿಲ್ಲ. ಅದರ ಗುತ್ತಿಗೆಯನ್ನು ರದ್ದುಮಾಡಿಸಲು ಸರ್ಕಾರಕ್ಕೆ ಪತ್ರವನ್ನೂ ಬಿಬಿಎಂಪಿ ಬರೆದಿದೆ. ಹೀಗಾಗಿ, ಪೈಥಾನ್ 5,605 ಗುಂಡಿಗಳನ್ನು ಮುಚ್ಚಬೇಕಿತ್ತು. 1,934 ಮುಚ್ಚಿದ್ದು, 3,671 ಗುಂಡಿಗಳು ಬಾಕಿ ಇವೆ.

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ರಸ್ತೆ ಗುಂಡಿಗಳ ವಿವರ

ವಲಯ	ಗುರುತಿಸಲಾದ ಗುಂಡಿಗಳು	ದುರಸ್ತಿ	ಬಾಕಿ
ಬೊಮ್ಮನಹಳ್ಳಿ	1,409	1,090	319
ದಾಸರಹಳ್ಳಿ	1,918	601	1,317
ಪೂರ್ವ	5,776	4,130	1,646
ಮಹದೇವಪುರ	2,004	1,409	595
ಆರ್.ಆರ್. ನಗರ	3,196	2,351	845
ದಕ್ಷಿಣ	1,915	1,514	401
ಪಶ್ಚಿಮ	4,501	4,079	422
ಯಲಹಂಕ	1,015	592	423
ರಸ್ತೆ ಮೂಲಸೌಕರ್ಯ	3,233	1,556	1,677
ಸಿಇ ಯೋಜನೆ (ಪೈಥಾನ್)	5,605	1,934	3,671
ಒಟ್ಟು	30,572	19,256	11,316

ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ

ವಿಧಾನಸೌಧ ಬಳಿ ದಟ್ಟಣೆ: ಬದಲಿ ಮಾರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರವಾಗಿ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಮಾಡುತ್ತಿರುವ ಸಮಾರಂಭದಿಂದಾಗಿ ವಿಧಾನಸೌಧ ಸುತ್ತಮುತ್ತ ವಾಹನಗಳ ದಟ್ಟಣೆ ಉಂಟಾಗುವ ಸಾಧ್ಯತೆ ಇದೆ.

ಹೀಗಾಗಿ ಸಾರ್ವಜನಿಕರು ಬದಲಿ ಮಾರ್ಗಗಳ ಮೂಲಕ ಸಂಚರಿಸುವಂತೆ ಪೊಲೀಸರು ಕೋರಿದ್ದಾರೆ.

‘ವಿಧಾನಸೌಧ ಬಳಿಯ ಮೀಸೆ ತಿಮ್ಮಯ್ಯ ವೃತ್ತದಿಂದ ಕೆ.ಆರ್. ವೃತ್ತದವರೆಗೆ ಹೆಚ್ಚು ದಟ್ಟಣೆ ಉಂಟಾಗಬಹುದು. ಜನರು ಬದಲಿ ಮಾರ್ಗದಲ್ಲಿ ಸಂಚರಿಸಬೇಕು. ಬಿಎಂಟಿಸಿ ಬಸ್ ಹಾಗೂ ಮೆಟ್ರೊ ಹೆಚ್ಚು ಬಳಸಬೇಕು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಇನ್‌ಫೆಂಟ್ರಿ ರಸ್ತೆ, ಅಲಿ ಅಸ್ಕರ್ ರಸ್ತೆ, ಅರಮನೆ ರಸ್ತೆ, ಕಬ್ಬನ್ ರಸ್ತೆ, ರಾಜಭವನ ರಸ್ತೆ, ಕ್ವೀನ್ಸ್ ರಸ್ತೆ ಹಾಗೂ ಕನ್ನಿಂಗ್‌ಹ್ಯಾಮ್ ರಸ್ತೆಗಳಲ್ಲಿ ವಾಹನಗಳ ನಿಲುಗಡೆಯನ್ನೂ ನಿಷೇಧಿಸಲಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.



ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ನಗರದ ವಿಧಾನಸೌಧವು ಸೋಮವಾರ ರಾತ್ರಿ ವಿಶೇಷ ವಿದ್ಯುತ್ ದೀಪಗಳ ಅಲಂಕಾರದಿಂದ ಕಂಗೊಳಿಸಿತು – ಪ್ರಜಾವಾಣಿ ಚಿತ್ರ

ಬಿಬಿಎಂಪಿ ಮುತ್ತಿಗೆ ಯತ್ನ: ಎಎಪಿ ಕಾರ್ಯಕರ್ತರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಸ್ತೆಗುಂಡಿಯಿಂದ ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಿದ್ದು, ಇದಕ್ಕೆಲ್ಲ ಬಿಬಿಎಂಪಿ ಕಾರಣ’ ಎಂದು ಆರೋಪಿಸಿ ಬಿಬಿಎಂಪಿ ಮುಖ್ಯಕಚೇರಿಗೆ ಮುತ್ತಿಗೆ ಹಾಕಿ ಬೀಗ ಜಡಿಯಲು ಹೊರಟಿದ್ದ ಆಮ್ ಆದ್ಮಿ ಪಕ್ಷದ (ಆಪ್) ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಅಟ್ಟೂರು ಮುಖ್ಯರಸ್ತೆಯಲ್ಲಿ ರಸ್ತೆಗುಂಡಿಯಿಂದಾಗಿ ಶನಿವಾರ ರಾತ್ರಿ ಅಪಘಾತ ಸಂಭವಿಸಿ, ಹರ್ಷದ್ ಎಂಬುವರು ಮೃತಪಟ್ಟಿದ್ದರು. ಇದನ್ನು ಖಂಡಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ಹಮ್ಮಿಕೊಂಡಿದ್ದ ಆಪ್ ಕಾರ್ಯಕರ್ತರು, ಬಿಬಿಎಂಪಿ ವಿರುದ್ಧ ಘೋಷಣಾ ಫಲಕ ಪ್ರದರ್ಶಿಸಿದರು.

ಉದ್ಯಾನದಿಂದ ಮೆರವಣಿಗೆ ಆರಂಭಿಸಿದ್ದ ಕಾರ್ಯಕರ್ತರು, ಕಾರ್ಪೊರೇಷನ್ ವೃತ್ತದಲ್ಲಿರುವ ಬಿಬಿಎಂಪಿ ಮುಖ್ಯಕಚೇರಿಯತ್ತ ಹೊರಟಿದ್ದರು. ಮಾರ್ಗಮಧ್ಯೆಯೇ ಅವರನ್ನು ತಡೆದ ಪೊಲೀಸರು, ‘ಉದ್ಯಾನದ ಹೊರಗಡೆ ಪ್ರತಿಭಟನೆ ನಡೆಸಲು ಅವಕಾಶವಿಲ್ಲ. ಹೊರಟು ಹೋಗಿ’ ಎಂದು ಕೋರಿದರು.

ಪೊಲೀಸರ ಮಾತಿಗೆ ಒಪ್ಪದ ಕಾರ್ಯಕರ್ತರು, ಮೆರವಣಿಗೆ ಮುಂದುವರಿಸಿದ್ದರು. ಅವಾಗಲೇ ಪೊಲೀಸರು, 20ಕ್ಕೂ ಹೆಚ್ಚು ಕಾರ್ಯಕರ್ತರನ್ನು ವಶಕ್ಕೆ ಪಡೆದು ಕರೆದೊಯ್ದರು. ಕೆಲಗಂಟೆಗಳ ನಂತರ, ಬಿಡುಗಡೆ ಮಾಡಿದರು.

ಪ್ರತಿಭಟನೆ ವೇಳೆ ಮಾತನಾಡಿದ ಆಪ್ ಬೆಂಗಳೂರು ಘಟಕದ ಅಧ್ಯಕ್ಷ ಮೋಹನ್ ದಾಸರಿ, ‘ರಸ್ತೆಗುಂಡಿಯಿಂದಾಗಿ ಜನ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಇದಕ್ಕೆ ಕಳಪೆ ಕಾಮಗಾರಿ ಕಾರಣ. ಜೊತೆಗೆ, ಅಮಾಯಕರ ಸಾವಿಗೆ ಸರ್ಕಾರವೇ ಹೊಣೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ಮೃತ ವಿದ್ಯಾರ್ಥಿನಿ ಶಿಲ್ಪಶ್ರೀ ಸಹೋದರಿಗೆ ಉಚಿತ ಶಿಕ್ಷಣ

ಬೆಂಗಳೂರು: ಇತ್ತೀಚೆಗೆ ಅಪಘಾತದಲ್ಲಿ ಮೃತಪಟ್ಟ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿನಿ ಶಿಲ್ಪಶ್ರೀ ಸಹೋದರಿಗೆ ಸ್ನಾತಕೋತ್ತರ ಶಿಕ್ಷಣವನ್ನು ಉಚಿತವಾಗಿ ನೀಡಲು ನಿರ್ಧರಿಸಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಶಿಲ್ಪಶ್ರೀ ಸಹೋದರಿ ಸದ್ಯ ಪದವಿ ಅಧ್ಯಯನ ಕೈಗೊಂಡಿದ್ದು, ಸ್ನಾತಕೋತ್ತರ ಪದವಿಯ ಶಿಕ್ಷಣವನ್ನು ಉಚಿತವಾಗಿ ನೀಡಲಾಗುವುದು. ಜತೆಗೆ, ಶಿಲ್ಪಶ್ರೀ ಕುಟುಂಬಕ್ಕೆ ಹಣಕಾಸು ನೆರವು ನೀಡಲು ವಿಶ್ವವಿದ್ಯಾಲಯದ ಎಲ್ಲ ನೌಕರರು ಒಂದು ದಿನದ ವೇತನ ನೀಡಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ನೌಕರರು ಒಂದು ದಿನದ ವೇತನ ನೀಡುವುದು ಕಡ್ಡಾಯವಲ್ಲ. ನಾವು ನೌಕರರಿಗೆ ಮನವಿ ಮಾಡುತ್ತೇವೆ. ಇಚ್ಛೆವುಳ್ಳವರು ಮಾತ್ರ ನೀಡಬಹುದು. ಸಿಂಡಿಕೇಟ್ ಸದಸ್ಯರು ಸಹ ಸಭೆಯ ಗೌರವ ಧನವನ್ನು ದೇಣಿಗೆಯಾಗಿ ನೀಡಲಿದ್ದಾರೆ’ ಎಂದು ಕುಲಪತಿ ಡಾ. ಎಸ್.ಎಂ. ಜಯಕರ್ ತಿಳಿಸಿದ್ದಾರೆ.



ಜಾಗೃತಿ ಜಾಥಾಕ್ಕೆ ಬಲೂನ್ ಹಾರಿ ಬಿಡುವ ಮೂಲಕ ಡಾ.ಮೋನಿಕಾ ಪನಾರಿ ಚಾಲನೆ ನೀಡಿದರು. ಬಿಜು ನಾಯರ್, ಮೋಹನ್ ದೇವೇಗೌಡ, ಅಶ್ವಿನ್ ಕುಮಾರ್, ಡಾ. ಸುಮಲತಾ ವಾಸುದೇವ್, ಜ್ಞಾನಾಕ್ಷಿ ಇದ್ದರು

‘ಆರಂಭಿಕ ಚಿಕಿತ್ಸೆಯಿಂದ ಕ್ಯಾನ್ಸರ್ ಗುಣಮುಖ’

ಕೆಂಗೇರಿ: ಮ್ಯಾಮೋಗ್ರಾಮ್ ಪರೀಕ್ಷೆಗೆ ಸಕಾಲಿಕವಾಗಿ ಒಳಗಾಗುವ ಮೂಲಕ ಸ್ತನ ಕ್ಯಾನ್ಸರ್ ಹರಡುವಿಕೆ ಪ್ರಮಾಣವನ್ನು ಶೇ 65ರಷ್ಟು ತಡೆಗಟ್ಟಬಹುದು ಎಂದು ಬಿಜಿಎಸ್ ಗ್ಲೆನಿಗಲ್ ಗ್ಲೋಬಲ್ ಆಸ್ಪತ್ರೆ ಕ್ಯಾನ್ಸರ್ ವಿಭಾಗದ ಮುಖ್ಯಸ್ಥೆ ಡಾ.ಮೋನಿಕಾ ಪನಾರಿ ಹೇಳಿದರು.

ಸ್ತನ ಕ್ಯಾನ್ಸರ್ ದಿನಾಚರಣೆ ಅಂಗವಾಗಿ ಕೆಂಗೇರಿ ಸಮೀಪದ ಬಿಜಿಎಸ್ ಗ್ಲೆನಿಗಲ್ಸ್ ಗ್ಲೋಬಲ್ ಹಾಸ್ಪಿಟಲ್‌ನಲ್ಲಿ ಆಯೋಜಿಸಿದ್ದ ಪಿಂಕ್ ಮ್ಯಾರಥಾನ್ ಜಾಗೃತಿ ಜಾಥಾಗೆ ಚಾಲನೆ ನೀಡಿ ಅವರು ಮಾತನಾಡಿದರು.

ವಯೋಸಹಜ ಹಾಗೂ ಆನುವಂಶಿಕ ರೂಪಾಂತರ ಕ್ರಿಯೆಯಿಂದ ಸ್ತನ ಕ್ಯಾನ್ಸರ್ ತಗಲುತ್ತದೆ. 40 ವರ್ಷ ದಾಟಿದ ಮಹಿಳೆಯರು ನಿಯಮಿತವಾಗಿ ಮ್ಯಾಮೋಗ್ರಾಮ್ ಪರೀಕ್ಷೆಗೆ ಒಳಗಾಗುವುದು ಅವಶ್ಯ ಎಂದು ಹೇಳಿದರು.

ಕ್ಲಸ್ಟರ್ ಸಿಒಒ ಬಿಜು ನಾಯರ್ ಮಾತನಾಡಿ, ‘ಆರಂಭಿಕ ಹಂತದಲ್ಲಿ ಕ್ಯಾನ್ಸರ್ ಗುಣಪಡಿಸಬಹುದಾಗಿದೆ. ತಿಳಿವಳಿಕೆ ಕೊರತೆ ಹಾಗೂ ಉದಾಸೀನದಿಂದ ರೋಗ ಉಲ್ಬಣಗೊಂಡ ನಂತರ ಚಿಕಿತ್ಸೆಗೆ ಮುಂದಾದರೆ ರೋಗಿಯ ಭವಿಷ್ಯವು ಮಸುಕಾಗುವ ಆತಂಕವಿದೆ’ ಎಂದು ಹೇಳಿದರು.

ಮಲೆಮಹದೇಶ್ವರ ಬೆಟ್ಟದಿಂದ ಚಾಲನೆ

ಕೆಆರ್‌ಎಸ್ ಪಕ್ಷದಿಂದ 13 ದಿನಗಳ ‘ಕನ್ನಡೋತ್ಸವ’ ಆಚರಣೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ರಾಜ್ಯೋತ್ಸವದ ಅಂಗವಾಗಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದಿಂದ (ಕೆಆರ್‌ಎಸ್) ಒಂದು ತಿಂಗಳ ಕಾಲ ಕನ್ನಡೋತ್ಸವದ ಹೆಸರಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

‘ಕೆಆರ್‌ಎಸ್ ಪಕ್ಷದ ಅಧ್ಯಕ್ಷರಾದ ರವಿ ಕೃಷ್ಣಾರೆಡ್ಡಿ ಅವರ ನೇತೃತ್ವದಲ್ಲಿ 13 ದಿನಗಳ ಕಾಲ ರಾಜ್ಯದಾದ್ಯಂತ ಪ್ರವಾಸ ಕಾರ್ಯಕ್ರಮ ಆಯೋಜಿಸಲಾಗಿದೆ. ಕರ್ನಾಟಕವನ್ನು ಏಕೀಕರಣ ಮಾಡಿದ ಮಹನೀಯರ ಜನ್ಮಭೂಮಿಗೆ ಭೇಟಿ ನೀಡಿ , ಅವರನ್ನು ಸ್ಮರಿಸಿ ಜನಜಾಗೃತಿ ಮೂಡಿಸಲಾಗುವುದು’ ಎಂದು ಪಕ್ಷದ ಕಾರ್ಯದರ್ಶಿ ಬಿ.ಎಸ್ ಮಲ್ಲಿಕಾರ್ಜುನ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು

‘ಈ ಯಾತ್ರೆಯ ವೇಳೆಯಲ್ಲಿ ಕನ್ನಡ ಭಾಷೆಯನ್ನು ಬದುಕಿನ ಹಾಗೂ ಜೀವನೋಪಾಯದ ಭಾಷೆ ಮಾಡಿಕೊಳ್ಳುವ ಕುರಿತು ಚರ್ಚೆ, ಸಂವಾದ ಮತ್ತು ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ’ ಎಂದರು.

ರಾಜ್ಯದಲ್ಲಿರುವ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸಬೇಕು. ಕನ್ನಡ ಬಾರದ ಅಧಿಕಾರಿಗಳು ಮತ್ತು ಹಿಂದಿ ಹೇರಿಕೆ ವಿರುದ್ಧ ಪ್ರತಿಭಟನೆ ನಡೆಸಲಾಗುವುದು. ನಾಡಿನ ವಿವಿಧೆಡೆ ಇರುವ ಆರ್ಥಿಕತೆಯ ಸಂಪನ್ಮೂಲಗಳು, ಭವಿಷ್ಯದ ಅವಕಾಶಗಳ ಅನ್ವೇಷಣೆ ಕುರಿತು ಚಿಂತನೆ ನಡೆಸಲಾಗುವುದು ಎಂದು ತಿಳಿಸಿದರು.

‘ಈ ಕನ್ನಡೋತ್ಸವ ಯಾತ್ರೆಯನ್ನು ಮಂಟೇಸ್ವಾಮಿ ಮತ್ತು ಮಾದಪ್ಪರ ಮಲೆಮಹದೇಶ್ವರ ಬೆಟ್ಟದಿಂದ ಚಾಲನೆ ನೀಡಲಾಗುವುದು. ರಾಜ್ಯದಾದ್ಯಂತ ಸಂಚರಿಸಿ ಬೆಂಗಳೂರಿನಲ್ಲಿರುವ ಡಾ.ರಾಜ್‌ಕುಮಾರ್ ಅವರ ಸಮಾಧಿಗೆ ಬಂದು ಸಂಪನ್ನವಾಗಲಿದೆ’ ಎಂದು ಹೇಳಿದರು.

ರಾಜ್ಯ ಕಾರ್ಯದರ್ಶಿ ಬಿ.ಕೆ. ಪ್ರಸನ್ನ, ಸಂಘಟನಾ ಕಾರ್ಯದರ್ಶಿ ಗಂಗಾಧರ್ ಕರಿಕರೆ ಎಲ್. ಜೀವನ್, ಪ್ರವೀಣ್ ಭೈರಪ್ಪ ಇದ್ದರು.

ಮಾನಸಿಕ ಆರೋಗ್ಯ ಸಂತೆ ನ.3ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವ ಕುರಿತು ಅರಿವು ಮೂಡಿಸುವ ‘ಮಾನಸಿಕ ಆರೋಗ್ಯ ಸಂತೆ’ ನ.3ರಂದು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯಲ್ಲಿ (ನಿಮ್ಹಾನ್ಸ್) ನಡೆಯಲಿದೆ.

‘ನಿಮ್ಹಾನ್ಸ್‌ನ ಕನ್ವೆನ್ಷನ್ ಸೆಂಟರ್‌ನಲ್ಲಿ ಅಂದು ಬೆಳಿಗ್ಗೆ 10 ರಿಂದ ಸಂಜೆ 4.30ರವರೆಗೆ ಈ ಸಂತೆ ನಡೆಯಲಿದೆ. ಸಾರ್ವಜನಿಕರು ಮುಕ್ತವಾಗಿ ಪಾಲ್ಗೊಳ್ಳಬಹುದಾಗಿದೆ’ ಎಂದು ನಿಮ್ಹಾನ್ಸ್ ನಿರ್ದೇಶಕಿ ನಿರ್ವೇಶಕಿ ಡಾ. ಪ್ರತಿಮಾ ಮೂರ್ತಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಇಂದಿಗೂ ಜನರು ಮಾನಸಿಕ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯಲು ಹಿಂಜರಿಯುತ್ತಿದ್ದಾರೆ. ಹೀಗಾಗಿ, ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವ ಮಹತ್ವದ ಬಗ್ಗೆ ಅರಿವು ಮೂಡಿಸುವ ಅಗತ್ಯ ಇದೆ. ದೈಹಿಕ ಆರೋಗ್ಯದ ಜತೆಗೆ ಮಾನಸಿಕ ಆರೋಗ್ಯವೂ ಅತಿ ಮುಖ್ಯ. ವಿವಿಧ ಸಂಸ್ಥೆಗಳಿಂದ ಲಭ್ಯವಿರುವ ಸೇವೆಗಳ ಬಗ್ಗೆ ಮಾಹಿತಿ ನೀಡಲು ಮತ್ತು ಜನರಲ್ಲಿ ಮಾನಸಿಕ ಆರೋಗ್ಯ ಸಾಕ್ಷರತೆಯನ್ನು ಹೆಚ್ಚಿಸಲು ಈ ಸಂತೆ ಆಯೋಜಿಸಲಾಗಿದೆ’ ಎಂದು ವಿವರಿಸಿದರು.

‘ಮಾನಸಿಕ ಆರೋಗ್ಯವು ಆರೋಗ್ಯವು ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾದ ಕ್ಷೇತ್ರಗಳಲ್ಲಿ ಒಂದಾಗಿದೆ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡುತ್ತಿಲ್ಲ. 18 ವರ್ಷ ಮೇಲ್ಪಟ್ಟ ಶೇ 11ರಷ್ಟು ಭಾರತೀಯರು ಮಾನಸಿಕ ಸಮಸ್ಯೆಗಳಿಗೆ ಅಗತ್ಯ ಚಿಕಿತ್ಸೆ ಪಡೆಯುವಲ್ಲಿ ವಿಫಲರಾಗಿದ್ದಾರೆ ಎಂದು ಇತ್ತೀಚಿನ ಅಧ್ಯಯನವೊಂದು ಬಹಿರಂಗಪಡಿಸಿದೆ. ಹಾಗಾಗಿ, ಮಾನಸಿಕ ಆರೋಗ್ಯದ ಬಗೆಗಿನ ತಿಳಿವಳಿಕೆಯ ಕೊರತೆ ನಿವಾರಿಸಿ, ಸಮಸ್ಯೆಗಳನ್ನು ಗುರುತಿಸುವುದು ಹಾಗೂ ಚಿಕಿತ್ಸೆ ಕುರಿತು ಅರಿವು ಮೂಡಿಸಬೇಕಿದೆ. ಈ ನಿಟ್ಟಿನಲ್ಲಿ ಸಂತೆ ಸಹಕಾರಿಯಾಗಲಿದೆ’ ಎಂದು ತಿಳಿಸಿದರು.

ಡಿ.5ಕ್ಕೆ ಘಟಿಕೋತ್ಸವ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ 57ನೇ ವಾರ್ಷಿಕ ಘಟಿಕೋತ್ಸವ ಡಿ.5ರಂದು ನಡೆಯಲಿದೆ.

ಸೆಂಟ್ರಲ್ ಕಾಲೇಜು ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಅಂದು ಬೆಳಿಗ್ಗೆ 11ಕ್ಕೆ ನಡೆಯಲಿದೆ. ವಿಶ್ವವಿದ್ಯಾಲಯದ ಧನಸಹಾಯ ಆಯೋಗದ ಅಧ್ಯಕ್ಷ ಪ್ರೊ. ಎಂ. ಜಗದೀಶ್ ಕುಮಾರ್ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ- ಎಂದು ಕುಲಸಚಿವರು ತಿಳಿಸಿದ್ದಾರೆ.

ಜೀವಿತ ದೃಢೀಕರಣ ಪತ್ರಕ್ಕೆ ಸೂಚನೆ: ಬೆಂಗಳೂರು ವಿಶ್ವವಿದ್ಯಾಲಯದ ಪಿಂಚಣಿದಾರರು ಡಿ.31ರ ಒಳಗೆ ಜೀವಿತ ದೃಢೀಕರಣ ಪತ್ರ ಸಲ್ಲಿಸಲು ಸೂಚಿಸಿದೆ.

ದೃಢೀಕರಣ ಪತ್ರವನ್ನು ಪಿಂಚಣಿ ಖಾತೆ ಹೊಂದಿರುವ ಬ್ಯಾಂಕ್ ಶಾಖಾ ಅಧಿಕಾರಿಗಳಿಂದ ಅಥವಾ ಬೆಂಗಳೂರು ವಿಶ್ವವಿದ್ಯಾಲಯದ ಅಧಿಕಾರಿಗಳಿಂದ ದೃಢೀಕರಿಸಿ ಹಣಕಾಸು ಅಧಿಕಾರಿಗಳಿಗೆ ಅಂಚೆ ಮೂಲಕ ಅಥವಾ ವಿಶ್ವವಿದ್ಯಾಲಯದ ಪಿಂಚಣಿ ವಿಭಾಗಕ್ಕೆ ಖುದ್ದಾಗಿ ಸಲ್ಲಿಸಬೇಕು ಎಂದು ಕುಲಸಚಿವರು ತಿಳಿಸಿದ್ದಾರೆ.

ಜೆ. ಮಂಜುನಾಥ್ ಆರೋಗ್ಯ ಇಲಾಖೆಗೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿದ್ದಾಗ ಲಂಚ ಪ್ರಕರಣದಲ್ಲಿ ಬಂಧಿತರಾಗಿ ಅಮಾನತುಗೊಂಡಿದ್ದ ಜೆ.ಮಂಜುನಾಥ್ ಅವರಿಗೆ ಆರೋಗ್ಯ ಇಲಾಖೆ ವಿಶೇಷಾಧಿಕಾರಿ ಹುದ್ದೆ ನೀಡಲಾಗಿದೆ. ಅವರೂ ಸೇರಿದಂತೆ ಎಂಟು ಐಎಎಸ್ ಹಾಗೂ 11 ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ.

ಐಎಎಸ್ ಅಧಿಕಾರಿ: ಎಸ್.ಬಿ. ಶೆಟ್ಟಣ್ಣನವರ್–ವ್ಯವಸ್ಥಾಪಕ ನಿರ್ದೇಶಕ, ಹಟ್ಟಿ ಗೋಲ್ಡ್ ಮೈನ್ಸ್. ಅನೀಸ್ ಕಣ್ಮಣಿ ಜಾಯ್–ಹೆಚ್ಚುವರಿ ಆಯುಕ್ತೆ, ವಾಣಿಜ್ಯ ತೆರಿಗೆ(ಜಾರಿ). ಚಾರುಲತಾ ಸೋಮಲ್– ಹೆಚ್ಚುವರಿ ಪ್ರಾದೇಶಿಕ ಆಯುಕ್ತೆ, ಕರ್ನಾಟಕ ಭವನ, ದೆಹಲಿ. ಎಚ್. ಬಸವರಾಜೇಂದ್ರ–ಜಂಟಿ ಕಾರ್ಯದರ್ಶಿ, ಕೌಶಲಾಭಿವೃದ್ಧಿ, ಉದ್ಯಮಶೀಲತೆ, ಜೀವನೋಪಾಯ ಇಲಾಖೆ. ಕವಿತಾ ಮನ್ನಿಕೇರಿ–ಆಯುಕ್ತೆ– ಕರ್ನಾಟಕ ಗೃಹ ಮಂಡಳಿ. ಎಂ.ಆರ್. ರವಿಕುಮಾರ್– ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ. ಬಿ.ವಿ. ವಾಸಂತಿ ಅಮರ್– ವಿಶೇಷ ಜಿಲ್ಲಾಧಿಕಾರಿ–3, ಬೆಂಗಳೂರು ನಗರ ಜಿಲ್ಲೆ(ಉತ್ತರ)

ಐಪಿಎಸ್ ಅಧಿಕಾರಿ: ಮಾಲಿನಿ ಕೃಷ್ಣಮೂರ್ತಿ–ಎಡಿಜಿಪಿ, ಆಂತರಿಕ ಭದ್ರತೆ. ಸೀಮಂತ್ ಕುಮಾರ್ ಸಿಂಗ್–ಎಡಿಜಿಪಿ, ಕೆಎಸ್‌ಆರ್‌ಪಿ. ಎಸ್.ರವಿ–ಕಾರ್ಯದರ್ಶಿ, ಗೃಹ ಇಲಾಖೆ. ಅಜಯ್ ಹಿಲೋರಿ–ಎಸ್‌ಪಿ, ಡಿಸಿಆರ್‌ಇ. ಜಿ.ಎಚ್. ಯತೀಶ್ ಚಂದ್ರ–ಡಿಸಿಪಿ, ಅಪರಾಧ ವಿಭಾಗ–2. ವೈ. ಅಮರನಾಥ ರೆಡ್ಡಿ– ಎಸ್‌ಪಿ, ಗುಪ್ತದಳ, ಕಲಬುರಗಿ. ಬಿ.ಎಲ್. ಶ್ರೀಹರಿ ಬಾಬು–ಎಸ್‌ಪಿ, ಲೋಕಾಯುಕ್ತ. ವಿ.ಜೆ.ಶೋಭಾರಾಣಿ–ಎಸ್‌ಪಿ, ಬಿಎಂಟಿಎಫ್, ಬೆಂಗಳೂರು. ವಿ.ಜೆ. ಸಜೀತ್–ಎಸ್‌ಪಿ, ಲೋಕಾಯುಕ್ತ. ಬಾಬಾಸಾಬ್ ನೇಮಗೌಡ್–ಎಸ್‌ಪಿ, ಗುಪ್ತದಳ, ಬೆಳಗಾವಿ.



ಬಾವುಟದಲ್ಲಿ ಪುನೀತ್...

ಕನ್ನಡ ರಾಜ್ಯೋತ್ಸವ ಅಂಗವಾಗಿ ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರವಿದ್ದ ಕನ್ನಡ ಬಾವುಟವನ್ನು ಸೋಮವಾರ ನಗರದ ಬಿನ್ನಿಮಿಲ್ಸ್ ರಸ್ತೆಯ ಮಳಿಗೆಯಲ್ಲಿ ಸಾರ್ವಜನಿಕರು ಖರೀದಿಸಿ ಪ್ರದರ್ಶಿಸಿದರು. ಪ್ರಜಾವಾಣಿ ಚಿತ್ರ : ಪ್ರಶಾಂತ್ ಎಚ್.ಜಿ.

ಮನೆಮನೆಗೂ ಕನ್ನಡ ಧ್ವಜ, ಸಿಹಿ ತಿನಿಸು

ಬೆಂಗಳೂರು: ನಗರದ ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 67ನೇ ಕನ್ನಡ ರಾಜ್ಯೋತ್ಸವವನ್ನು ಸಂಪೂರ್ಣ ಸಂಭ್ರಮ ಸಡಗರಗಳಿಂದ ಆಚರಿಸಲು ಸೋಮವಾರವಿಡೀ ಭರದ ಸಿದ್ಧತೆಗಳನ್ನು ನಡೆಸಲಾಯಿತು.

ಕ್ಷೇತ್ರದ ಪ್ರತಿ ಮನೆಗೂ ಹಳದಿ-ಕೆಂಪು ಬಣ್ಣಗಳ ಕನ್ನಡ ಧ್ವಜವನ್ನು ಹಾಗೂ ಸಿಹಿ ತಿನಿಸುಗಳನ್ನು ಬಿಜೆಪಿ ಕಾರ್ಯಕರ್ತರು ವಿತರಿಸಿದರು. ರಾಜ್ಯೋತ್ಸವದ ದಿನ ಬೆಳಿಗ್ಗೆ ಮಲ್ಲೇಶ್ವರಂ 18ನೇ ಅಡ್ಡರಸ್ತೆಯಲ್ಲಿರುವ ಗೋಕಾಕ್ ಚಳವಳಿ ಉದ್ಯಾನದಲ್ಲಿ ಕನ್ನಡ ಧ್ವಜಾರೋಹಣವನ್ನು ಸಚಿವ ಡಾ. ಸಿ ಎನ್. ಅಶ್ವತ್ಥ ನಾರಾಯಣ ನೆರವೇರಿಸಲಿದ್ದಾರೆ. ಗಾಯತ್ರೀನಗರ ಮತ್ತು ಸುಬ್ರಹ್ಮಣ್ಯ ನಗರಗಳಲ್ಲಿ ಡಾ.ರಾಜಕುಮಾರ್ ಉದ್ಯಾನ ಮುಂತಾದ ಕಡೆಗಳಲ್ಲಿ ಕನ್ನಡ ಧ್ವಜ ಹಾರಿಸಲಾಗುವುದು.

ವೆಲ್‌ಫೇರ್ ಪಾರ್ಟಿ ಆಫ್ ಇಂಡಿಯಾ ಕಾರ್ಯಕರ್ತರ ಆಕ್ರೋಶ

ಬೆಲೆ ಏರಿಕೆ ಖಂಡಿಸಿ ರಾಷ್ಟ್ರೀಯ ಜನಾಂದೋಲನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಬೆಲೆ ಏರಿಕೆ ಹಾಗೂ ನಿರುದ್ಯೋಗ ಸಮಸ್ಯೆ ಹೆಚ್ಚಳ ಖಂಡಿಸಿ, ವೆಲ್‌ಫೇರ್ ಪಾರ್ಟಿ ಆಫ್ ಇಂಡಿಯಾದಿಂದ ನಗರದ ಫ್ರೀಡಂ ಪಾರ್ಕ್‌ನಲ್ಲಿ ರಾಷ್ಟ್ರೀಯ ಜನಾಂದೋಲನ ನಡೆಯಿತು.

ಪ್ರತಿಭಟನನಿರತರು ಹಾಗೂ ಕಾಲೇಜಿನ ವಿದ್ಯಾರ್ಥಿಗಳು ‘ಉದ್ಯೋಗ ಕೊಡಿ’, ‘ಮನ್ ಕೀ ಬಾತ್ ನಹಿ ಕಾಮ್ ಕೀ ಬಾತ್ ಕರೋ’ ಎಂಬ ಭಿತ್ತಿಪತ್ರ ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಅಧ್ಯಕ್ಷ ತಾಹೇರ್ ಹುಸೇನ್ ಮಾತನಾಡಿ, ‘ರಾಜ್ಯ ಸೇರಿ ದೇಶದಾದ್ಯಂತ ನಿರುದ್ಯೋಗ, ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನಸಾಮಾನ್ಯರು ತತ್ತರಿಸುತ್ತಿದ್ದಾರೆ’ ಎಂದು ದೂರಿದರು.



ಬೆಲೆ ಏರಿಕೆ ಖಂಡಿಸಿ ವೆಲ್‌ಫೇರ್ ಪಾರ್ಟಿ ಆಫ್ ಇಂಡಿಯಾದಿಂದ ನಗರದ ಫ್ರೀಡಂ ಪಾರ್ಕ್‌ನಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು.

‘ನಿರುದ್ಯೋಗ ಸಮಸ್ಯೆಯಿಂದ ಅನೇಕ ಯುವಕರು ಆತ್ಮಹತ್ಯೆಗೆ ಗುರಿಯಾಗಿದ್ದಾರೆ’ ಎಂದರು.

‘ಅನೇಕರು ಪಡಿತರ ಚೀಟಿಯಿಂದ ವಂಚಿತರಾಗಿದ್ದಾರೆ. ಸರ್ಕಾರ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಉಜ್ವಲ ಯೋಜನೆಯ ಅಡಿ 9 ಕೋಟಿ ಜನರಿಗೆ ಸಿಲಿಂಡರ್ ನೀಡಿದ್ದೇವೆ ಎಂದು ಜಾಹೀರಾತು ನೀಡಿದೆ. ಆದರೆ, ವಾಸ್ತವವಾಗಿ ಕರ್ನಾಟಕ ರಾಜ್ಯದಲ್ಲಿ ಅನೇಕರಿಗೆ ಗ್ಯಾಸ್ ಸಿಲಿಂಡರ್ ಇಲ್ಲ. ಇದ್ದವರಿಗೆ ಸಿಲಿಂಡರ್ ತುಂಬಿಸಲು ಆಗುತ್ತಿಲ್ಲ’ ಎಂದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಹಬೀಬುಲ್ಲ ಖಾನ್ ಮಾತನಾಡಿ, ‘ದೇಶದಲ್ಲಿ ಅನೇಕ ಸಮಸ್ಯೆಗಳಿಂದ ಜನಸಾಮಾನ್ಯರು ಜರ್ಜರಿತರಾಗಿದ್ದಾರೆ. ನಿರುದ್ಯೋಗ ಹಾಗೂ ಬೆಲೆ ಏರಿಕೆಯಿಂದ ಜನಸಾಮಾನ್ಯರಿಗೆ ತೊಂದರೆ ಆಗಿದೆ. ದೇಶದಾದ್ಯಂತ ವೆಲ್‌ಫೇರ್ ಪಾರ್ಟಿಯಿಂದ ಬೀದಿ ನಾಟಕ, ಮನೆ ಮನೆ ಸಮೀಕ್ಷೆ, ಬಸ್ ಮೂಲಕ ಜನ ಜಾಗೃತಿ ಜಾಥಾದ ಮೂಲಕ ಸರ್ಕಾರದ ನಿಲುವು ಖಂಡಿಸಿ ಜನರಲ್ಲಿ ಜಾಗೃತಿ ಮೂಡಿಸಿದ್ದೇವೆ ಎಂದರು.

ಮಹಿಳಾ ವಿಭಾಗದ ರಾಜ್ಯ ಅಧ್ಯಕ್ಷರಾದ ತಲತ್ ಯಾಸ್ಮಿನ್, ಬೆಂಗಳೂರ್ ದಕ್ಷಿಣ ಅಧ್ಯಕ್ಷ ಸಫೀರ್ ಆಸಿಫ್ ಹಾಗೂ ಖಾಲಿದ್ ಖಾನ್ ಹಾಜರಿದ್ದರು.

ಮಂಗಳವಾರ, ನವೆಂಬರ್ 1, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 301 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,746 ▲	18,012 ▲	₹51,950	₹58,900 (ಬೆಂಗಳೂರು)	82.81 ▼

ಅಮೃತ ಮಹೋತ್ಸವದ ರಾಜ್ಯೋತ್ಸವ



ಪ್ರಜಾವಾಣಿ ಪತ್ರಿಕೆಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ನಡೆಯುತ್ತಿರುವ ರಾಜ್ಯೋತ್ಸವ ಸಂಭ್ರಮದ ಪ್ರಯುಕ್ತ ವಿಶೇಷ ಲೇಖನ ಪುಟ 7

ಮೊರ್ಬಿ ತೂಗುಸೇತುವೆ ದುರಂತ: ತನಿಖೆಗೆ ಸಮಿತಿ, 9 ಜನರ ಬಂಧನ

ಸತ್ತವರ ಸಂಖ್ಯೆ 136ಕ್ಕೆ ಏರಿಕೆ

ಮೊರ್ಬಿ (ಪಿಟಿಐ/ಎಎಫ್‌ಪಿ): ಗುಜರಾತ್‌ನ ಮೊರ್ಬಿ ತೂಗುಸೇತುವೆ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ ಸೋಮವಾರ ಸಂಜೆಯ ವೇಳೆಗೆ 136ಕ್ಕೆ ಏರಿಕೆಯಾಗಿದೆ. ನಾಪತ್ತೆಯಾಗಿರುವವರ ಶೋಧಕಾರ್ಯ ಮುಂದುವರಿದಿದೆ.

ದುರಂತಕ್ಕೆ ಸಂಬಂಧಿಸಿದಂತೆ ಮೊರ್ಬಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದು, ಈವರೆಗೆ ಒಂಬತ್ತು ಮಂದಿಯನ್ನು ಬಂಧಿಸಿದ್ದಾರೆ. ಅವಘಡದ ತನಿಖೆಗೆ ರಾಜ್ಯ ಸರ್ಕಾರವು ತನಿಖಾ ತಂಡವನ್ನು ರಚಿಸಿದೆ.

ನಾಪತ್ತೆಯಾಗಿರುವವರ ಕುಟುಂಬದ ಸದಸ್ಯರು ಅವಘಡದ ಸ್ಥಳದಲ್ಲಿ ಮತ್ತು ಆಸ್ಪತ್ರೆ ಎದುರು ಗೋಳಾಡುತ್ತಿದ್ದಾರೆ. ಸೇತುವೆಗೆ ಸಮೀಪದಲ್ಲೇ ಇರುವ ರುದ್ರಭೂಮಿಯಲ್ಲಿ ಸೋಮವಾರವೇ 100ಕ್ಕೂ ಹೆಚ್ಚು ಜನರ ಅಂತ್ಯಕ್ರಿಯೆ ನಡೆಸಲಾಗಿದೆ. ಆಂಬುಲೆನ್ಸ್‌ಗಳು ಘಟನಾ ಸ್ಥಳದಿಂದ ಆಸ್ಪತ್ರೆಗೆ, ಆಸ್ಪತ್ರೆಯಿಂದ ರುದ್ರಭೂಮಿಗೆ ಎಡೆಬಿಡದೆ ಸಂಚರಿಸಿವೆ.

ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಮತ್ತು ಗೃಹ ಸಚಿವ ಹರ್ಷ ಸಂಘ್ವಿ ಅವರು ಸ್ಥಳದಲ್ಲೇ ಇದ್ದು, ರಕ್ಷಣಾ ಕಾರ್ಯಾಚರಣೆಯ ಮೇಲ್ವಿಚಾರಣೆ ನಡೆಸುತ್ತಿದ್ದಾರೆ. ಭಾನುವಾರ ಸಂಜೆ ಆರಂಭವಾದ ಶೋಧ ಕಾರ್ಯವು ಸೋಮವಾರ ರಾತ್ರಿಯೂ ಮುಂದುವರಿದಿತ್ತು.

ಈವರೆಗೆ ಒಟ್ಟು 136 ಶವಗಳನ್ನು ಹೊರಗೆ ತೆಗೆಯಲಾಗಿದೆ. ಮೃತರಲ್ಲಿ 50 ಮಕ್ಕಳು ಮತ್ತು 40 ಮಹಿಳೆಯರು ಸೇರಿದ್ದಾರೆ. ರಕ್ಷಣಾ ಕಾರ್ಯದಲ್ಲಿ ಈವರೆಗೆ ಒಟ್ಟು 170 ಜನರನ್ನು ರಕ್ಷಿಸಲಾಗಿದೆ. ಅವರಿಗೆ ಮೊರ್ಬಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದ್ದು, ಹಲವರು ಚಿಕಿತ್ಸೆ ಪಡೆದು ಮನೆಗೆ ಮರಳಿದ್ದಾರೆ. ಅವಘಡದಲ್ಲಿ ಇನ್ನೂ ಎಷ್ಟು ಮಂದಿ ನಾಪತ್ತೆಯಾಗಿದ್ದಾರೆ ಎಂಬ ಮಾಹಿತಿ ಲಭ್ಯವಿಲ್ಲ. ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಮೊರ್ಬಿ ಜಿಲ್ಲಾಡಳಿತವು ಹೇಳಿದೆ.

ಅವಘಡದ ಸಂಬಂಧ ಮೊರ್ಬಿ 'ಬಿ' ವಿಭಾಗೀಯ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಸೇತುವೆಯ ನಿರ್ವಹಣೆಯ ಗುತ್ತಿಗೆ ಪಡೆದಿದ್ದ ಒರೆವಾ ಗ್ರೂಪ್ ಕಂಪನಿಯ ನಾಲ್ವರು ನೌಕರರು ಸೇರಿ ಒಂಬತ್ತು ಜನರನ್ನು ಪೊಲೀಸರು ಬಂಧಿಸಿದ್ದಾರೆ. ಸೇತುವೆಯ ಮೇಲ್ವಿಚಾರಣೆಯ ಜವಾಬ್ದಾರಿ ಹೊತ್ತಿದ್ದ ಇಬ್ಬರು ನಿರ್ವಾಹಕರು ಮತ್ತು ಟಿಕೆಟ್ ನೀಡುವ ಇಬ್ಬರು ಸಿಬ್ಬಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಒರೆವಾ ಕಂಪನಿಯ ನೌಕರರ ನಿರ್ಲಕ್ಷ್ಯದಿಂದಲೇ ಅವಘಡ ಸಂಭವಿಸಿದೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ನವೀಕರಣ ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಂಡಿಲ್ಲ. ಸೇತುವೆಯು ಬಳಕೆಗೆ ಯೋಗ್ಯವಾಗಿದೆಯೇ ಎಂಬುದಕ್ಕೆ ಪ್ರಮಾಣಪತ್ರ ಪಡೆದಿಲ್ಲ.

9ನೇ ಪುಟ ನೋಡಿ



ಮೊರ್ಬಿಯ ಮಚ್ಚು ನದಿಯ ತೂಗುಸೇತುವೆ ಕುಸಿದ ಸ್ಥಳದಲ್ಲಿ ಸೋಮವಾರ ರಕ್ಷಣಾ ಕಾರ್ಯ ನಡೆಯಿತು —ಪಿಟಿಐ ಚಿತ್ರ

ರಾಜ್ಯದಲ್ಲಿವೆ ಶಿಥಿಲಾವಸ್ಥೆಯ 56 ಸೇತುವೆಗಳು

ಬೆಂಗಳೂರು: ರಾಜ್ಯದಾದ್ಯಂತ 56 ಸೇತುವೆಗಳು ಶಿಥಿಲಾವಸ್ಥೆಯಲ್ಲಿದ್ದು ಅವುಗಳನ್ನು ಬಲಪಡಿಸುವಂತೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ (ಕೆಆರ್‌ಡಿಸಿಎಲ್) ಸರ್ಕಾರಕ್ಕೆ ವರದಿ ನೀಡಿದೆ.

ಕಳೆದ ಬಜೆಟ್‌ನಲ್ಲಿ (2022–23) ಈ ಬಗ್ಗೆ ವಿವರವಾದ ಕಾರ್ಯ ಸಾಧ್ಯತಾ ವರದಿ (ಡಿಎಫ್‌ಆರ್) ತಯಾರಿಸಲು ನಿಗಮಕ್ಕೆ ಸರ್ಕಾರ ನಿರ್ದೇಶನ ನೀಡಿತ್ತು. ಆದರೆ, ಈವರೆಗೆ ಅನುದಾನ ಹಂಚಿಕೆ ಮಾಡಿಲ್ಲ.

'ನಾವು ವಿವರವಾದ ಕಾರ್ಯ ಸಾಧ್ಯತಾ ವರದಿಯನ್ನು ಸಿದ್ಧಪಡಿಸಿ ಮೂರು ತಿಂಗಳ ಹಿಂದೆಯೇ ಸರ್ಕಾರಕ್ಕೆ ಸಲ್ಲಿಸಿದ್ದೇವೆ. ಆದರೆ, ಹಣ ಮಂಜೂರಾಗಿಲ್ಲ. ಅಲ್ಲದೆ ಯೋಜನೆಗೆ ಸಚಿವ ಸಂಪುಟ ಸಭೆ ಅನುಮೋದನೆ ಅಗತ್ಯವಿದೆ' ಎಂದು ನಿಗಮದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಈ ಸೇತುವೆಗಳ ಪೈಕಿ, ಕೆಲ ಸೇತುವೆಗಳಲ್ಲಿ ವಾಹನ ಸಂಚಾರ ನಿಷೇಧಿಸಲಾಗಿದೆ. ಕೆಲ ಸೇತುವೆಗಳು ವಾಹನ ಸಂಚಾರಕ್ಕೆ ಮುಕ್ತವಾಗಿದ್ದು, ಅಪಾಯದ ಸ್ಥಿತಿಯಲ್ಲಿವೆ. ದುರಸ್ತಿ ಕಾಮಗಾರಿಯನ್ನು ಅತಿ ಶೀಘ್ರ ಕೈಗೊಳ್ಳಬೇಕಿದೆ. ಈ ಪಟ್ಟಿಯಲ್ಲಿರುವ ಹಲವು ಸೇತುವೆಗಳು 50 ವರ್ಷಗಳ ಹಿಂದೆಯೇ ನಿರ್ಮಾಣವಾಗಿದ್ದು, ವಾಹನಗಳ ಸಂಚಾರ ದಟ್ಟಣೆಯಿಂದ ದುರ್ಬಲಗೊಂಡಿವೆ' ಎಂದೂ ಅವರು ಹೇಳಿದರು.

ಮೀಸಲಾತಿ: ಇಂದಿನಿಂದ ಜಾರಿ

ಸರ್ಕಾರದಿಂದ ಅಧಿಸೂಚನೆ, ಅನುಷ್ಠಾನ ಕುರಿತು ಗೊಂದಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ ಮತ್ತು ಉದ್ಯೋಗದಲ್ಲಿ ಪರಿಶಿಷ್ಟ ಜಾತಿಗೆ (ಎಸ್‌ಸಿ) ಶೇ 17, ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಶೇ 7 ಮೀಸಲಾತಿಯನ್ನು ರಾಜ್ಯೋತ್ಸವ ದಿನವಾದ ಮಂಗಳವಾರದಿಂದಲೇ (ನ.1) ಅನ್ವಯವಾಗುವಂತೆ ರಾಜ್ಯ ಸರ್ಕಾರ ಜಾರಿ ಮಾಡಿ ಸೋಮವಾರ ಅಧಿಸೂಚನೆ ಹೊರಡಿಸಿದೆ.

ಆದರೆ, ಹೆಚ್ಚಳಗೊಳಿಸಿದ ಮೀಸಲಾತಿಯನ್ನು ಅನುಷ್ಠಾನಗೊಳಿಸುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ಈ ಅಧಿಸೂಚನೆಯಲ್ಲಿ ಯಾವುದೇ ಸ್ಪಷ್ಟತೆ ಇಲ್ಲ. ಹೀಗಾಗಿ, ಅಧಿಸೂಚನೆ ಜಾರಿಗೊಳಿಸುವ ಬಗ್ಗೆ ಗೊಂದಲವಿದೆ ಎಂದು ಹೆಸರು ಬಹಿರಂಗ ಪಡಿಸಲು ಬಯಸದ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಮೀಸಲಾತಿಯನ್ನು ಹೆಚ್ಚಿಸಿ ರಾಜ್ಯ ಸರ್ಕಾರ ಹೊರಡಿಸಿದ್ದ ಸುಗ್ರೀವಾಜ್ಞೆಯಲ್ಲಿರುವ ಎಲ್ಲ ಉಪಬಂಧಗಳನ್ನು ಅನುಷ್ಠಾನಗೊಳಿಸಬೇಕು' ಎಂದು ಸಮಾಜ ಕಲ್ಯಾಣ ಇಲಾಖೆ ಅಧಿಸೂಚನೆಯಲ್ಲಿ ತಿಳಿಸಿದೆ. ಎಲ್ಲ ಇಲಾಖೆಗಳ ಮುಖ್ಯಸ್ಥರು, ವಿಶ್ವವಿದ್ಯಾಲಯಗಳು, ಶಿಕ್ಷಣ ಸಂಸ್ಥೆಗಳು, ನಿಗಮ, ಮಂಡಳಿ, ಆಯೋಗ, ಸರ್ಕಾರದ ಅಧೀನ ಸಂಸ್ಥೆಗಳು, ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಕಾರ್ಯದರ್ಶಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕರಿಗೆ ಅಧಿಸೂಚನೆಯನ್ನು ಇಲಾಖೆ ಕಳುಹಿಸಿದೆ.

ಸುಗ್ರೀವಾಜ್ಞೆಯ ಪ್ರಕಾರ, ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳವು ರಾಜ್ಯ ಸರ್ಕಾರದ ಅಥವಾ ಅನುದಾನಿತ ಎಲ್ಲಾ ಶಾಲೆ, ಕಾಲೇಜು ಅಥವಾ ಇತರ ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿಗೆ ಅನ್ವಯ ಆಗಲಿದೆ. ಅಲ್ಲದೆ, ರಾಜ್ಯ ಸರ್ಕಾರಿ ಅಂದರೆ, ಸರ್ಕಾರ, ವಿಧಾನಮಂಡಲ, ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮ ಅಥವಾ

8ನೇ ಪುಟ ನೋಡಿ

'ಹೊಸ ನೇಮಕಾತಿಗಳಿಗೆ ಅನ್ವಯ'

'ಎಸ್‌ಸಿ, ಎಸ್‌ಟಿ ಸಮುದಾಯದವರಿಗೆ ಹೆಚ್ಚಳಗೊಳಿಸಿದ ಮೀಸಲಾತಿ ಪ್ರಮಾಣ ನ. 1ರಿಂದ ಜಾರಿಯಾಗಲಿದ್ದು, ಅಂದಿನಿಂದ ಹೊರಡಿಸುವ ನೇಮಕಾತಿ ಅಧಿಸೂಚನೆಗಳಿಗೆ ಅನ್ವಯ ಆಗಲಿದೆ' ಕೆಪಿಎಸ್‌ಸಿ ಕಾರ್ಯದರ್ಶಿ ವಿಕಾಸ್ ಕಿಶೋರ್ ಸುರಳ್ಕರ್ ಹೇಳಿದರು.

'ಹುದ್ದೆಗಳ ಭರ್ತಿಗೆ ಈಗಾಗಲೇ ಹೊರಡಿಸಿದ ಅಧಿಸೂಚನೆಗಳು ಮತ್ತು ನೇಮಕಾತಿ ಪ್ರಕ್ರಿಯೆಯ ವಿವಿಧ ಹಂತಗಳಲ್ಲಿರುವ ಅಧಿಸೂಚನೆಗಳಲ್ಲಿ ಈ ಹಿಂದಿನಂತೆಯೇ ಮೀಸಲಾತಿ ಪ್ರಮಾಣವನ್ನು ಪ್ರವರ್ಗವಾರು (ಕೆಟಗರಿ) ನಿಗದಿಪಡಿಸಿ, ಪ್ರಕಟಿಸಲಾಗಿದೆ. ನನ್ನ ಪ್ರಕಾರ, ಈಗಾಗಲೇ ಹೊರಡಿಸಿರುವ ನೇಮಕಾತಿ ಅಧಿಸೂಚನೆಗಳಿಗೆ ಹೆಚ್ಚಳಗೊಳಿಸಿದ ಮೀಸಲಾತಿ ಪ್ರಮಾಣ ಅನ್ವಯಿಸುವುದಿಲ್ಲ' ಎಂದರು.

ಡಿಜಿಟಲ್ ರೂಪಾಯಿ: ಇಂದಿನಿಂದ ಪ್ರಾಯೋಗಿಕ ಬಳಕೆ

ಮುಂಬೈ (ಪಿಟಿಐ): ದೇಶದ ಮೊದಲ ಡಿಜಿಟಲ್ ರೂಪಾಯಿಯ ಪ್ರಾಯೋಗಿಕ ಬಳಕೆಯು ಮಂಗಳವಾರದಿಂದ ಆರಂಭವಾಗಲಿದೆ. ಆರಂಭಿಕ ಹಂತದಲ್ಲಿ ಸರ್ಕಾರಿ ಟ್ರೆಷರಿ ಬಿಲ್, ಬಾಂಡ್ ವಹಿವಾಟುಗಳಲ್ಲಿ ಈ ವರ್ಚುವಲ್ ಕರೆನ್ಸಿ ಬಳಕೆ ಮಾಡಲು ಅವಕಾಶ ಇರಲಿದೆ. ರಿಟೇಲ್ ವಹಿವಾಟು ಕೆಲವೆಡೆ ಒಂದು ತಿಂಗಳಲ್ಲಿ ಆರಂಭವಾಗಲಿದೆ ಎಂದು ಆರ್‌ಬಿಐ ಹೇಳಿದೆ. 9

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕೊಳ್ಳೇಗಾಲ ನಗರಸಭೆ ಉಪಚುನಾವಣೆ: 7ರಲ್ಲಿ 6 ಸ್ಥಾನ ಬಿಜೆಪಿಗೆ

ವಿಜಯಪುರ ಪಾಲಿಕೆ: ಬಿಜೆಪಿ ಪ್ರಾಬಲ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯಪುರ ಮಹಾನಗರ ಪಾಲಿಕೆಗೆ ಅ. 29ರಂದು ನಡೆದ ಚುನಾವಣೆಯಲ್ಲಿ ಬಿಜೆಪಿ ಅಧಿಕ ಸ್ಥಾನಗಳನ್ನು ಗೆದ್ದುಕೊಂಡಿದೆ. ಆದರೆ, ಅಧಿಕಾರ ಹಿಡಿಯಲು ಒಂದು ಸ್ಥಾನದ ಕೊರತೆಯಾಗಿದೆ. ಕೊಳ್ಳೇಗಾಲ ನಗರಸಭೆಯ 7 ಸ್ಥಾನಗಳಿಗೆ ನಡೆದ ಉಪಚುನಾವಣೆಯಲ್ಲಿ ಬಿಜೆಪಿ 6 ಸ್ಥಾನಗಳನ್ನು ಗೆದ್ದಿದೆ.

ವಿಜಯಪುರ ನಗರಸಭೆಯಿಂದ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿದ ಬಳಿಕ ನಡೆದ ಮೊದಲ ಚುನಾವಣೆ ಇದಾಗಿದ್ದು, ಇದೇ ಮೊದಲ ಬಾರಿಗೆ ಬಿಜೆಪಿ ಮೇಲುಗೈ ಸಾಧಿಸಿದೆ.

ಪಾಲಿಕೆಯ 35 ವಾರ್ಡ್‌ಗಳ ಪೈಕಿ 17ರಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯಭೇರಿ ಭಾರಿಸಿದ್ದಾರೆ. ಸರಳ ಬಹುಮತಕ್ಕೆ 18 ಸ್ಥಾನಗಳ ಅಗತ್ಯವಿದೆ. ಕಾಂಗ್ರೆಸ್ ನಿರೀಕ್ಷಿತ ಸ್ಥಾನ ಗಳಿಸುವಲ್ಲಿ ವಿಫಲವಾಗಿದ್ದು, 10 ಸ್ಥಾನಗಳಿಗೆ ತೃಪ್ತಿಪಟ್ಟುಕೊಂಡಿದೆ. ಕಣದಲ್ಲಿ ಅಬ್ಬರದ ಪ್ರಚಾರ, ಪ್ರಣಾಳಿಕೆ ಬಿಡುಗಡೆ ಮಾಡಿ ಗಮನ ಸೆಳೆದಿದ್ದ ಆಮ್ ಆದ್ಮಿ ಪಕ್ಷ ಹಾಗೂ ಕರ್ನಾಟಕ ರಾಷ್ಟ್ರ ಸಮಿತಿಗೆ ಖಾತೆ ತೆರೆಯಲು ಸಾಧ್ಯವಾಗಿಲ್ಲ. ಬಿಜೆಪಿ ಗೆಲುವಿಗೆ ಶ್ರಮಿಸಿದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿನಂದಿಸಿದ್ದಾರೆ.

ಕೊಳ್ಳೇಗಾಲದಲ್ಲಿ ಬಿಜೆಪಿ ಮೇಲುಗೈ: ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲದ ನಗರಸಭೆಯಲ್ಲಿ ಏಳು ಸ್ಥಾನಗಳಿಗೆ ನಡೆದ ಉಪಚುನಾವಣೆಯಲ್ಲಿ ಬಿಜೆಪಿ ಆರು ಸ್ಥಾನಗಳನ್ನು ಗೆದ್ದುಕೊಂಡಿದ್ದು, ಕಾಂಗ್ರೆಸ್ ಒಂದು ಸ್ಥಾನಕ್ಕೆ ಮಾತ್ರ ತೃಪ್ತಿಪಟ್ಟುಕೊಂಡಿದೆ. ಬಹುಜನ ಸಮಾಜ ಪಕ್ಷದ ವಿಪ್ ಉಲ್ಲಂಘಿಸಿದ ಕಾರಣಕ್ಕೆ ಸದಸ್ಯತ್ವದಿಂದ ಅನರ್ಹಗೊಂಡಿದ್ದ ಏಳು ಸದಸ್ಯರ ಪೈಕಿ ಐವರು ಉಪ ಚುನಾವಣೆಯಲ್ಲಿ ಬಿಜೆಪಿಯಿಂದ ಗೆಲುವು ಸಾಧಿಸಿದ್ದಾರೆ.

2020ರ ಅಕ್ಟೋಬರ್‌ನಲ್ಲಿ ನಗರಸಭೆ ಹಾಗೂ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ಬಿಎಸ್‌ಪಿಯ ವಿಪ್ ಉಲ್ಲಂಘಿಸಿದ್ದ ಏಳು ಸದಸ್ಯರು ಬಿಜೆಪಿ ಸದಸ್ಯರೊಂದಿಗೆ ಕೈಜೋಡಿಸಿ ನಗರಸಭೆಯ ಅಧಿಕಾರ ಹಿಡಿದಿದ್ದರು.

5ನೇ ಪುಟ ನೋಡಿ

ಅತ್ಯಾಚಾರ– 'ಎರಡು ಬೆರಳು ಪರೀಕ್ಷೆ' ಸಲ್ಲದು: 'ಸುಪ್ರೀಂ'

ನವದೆಹಲಿ (ಪಿಟಿಐ): 'ಸಂತ್ರಸ್ತೆಯ ಮೇಲೆ ಅತ್ಯಾಚಾರ ನಡೆದಿದೆಯೋ, ಇಲ್ಲವೊ ಎಂಬುದನ್ನು ಖಾತರಿ ಪಡಿಸಿ ಕೊಳ್ಳಲು ನಡೆಸಲಾಗುವ 'ಎರಡು ಬೆರಳುಗಳ ಪರೀಕ್ಷೆ'ಯನ್ನು (ಟು ಫಿಂಗರ್ ಟೆಸ್ಟ್) ರದ್ದು ಮಾಡಬೇಕು' ಎಂದು ಸುಪ್ರೀಂ ಕೋರ್ಟ್ ಸೋಮವಾರ ಕೇಂದ್ರ, ರಾಜ್ಯ ಸರ್ಕಾರಗಳಿಗೆ ಕಟ್ಟುನಿಟ್ಟಾಗಿ ಸೂಚಿಸಿದೆ.

'ಈ ಪರೀಕ್ಷೆ ವಿಧಾನವನ್ನು ಈಗಲೂ ಪಾಲಿಸಿಕೊಂಡು ಬರುತ್ತಿರುವುದು ದುರದೃಷ್ಟಕರ' ಎಂದು ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಹಿಮಾ ಕೊಹ್ಲಿ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠ ಬೇಸರಿಸಿತು.

'ಈ ಪರೀಕ್ಷೆಯನ್ನು ಇನ್ನು ಮುಂದೆ ನಡೆಸಕೂಡದು. ಇದರಿಂದ ಮಹಿಳೆಯರ ಘನತೆಗೆ ಚ್ಯುತಿ ಉಂಟಾಗುತ್ತದೆ. ಅವರ ಖಾಸಗಿತನದ ಹಕ್ಕನ್ನು ಉಲ್ಲಂಘಿಸಿದಂತಾಗುತ್ತದೆ' ಎಂದು ನ್ಯಾಯ ಪೀಠ ಹೇಳಿದೆ.

ಅತ್ಯಾಚಾರ ಹಾಗೂ ಕೊಲೆ ಪ್ರಕರಣದ ಆರೋಪಿಯನ್ನು ಖುಲಾಸೆಗೊಳಿಸಿದ್ದ ಜಾರ್ಖಂಡ್ ಹೈಕೋರ್ಟ್‌ನ ಆದೇಶವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಪೀಠ ಜಾರ್ಖಂಡ್ ಹೈಕೋರ್ಟ್ ತೀರ್ಪನ್ನು ರದ್ದುಗೊಳಿಸಿತು. ಆರೋಪಿ ತಪ್ಪಿತಸ್ಥ ಎಂದು ವಿಚಾರಣಾ ನ್ಯಾಯಾಲಯ ನೀಡಿದ್ದ ಆದೇಶವನ್ನು ಎತ್ತಿಹಿಡಿಯಿತು.

'ಇನ್ನು ಮುಂದೆ ಈ ಪರೀಕ್ಷೆ ನಡೆಸುವಂತಿಲ್ಲ. ಇದನ್ನು ಪಾಲಿಸಲಾಗುತ್ತಿದೆಯೋ, ಇಲ್ಲವೊ ಎಂಬುದನ್ನು ಡಿಜಿಪಿಗಳು ಹಾಗೂ ಆರೋಗ್ಯ ಸಚಿವಾಲಯದ ಕಾರ್ಯದರ್ಶಿಗಳು ದೃಢಪಡಿಸಿಕೊಳ್ಳಬೇಕು' ಎಂದು ಪೀಠ ತಾಕೀತು ಮಾಡಿದೆ.

'ಈ ಆದೇಶವನ್ನೂ ಮೀರಿ ಯಾರಾದರೂ ಈ ಪರೀಕ್ಷೆ ನಡೆಸಿದರೆ ಅಂತಹವರನ್ನು ತಪ್ಪಿತಸ್ಥರೆಂದು ಪರಿಗಣಿಸಲಾಗುತ್ತದೆ' ಎಂದೂ ಎಚ್ಚರಿಸಿದೆ.

'ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳ ಪಠ್ಯಕ್ರಮದಿಂದ ಎರಡು ಬೆರಳುಗಳ ಪರೀಕ್ಷೆಯ ವಿಷಯ ಹಾಗೂ ಅಧ್ಯಯನ ವಸ್ತುಗಳನ್ನು ತೆಗೆದು ಹಾಕಲು ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದೂ ನ್ಯಾಯಪೀಠವು ಕೇಂದ್ರ ಹಾಗೂ ರಾಜ್ಯ ಆರೋಗ್ಯ ಸಚಿವಾಲಯಗಳ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡಿದೆ.

ವೈದ್ಯಕೀಯ ಪಿ.ಜಿ ಸೀಟು ಹಂಚಿಕೆ: ಮಧ್ಯಪ್ರವೇಶಕ್ಕೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2022–2023ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಖಾಸಗಿ ವೃತ್ತಿಪರ ಕಾಲೇಜುಗಳ ಸಂಘದ ಸದಸ್ಯ ಕಾಲೇಜುಗಳಲ್ಲಿನ ವೈದ್ಯಕೀಯ ಸ್ನಾತಕೋತ್ತರ ಕೋರ್ಸ್‌ಗಳಿಗೆ ಹಂಚಿಕೆ ಮಾಡಿರುವ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ ವಿಚಾರಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಮಧ್ಯಪ್ರವೇಶಿಸಲು ಹೈಕೋರ್ಟ್ ನಿರಾಕರಿಸಿದೆ.



ಈ ಸಂಬಂಧ ನಗರದ, 'ವೈದೇಹಿ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಅಂಡ್ ರಿಸರ್ಚ್ ಸೆಂಟರ್' ಹಾಗೂ ಇನ್ನೆರಡು ಮೆಡಿಕಲ್ ಕಾಲೇಜುಗಳು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಅಲೋಕ್ ಆರಾಧೆ ಹಾಗೂ ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಲೇವಾರಿ ಮಾಡಿ ಈ ಕುರಿತಂತೆ ಆದೇಶಿಸಿದೆ.

'ಸೀಟು ಹಂಚಿಕೆ ರೊಟೇಷನ್ ಆಧಾರದಲ್ಲಿ ನಡೆಯುತ್ತಿದ್ದು, ಈ ಪ್ರಕ್ರಿಯೆಯಲ್ಲಿ ಪ್ರತಿ ವರ್ಷವೂ ವಿವಿಧ ವರ್ಗಗಳಲ್ಲಿ ಸೀಟು ಹಂಚಿಕೆ ಬದಲಾವಣೆಯಾಗುತ್ತದೆ. ಈ ಹಿಂದಿನ ಶೈಕ್ಷಣಿಕ ವರ್ಷಗಳಲ್ಲಿ ಅರ್ಜಿದಾರರ ಕಾಲೇಜುಗಳೂ ಹೆಚ್ಚಿನ ಸಂಖ್ಯೆಯ ಸೀಟುಗಳನ್ನು ಪಡೆದುಕೊಂಡಿವೆ. ಹೀಗಾಗಿ, ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ನಿಯಮ ಉಲ್ಲಂಘನೆಯಾಗಿದೆ ಎಂಬ ಅಭಿಪ್ರಾಯಕ್ಕೆ ಬರಲು ಸಾಧ್ಯವಿಲ್ಲ' ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಅಲ್ಪಸಂಖ್ಯಾತರ ವೃತ್ತಿಪರ ಕಾಲೇಜುಗಳ ಸಂಘದ ಸದಸ್ಯರಾಗಿರುವ ಅರ್ಜಿದಾರ ಕಾಲೇಜುಗಳು, ಅನಿವಾಸಿ ಭಾರತೀಯರು (ಎನ್‌ಆರ್‌ಐ) ಮತ್ತು ಮ್ಯಾನೇಜ್‌ಮೆಂಟ್ ಕೋಟಾದಲ್ಲಿನ ಸೀಟುಗಳ ಹಂಚಿಕೆಗೆ ಸಂಬಂಧಿಸಿದಂತೆ ವ್ಯತ್ಯಾಸಗಳಿವೆ. ಆದ್ದರಿಂದ, ಸೀಟು ಹಂಚಿಕೆ ಮತ್ತು ಶುಲ್ಕವನ್ನು ಮರು ನಿಗದಿ ಮಾಡುವುದಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಮೆಟ್ರೊ: ಪ್ರಯಾಣಕ್ಕಿನ್ನು ಕ್ಯೂಆರ್ ಕೋಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ರೈಲು ನಿಲ್ದಾಣಗಳಲ್ಲಿ ಟಿಕೆಟ್‌ಗಾಗಿ(ಟೋಕನ್) ಇನ್ನು ಸಾಲುಗಟ್ಟಿ ನಿಲ್ಲುವ ಅಗತ್ಯವಿಲ್ಲ. ಕ್ಯೂಆರ್(ಕ್ವಿಕ್ ರೆಸ್ಪಾನ್ಸ್) ಕೋಡ್ ಟಿಕೆಟ್ ಖರೀದಿ ವ್ಯವಸ್ಥೆಯನ್ನು ಬೆಂಗಳೂರು ಮೆಟ್ರೊ ರೈಲು ನಿಗಮವು(ಬಿಎಂಆರ್‌ಸಿಎಲ್) ಕನ್ನಡ ರಾಜ್ಯೋತ್ಸವದ ದಿನದಂದು ಮಂಗಳವಾರ ಅಧಿಕೃತವಾಗಿ ಪರಿಚಯಿಸುತ್ತಿದೆ.

ಪ್ರಯಾಣ ಆರಂಭಿಸುವ ನಿಲ್ದಾಣ ಮತ್ತು ತಲುಪಬೇಕಾದ ನಿಲ್ದಾಣಗಳನ್ನು ನಮೂದಿಸಿ ಆನ್‌ಲೈನ್‌ನಲ್ಲೇ ದರ ಪಾವತಿಸಿದರೆ ಕ್ಯೂಆರ್ ಕೋಡ್ ಸೃಷ್ಟಿಯಾಗುತ್ತದೆ. ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಲು ಎಲ್ಲಾ ಮೆಟ್ರೊ ನಿಲ್ದಾಣಗಳ ಪ್ರವೇಶ ಮತ್ತು ನಿರ್ಗಮನ ದ್ವಾರಗಳಲ್ಲಿ ಸ್ಕ್ಯಾನಿಂಗ್ ಉಪಕರಣಗಳನ್ನು ಅಳವಡಿಸಲಾಗಿದೆ. ಆ ಉಪಕರಣಕ್ಕೆ ಮೊಬೈಲ್ ಫೋನ್‌ನಲ್ಲಿ ಇರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ ಗೇಟ್ ತೆರೆದುಕೊಳ್ಳುತ್ತದೆ. ನಿರ್ಗಮನ ಸಂದರ್ಭದಲ್ಲೂ ಸ್ಕ್ಯಾನ್ ಮಾಡಿ ಹೊರಗೆ ಹೋಗಬಹುದು.

ಒಮ್ಮೆ ಖರೀದಿಸಿಸುವ ಕ್ಯೂಆರ್ ಕೋಡ್ ಟಿಕೆಟ್, ಆ ದಿನದ ಅಂತ್ಯದ ತನಕ ಚಾಲ್ತಿಯಲ್ಲಿರುತ್ತದೆ. ಪ್ರಯಾಣ ಸಾಧ್ಯವಾಗದಿದ್ದರೆ ದಿನ ಮುಕ್ತಾಯ ಆಗುವಷ್ಟರಲ್ಲಿ ಟಿಕೆಟ್ ರದ್ದತಿ ವಿಧಾನ ಬಳಸಿ ಮೊತ್ತ ವಾಪಸ್ ಪಡೆಯಬಹುದು. ಕ್ಯೂಆರ್ ಕೋಡ್ ಬಳಸಿ ಟಿಕೆಟ್ ಖರೀದಿಸಿದರೆ ಶೇ 5ರಷ್ಟು ರಿಯಾಯಿತಿ ದೊರೆಯಲಿದೆ. ಆದ್ದರಿಂದ ಪ್ರಯಾಣಿಕರು ಕ್ಯೂಆರ್ ಕೋಡ್ ಟಿಕೆಟ್ ಸೌಲಭ್ಯ ಬಳಸಿಕೊಳ್ಳುವಂತೆ ಬಿಎಂಆರ್‌ಸಿಎಲ್ ಮನವಿ ಮಾಡಿದೆ.


3ನೇ ಪುಟ ನೋಡಿ

ವಾಟ್ಸ್‌ಆ್ಯಪ್ ಕ್ಯೂಆರ್ ಕೋಡ್ ಬಳಸಿದ ವಿಶ್ವದ ಮೊದಲ ಸಂಸ್ಥೆ

ವಾಟ್ಸ್‌ಆ್ಯಪ್‌ನಲ್ಲಿ ಸಮಗ್ರವಾದ ಕ್ಯೂಆರ್ ಕೋಡ್ ಟಿಕೆಟಿಂಗ್ ವ್ಯವಸ್ಥೆ ಅಳವಡಿಸಿಕೊಂಡ ವಿಶ್ವದ ಮೊದಲ ಸಂಸ್ಥೆ ಎಂದು ಹೆಗ್ಗಳಿಕೆಗೆ ಬಿಎಂಆರ್‌ಸಿಎಲ್ ಪಾತ್ರವಾಗಿದೆ.

ಆ್ಯಂಡ್ರಾಯ್ಡ್ ಫೋನ್‌ನಲ್ಲಿ ಪ್ಲೇಸ್ಟೋರ್‌ನಿಂದ 'ನಮ್ಮ ಮೆಟ್ರೊ' ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ನೋಂದಾಯಿಸಿಕೊಳ್ಳಬಹುದು. ಬಿಎಂಆರ್‌ಸಿಎಲ್‌ನ ವ್ಯಾಟ್ಸ್‌ಆ್ಯಪ್ ಸಂಖ್ಯೆ (8105556677) ಸೇವ್ ಮಾಡಿಕೊಂಡು 'ಹಾಯ್' ಎಂಬ ಸಂದೇಶ ಕಳುಹಿಸುವ ಮೂಲಕವೂ ಕ್ಯೂಆರ್ ಟಿಕೆಟ್ ಖರೀದಿಸಲು ಚಾಟ್‌ಬಾಟ್‌ನೊಂದಿಗೆ ಸಂವಹನ ಮಾಡಬಹುದು.





ನಿಲ್ದಾಣಗಳ ಪ್ರವೇಶ ಮತ್ತು ನಿರ್ಗಮನ ಗೇಟ್‌ಗಳಲ್ಲಿ ಅಳವಡಿಸಿರುವ ಸ್ಕ್ಯಾನರ್ (ಎಡಚಿತ್ರ), ಮೆಟ್ರೊ ರೈಲು ಪ್ರಯಾಣದ ಮಾದರಿ ಕ್ಯೂಆರ್ ಕೋಡ್

ಆ್ಯಂಡ್ರಾಯ್ಡ್ ಮತ್ತು ಐಓಸ್ ಮೊಬೈಲ್ ದೂರವಾಣಿ ಬಳಕೆದಾರರಿಗೆ ಚಾಟ್‌ಬೋಟ್ ಕನ್ನಡ ಮತ್ತು ಅಂಗ್ಲ ಎರಡೂ ಭಾಷೆಗಳಲ್ಲಿ ಲಭ್ಯವಿದೆ. ಮೆಟ್ರೊ ಪ್ರಯಾಣದ ಟಿಕೆಟ್ ಮತ್ತು ಪಾಸ್ ಅನ್ನು ವಾಟ್ಸ್‌ಆ್ಯಪ್‌ನಲ್ಲೇ ರೀಚಾರ್ಜ್ ಮಾಡಿಕೊಳ್ಳಲು ಅವಕಾಶ ಇದೆ. ವಾಟ್ಸ್‌ಆ್ಯಪ್ ಚಾಟ್‌ನಿಂದ ಹೊರಗೆ ಬಾರದೆ ಯುಪಿಐ ಮೂಲಕ ಪಾವತಿ ಮಾಡಲು ಅವಕಾಶ ಇದೆ ಎಂದು ವಾಟ್ಸ್‌ಆ್ಯಪ್ ಇಂಡಿಯಾ ಮುಖ್ಯಸ್ಥ ಅಭಿಜಿತ್ ಬೋಸ್ ಅವರು ಮಾಹಿತಿ ನೀಡಿದ್ದಾರೆ.

ಒಳ ಪುಟಗಳು

ಕೇರಳ ಗಡಿಭಾಗದ ಕುಟ್ಟ ಸರ್ಕಾರಿ ಹಿರಿಯ ಕನ್ನಡ ಪ್ರಾಥಮಿಕ ಶಾಲೆ

ಮಲಯಾಳ ಮಕ್ಕಳ ಕನ್ನಡ ಪ್ರೇಮ

• ಕೆ.ಎಸ್.ಗಿರೀಶ

ರಾಜ್ಯೋತ್ಸವ ವಿಶೇಷ

ಮಡಿಕೇರಿ: ಮಲಯಾಳ ಮಾತೃಭಾಷೆ. ಆದರೆ ಅವರ ಪ್ರೇಮವಿರುವುದು ಕನ್ನಡ ಶಾಲೆಯ ಮೇಲೆ. ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ಕೇರಳ ಗಡಿಭಾಗದಲ್ಲಿರುವ ಕುಟ್ಟ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಮಲಯಾಳ ಮಾತೃಭಾಷೆಯವರೇ ಹೆಚ್ಚಿದ್ದು, ಸದ್ಯ 238 ಮಕ್ಕಳು ಕಲಿಯುತ್ತಿದ್ದಾರೆ.

ಇಲ್ಲಿಂದ ಕೇವಲ 3 ಕಿ.ಮೀ ದೂರ ಕ್ರಮಿಸಿದರೆ ಕೇರಳ ಸಿಗುತ್ತದೆ. ಗಡಿಯಲ್ಲೇ ಇರುವ ತೋಳ್ಪಟ್ಟಿ ಗ್ರಾಮದ ಮಲಯಾಳ ಭಾಷೆಯ ಶಾಲೆಗೂ ಪೋಷಕರು ಮಕ್ಕಳನ್ನು ಕಳಿಸುತ್ತಿಲ್ಲ.

ಕುಟ್ಟ ಗ್ರಾಮದಲ್ಲಿ 1952ರಲ್ಲಿ ಆರಂಭವಾದ ಶಾಲೆಯಲ್ಲಿರುವ ಉತ್ತಮ ಸೌಕರ್ಯಗಳೇ ಪೋಷಕರು, ಮಕ್ಕಳನ್ನು ಸೆಳೆಯುತ್ತಿವೆ. ಕುಟ್ಟದಲ್ಲೂ ಮಲಯಾಳ ಶಾಲೆ ತೆರೆಯಲು ಇನ್ನಿಲ್ಲದ ಕಸರತ್ತು ನಡೆಸಿರುವ ಕೇರಳ ಸರ್ಕಾರವು ನಡೆಸಿದ ಸಭೆಗಳಲ್ಲೂ ಪೋಷಕರು ಕನ್ನಡ ಶಾಲೆಯನ್ನೇ ಎತ್ತಿ ಹಿಡಿದಿದ್ದಾರೆ.

> ಶಾಲೆಯ ಮಕ್ಕಳು ವಿಭಾಗ ಮಟ್ಟ ಹಾಗೂ ರಾಜ್ಯಮಟ್ಟದ ಕ್ರೀಡಾಕೂಟಗಳಲ್ಲಿ ಉತ್ತಮ ಸಾಧನೆ ತೋರಿದ್ದಾರೆ.
>
> **ವೇದಮೂರ್ತಿ,** ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ

ಅತ್ಯುತ್ತಮ ಬೋಧನೆಯೊಂದಿಗೆ ಉತ್ತಮ ಪರಿಸರವಿರುವ ಶಾಲೆಯಲ್ಲಿ ವಿಶಾಲ ಮೈದಾನವಿದೆ. ಕ್ರೀಡಾ ಪರಿಕರಗಳೂ ಸಾಕಷ್ಟಿವೆ. ಸದಾ ಮಳೆಯಿಂದ ಕೂಡಿರುವ ಇಲ್ಲಿ ಮಕ್ಕಳಿಗೆ ಪ್ರಾರ್ಥನೆ ಮಾಡಲು, ಯೋಗಾಭ್ಯಾಸ ಮಾಡಲು ಬೃಹತ್ ಚಾವಣಿ ಹಾಕಲಾಗಿದೆ. ಬಹಳಷ್ಟು ಶಿಕ್ಷಕರಿಗೆ ಮಲಯಾಳ ಮಾತೃಭಾಷೆಯಾಗಿರುವುದರಿಂದ ಪೋಷಕರನ್ನು ಸುಲಭವಾಗಿ ಮನವೊಲಿಸಿ, ಕನ್ನಡದ ಮಹತ್ವವನ್ನು ಮನವರಿಕೆ ಮಾಡಿಕೊಟ್ಟು, ಮಕ್ಕಳನ್ನು ಶಾಲೆಗೆ ಸೇರಿಸುವುದರಲ್ಲಿ ಸಫಲರಾಗಿದ್ದಾರೆ.

ಸರ್ಕಾರದ ಸೌಲಭ್ಯಗಳ ಜತೆಗೆ, ಶಾಲೆಯು ಸರ್ಕಾರೇತರ ಸಂಸ್ಥೆಗಳ ನೆರವನ್ನೂ ಪಡೆದು ಅಗತ್ಯ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದೆ. 'ಕೃತಗ್ನತಾ' ಟ್ರಸ್ಟ್ ಶಾಲೆಗೆ 5 ಕಂಪ್ಯೂಟರ್‌ಗಳನ್ನು ನೀಡಿ ಶಿಕ್ಷಕರನ್ನೂ ನೇಮಿಸಿದೆ.

ಶಾಲೆಯಲ್ಲಿ ಆಕರ್ಷಕವಾದ ಗೋಡೆ ಬರಹಗಳು ಮಕ್ಕಳ ಮನಸ್ಸಿಗೆ ಮುದ ನೀಡುತ್ತಿವೆ. ಮಧ್ಯಾಹ್ನದ ಬಿಸಿಯೂಟ, ದೈಹಿಕ ಶಿಕ್ಷಣ ಶಿಕ್ಷಕರ ಉತ್ತೇಜನ, ಸುಸಜ್ಜಿತ ಪ್ರಯೋಗಾಲಯ, ಪ್ರತಿ ಮಗುವಿನ ಕಲಿಕೆ ಕಡೆಗೆ ವೈಯಕ್ತಿಕ ಗಮನ– ಈ ಅಂಶಗಳು ಶಾಲೆಗೆ ಜನಪ್ರಿಯತೆ ತಂದುಕೊಟ್ಟಿವೆ. ಮಂಜೂರಾಗಿರುವ 9 ಹುದ್ದೆಗಳ ಪೈಕಿ ನಾಲ್ವರು ಕಾಯಂ ಶಿಕ್ಷಕರಿದ್ದಾರೆ. ಉಳಿದ ನಾಲ್ವರು ಅತಿಥಿ ಶಿಕ್ಷಕರು. ಒಂದು ಹುದ್ದೆ ಖಾಲಿ ಇದೆ. ಕೇರಳದಿಂದ ಕೇವಲ ಅರ್ಧ ಕಿ.ಮೀ ದೂರ ಇರುವ ಸಿಂಕೋನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯೂ ಯಶಸ್ಸಿನ ಹಾದಿಯಲ್ಲಿದೆ. ಕಳೆದ ವರ್ಷ 52 ಇದ್ದ ಮಕ್ಕಳ ಸಂಖ್ಯೆ ಈಗ 64ಕ್ಕೆ ಹೆಚ್ಚಿದೆ. 'ಕೇವಲ ಮೂವರು ಶಿಕ್ಷಕರಷ್ಟೇ ಇರುವುದು ಕೊರತೆ ಎನಿಸಿದ್ದು, ಸರ್ಕಾರ ಇನ್ನಷ್ಟು ಶಿಕ್ಷಕರನ್ನು ನೇಮಿಸಿದರೆ ಇಲ್ಲೂ ಮಕ್ಕಳ ಸಂಖ್ಯೆ ಹೆಚ್ಚಾಗುವುದರಲ್ಲಿ ಯಾವುದೇ ಅನುಮಾನ ಇಲ್ಲ' ಎನ್ನುತ್ತವೆ ಶಾಲೆಯ ಮೂಲಗಳು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಪಡಿತರ ಎತ್ತುವಳಿ: 'ಅನಾಮಿಕ'ರ ಹಾವಳಿ

• ವಿ.ಎಸ್. ಸುಬ್ರಹ್ಮಣ್ಯ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜಧಾನಿ ವ್ಯಾಪ್ತಿಯಲ್ಲಿ ಪಡಿತರ ಧಾನ್ಯಗಳ ಎತ್ತುವಳಿಯಲ್ಲಿ ನ್ಯಾಯಬೆಲೆ ಅಂಗಡಿಗಳ ಮಾಲೀಕರ ಬದಲಿಗೆ 'ಅನಾಮಿಕ' ವ್ಯಕ್ತಿಗಳು ಭಾಗಿಯಾಗುತ್ತಿರುವ ಕುರಿತು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಗೆ ವ್ಯಾಪಕ ದೂರುಗಳು ಬರಲಾರಂಭಿಸಿವೆ.

ನ್ಯಾಯಬೆಲೆ ಅಂಗಡಿಗಳ ಮಾಲೀಕರು ಅಥವಾ ಅವರ ಅಧಿಕೃತ ಪ್ರತಿನಿಧಿಗಳಲ್ಲದವರು ಪಡಿತರ ಧಾನ್ಯಗಳನ್ನು ಎತ್ತುವಳಿ ಮಾಡಲು ಬರುತ್ತಿರುವ ಕುರಿತು ಗೋಪ್ಯವಾಗಿ ಮಾಹಿತಿ ಸಂಗ್ರಹಿಸಿರುವ ಇಲಾಖೆಯ ಹಿರಿಯ ಅಧಿಕಾರಿಗಳು, 'ಅಕ್ರಮ ಎತ್ತುವಳಿ' ತಡೆಗೆ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ.

ಬೆಂಗಳೂರು ನಗರದ ಅನೌಪಚಾರಿಕ ಪಡಿತರ ಪ್ರದೇಶ (ಐಆರ್‌ಎ) ವಲಯದ ವ್ಯಾಪ್ತಿಯಲ್ಲಿ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಪೂರ್ವ ಮತ್ತು ಬೆಂಗಳೂರು ಪಶ್ಚಿಮ ಪಡಿತರ ವಿತರಣಾ ವಲಯಗಳಿವೆ. ನಾಲ್ಕೂ ವಲಯಗಳಲ್ಲಿರುವ ಒಟ್ಟು 742 ನ್ಯಾಯಬೆಲೆ ಅಂಗಡಿಗಳಿಗೆ ಪ್ರತಿ ತಿಂಗಳಿಗೆ ಸುಮಾರು 3.50 ಲಕ್ಷ ಕ್ವಿಂಟಲ್‌ಗೂ ಹೆಚ್ಚು ಪಡಿತರ ಧಾನ್ಯಗಳ ವಿತರಣೆಯಾಗುತ್ತಿದೆ. ಪಡಿತರ ಚೀಟಿ ದಾರರಿಗೆ ಹಂಚಿಕೆಯಾಗುವ ಅಕ್ಕಿ, ರಾಗಿ ಎತ್ತುವಳಿಯಲ್ಲಿ ಕೆಲವೆಡೆ 'ಅನಾಮಿಕ' ವ್ಯಕ್ತಿಗಳು ಹಸ್ತಕ್ಷೇಪ ಮಾಡುತ್ತಿರುವುದನ್ನು ಇಲಾಖೆ ಗುರುತಿಸಿದೆ.

> ಪಡಿತರ ಧಾನ್ಯಗಳ ಎತ್ತುವಳಿಯಲ್ಲಿ ಅನಧಿಕೃತ ವ್ಯಕ್ತಿಗಳಿಗೆ ಅವಕಾಶ ನೀಡಿದರೆ ಸಂಬಂಧಿಸಿದ ಜಂಟಿ ನಿರ್ದೇಶಕರು, ಉಪ ನಿರ್ದೇಶಕರು ಮತ್ತು ಆಹಾರ ನಿರೀಕ್ಷಕರ ವಿರುದ್ಧ ಕ್ರಮ ಜರುಗಿಸಲಾಗುವುದು
>
> **ವಿ. ಪಾತರಾಜು,** ಹೆಚ್ಚುವರಿ ನಿರ್ದೇಶಕರು, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ

ಭಾರತೀಯ ಉಗ್ರಾಣ ನಿಗಮದ (ಎಫ್‌ಸಿಐ) ಸಗಟು ಪಡಿತರ ದಾಸ್ತಾನು ಉಗ್ರಾಣಗಳಿಂದ ತರುವ ಆಹಾರ ಧಾನ್ಯಗಳನ್ನು ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮದ (ಕೆಎಸ್‌ಸಿಎಫ್‌ಸಿ) ಚಿಲ್ಲರೆ ಪಡಿತರ ಧಾನ್ಯ ವಿತರಣಾ ಗೋದಾಮುಗಳು ಹಾಗೂ ವಿವಿಧ ತಾಲ್ಲೂಕು ಕೃಷಿ ಉತ್ಪನ್ನ ಸಹಕಾರ ಮಾರಾಟ ಸೊಸೈಟಿಯ (ಟಿಎಪಿಸಿಎಂಎಸ್) ಗೋದಾಮುಗಳಲ್ಲಿ ಶೇಖರಿಸಿಡಲಾಗುತ್ತಿದೆ. ಅಲ್ಲಿಂದ ನ್ಯಾಯಬೆಲೆ ಅಂಗಡಿಗಳಿಗೆ ಸಾಗಣೆ ಮಾಡಲಾಗುತ್ತದೆ.

ನಿಯಮ ಉಲ್ಲಂಘನೆ: ಆಹಾರ ಇಲಾಖೆಯ ಮಾರ್ಗಸೂಚಿ ಪ್ರಕಾರ, ನಿಗದಿತ ದಿನಾಂಕದಂದು ನ್ಯಾಯಬೆಲೆ ಅಂಗಡಿಯ ಮಾಲೀಕರು ಅಥವಾ ಅಧಿಕೃತ ಪ್ರತಿನಿಧಿಗಳು ಕೆಎಸ್‌ಸಿಎಫ್‌ಸಿ ಅಥವಾ ಟಿಎಪಿಸಿಎಂಎಸ್ ಉಗ್ರಾಣಗಳಿಗೆ ಹಾಜರಾಗಿ ತಮ್ಮ ಅಂಗಡಿಗೆ ಹಂಚಿಕೆಯಾದ ಪಡಿತರ ಧಾನ್ಯಗಳನ್ನು ಎತ್ತುವಳಿ ಮಾಡಬೇಕು. ಆಯಾ ಪ್ರದೇಶದ ಉಸ್ತುವಾರಿ ಹೊಂದಿರುವ ಆಹಾರ ನಿರೀಕ್ಷಕರು ಅಲ್ಲಿ ಹಾಜರಿದ್ದು, ಪಡಿತರ ಧಾನ್ಯಗಳ ಎತ್ತುವಳಿಯನ್ನು ದೃಢೀಕರಿಸಬೇಕು.

'ಕೆಲವು ನ್ಯಾಯಬೆಲೆ ಅಂಗಡಿಗಳ ಮಾಲೀಕರು ತಮ್ಮ ಬದಲಿಗೆ ಅನಧಿಕೃತ ವ್ಯಕ್ತಿಗಳನ್ನು ಪಡಿತರ ಧಾನ್ಯಗಳನ್ನು ಎತ್ತುವಳಿ ಮಾಡಲು ಕಳುಹಿಸುತ್ತಿರುವ ದೂರುಗಳಿವೆ. ದೂರುಗಳ ಕುರಿತು ಪರಿಶೀಲನೆ ನಡೆಸಿದ್ದು, ಲೋಪಗಳನ್ನು ತಡೆಯಲು ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚನೆ ನೀಡಲಾಗಿದೆ. ಪಡಿತರ ಧಾನ್ಯಗಳ ಎತ್ತುವಳಿಯಲ್ಲಿ ಅನಧಿಕೃತ ವ್ಯಕ್ತಿಗಳು ಭಾಗಿಯಾಗಿರುವುದು ಪತ್ತೆಯಾದರೆ ಸಂಬಂಧಿಸಿದ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು' ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಬೆಂಗಳೂರು–ಐಆರ್‌ಎ ವಲಯದ ಹೆಚ್ಚುವರಿ ನಿರ್ದೇಶಕ ವಿ. ಪಾತರಾಜು 'ಪ್ರಜಾವಾಣಿ'ಗೆ ತಿಳಿಸಿದರು.

ವೇಳಾಪಟ್ಟಿಯಂತೆ ಎತ್ತುವಳಿಗೆ ಸೂಚನೆ

ಕೆಎಸ್‌ಸಿಎಫ್‌ಸಿ ಮತ್ತು ಟಿಎಪಿಸಿಎಂಎಸ್ ಚಿಲ್ಲರೆ ಪಡಿತರ ವಿತರಣಾ ಗೋದಾಮುಗಳ ವ್ಯವಸ್ಥಾಪಕರು ತಮ್ಮ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿಗಳಿಗೆ ಪಡಿತರ ಎತ್ತುವಳಿಗೆ ವೇಳಾಪಟ್ಟಿ ನಿಗದಿ ಮಾಡಬೇಕು. ನಿಗದಿತ ಸಮಯಕ್ಕೆ ಸರಿಯಾಗಿ ನ್ಯಾಯಬೆಲೆ ಅಂಗಡಿಗಳ ಮಾಲೀಕರು ಅಥವಾ ಅವರ ಅಧಿಕೃತ ಪ್ರತಿನಿಧಿ ಮತ್ತು ಅಲ್ಲಿನ ಉಸ್ತುವಾರಿ ಆಹಾರ ನಿರೀಕ್ಷಕರು ಹಾಜರಾಗಬೇಕು. ಗೋದಾಮುಗಳ ವ್ಯವಸ್ಥಾಪಕರು ಎಲ್ಲವನ್ನೂ ಖಾತರಿಪಡಿಸಿಕೊಂಡು ಅಧಿಕೃತ ವಾಹನಗಳಲ್ಲೇ ಪಡಿತರ ಧಾನ್ಯಗಳ ಸಾಗಣೆಗೆ ಅವಕಾಶ ಕಲ್ಪಿಸಬೇಕು ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಬೆಂಗಳೂರು–ಐಆರ್‌ಎ ವಲಯದ ಹೆಚ್ಚುವರಿ ನಿರ್ದೇಶಕರು ಸೂಚನೆ ನೀಡಿದ್ದಾರೆ.

ಜಮೀನು ವಿಭಾಗಕ್ಕೆ ಸಂಬಂಧಿಸಿದಂತೆ 11–ಇ ನಕ್ಷೆ ತಯಾರಿಸಲು ಲಂಚ ಪಡೆದ ಆರೋಪ

ಪರವಾನಗಿ ಭೂಮಾಪಕನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಮೀನು ವಿಭಾಗಕ್ಕೆ ಸಂಬಂಧಿಸಿದಂತೆ 11–ಇ ನಕ್ಷೆ ತಯಾರಿಸಲು ₹ 5,000 ಲಂಚ ಪಡೆಯುತ್ತಿದ್ದ ಯಲಹಂಕ ತಾಲ್ಲೂಕಿನ ಪರವಾನಗಿ ಭೂಮಾಪಕ ಅಶೋಕ ಬಿ.ಎಂ. ಅವರನ್ನು ಲೋಕಾಯುಕ್ತ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಯಲಹಂಕ ತಾಲ್ಲೂಕಿನ ಜಾಲ ಹೋಬಳಿಯ ಬಾಗಲೂರು ಗ್ರಾಮದಲ್ಲಿ ತಮ್ಮ ಕುಟುಂಬದ ಹೆಸರಿನಲ್ಲಿರುವ 17.25 ಗುಂಟೆ ಜಮೀನಿನಲ್ಲಿ ಎರಡು ಗುಂಟೆ ಜಮೀನನ್ನು ಮಗಳಿಗೆ ವಿಭಾಗ ಮಾಡಿಕೊಡಲು 11–ಇ ನಕ್ಷೆ ಸಿದ್ಧಪಡಿಸಿ ಕೊಡುವಂತೆ ಬಿ.ಎಂ. ಚಂದ್ರಶೇಖರ ಎಂಬುವವರು ಯಲಹಂಕ ತಾಲ್ಲೂಕು ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಆರೋಪಿ ಪರವಾನಗಿ ಭೂಮಾಪಕರಿಗೆ ವರ್ಗಾಯಿಸಲಾಗಿತ್ತು.

ನಕ್ಷೆ ಸಿದ್ಧಪಡಿಸಿಕೊಡಲು ₹ 20,000 ಲಂಚ ನೀಡುವಂತೆ ಅಶೋಕ ಬೇಡಿಕೆ ಇಟ್ಟಿದ್ದರು. ಈ ಕುರಿತು ಅರ್ಜಿದಾರರು ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ವಿಭಾಗಕ್ಕೆ ದೂರು ಸಲ್ಲಿಸಿದ್ದರು. ಅರ್ಜಿದಾರರಿಂದ ಸೋಮವಾರ ₹ 5,000 ಲಂಚ ಪಡೆಯುತ್ತಿದ್ದಾಗ ದಾಳಿ ಮಾಡಿದ ಲೋಕಾಯುಕ್ತ ಪೊಲೀಸರು, ಆರೋಪಿಯನ್ನು ಬಂಧಿಸಿದರು ಎಂದು ಲೋಕಾಯುಕ್ತದ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಮುಖ್ಯಾಂಶಗಳು

- ಲೋಕಾಯುಕ್ತ ಪೊಲೀಸರಿಂದ ಸೆರೆ
- ನಕ್ಷೆ ಸಿದ್ಧಪಡಿಸಿಕೊಡಲು ₹ 20,000 ಲಂಚಕ್ಕೆ ಬೇಡಿಕೆ
- ಬೆಂಗಳೂರು ನಗರ ಪೊಲೀಸ್ ವಿಭಾಗಕ್ಕೆ ದೂರು

ಟಿಎಚ್‌ಒ ಡಾ.ಮಂಜುನಾಥ್ ಬಂಧನ

ಬೆಂಗಳೂರು: ಖಾಸಗಿ ಆಸ್ಪತ್ರೆ ಆರಂಭಿಸಲು ಪರವಾನಗಿ ನೀಡಲು ₹ 40,000 ಲಂಚ ಪಡೆದ ಪ್ರಕರಣದಲ್ಲಿ ಬೆಂಗಳೂರು ಪೂರ್ವ ತಾಲ್ಲೂಕಿನ ತಾಲ್ಲೂಕು ಆರೋಗ್ಯಾಧಿಕಾರಿ (ಟಿಎಚ್‌ಒ) ಡಾ.ಮಂಜುನಾಥ್ ಅವರನ್ನು ಲೋಕಾಯುಕ್ತ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ನಗರದ ಬಿದರಹಳ್ಳಿ ಸಮೀಪದ ಕನ್ನಮಂಗಲ ನಿವಾಸಿ ಡಾ. ಕಾಶಿ ವಿಶ್ವನಾಥ್ ಸೆಲ್ಲಪ್ಪನ್ ಎಂಬುವವರು ಕ್ರಿಯೇಟ್ ಫರ್ಟಿಲಿಟಿ ಲಿಮಿಟೆಡ್ ಎಂಬ ಖಾಸಗಿ ಆಸ್ಪತ್ರೆ ಆರಂಭಿಸಲು ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದರು. ಯೋಗೇಶ್ವರ ಗೌಡ ಎಂಬುವವರಿಗೆ ನೋಂದಣಿ ಪ್ರಕ್ರಿಯೆಗೆ ಸಂಬಂಧಿಸಿದ ಅಧಿಕಾರ ಪತ್ರ ನೀಡಿದ್ದರು.

₹ 1 ಲಕ್ಷ ಲಂಚ ನೀಡಿದರೆ ಪರವಾನಗಿ ಕೊಡುವುದಾಗಿ ಬೆಂಗಳೂರು ನಗರ ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಿರಂಜನ್ ಮತ್ತು ಟಿಎಚ್‌ಒ ಡಾ.ಮಂಜುನಾಥ್ ಬೇಡಿಕೆ ಇಟ್ಟಿದ್ದರು. ₹ 40,000 ಲಂಚ ಪಡೆಯುತ್ತಿದ್ದ ನಿರಂಜನ್ ಅವರನ್ನು ಲೋಕಾಯುಕ್ತ ಪೊಲೀಸರು ಶನಿವಾರ ಬಂಧಿಸಿದ್ದರು. ಮಂಜುನಾಥ್ ಅವರನ್ನು ಕಚೇರಿಯಿಂದಲೇ ಸೋಮವಾರ ಬಂಧಿಸಲಾಗಿದೆ ಎಂದು ಲೋಕಾಯುಕ್ತದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸಭೆ ನಡೆಸದ ಬೈರತಿ ಬಸವರಾಜ: ಗೋಪಾಲ್ ಆರೋಪ

ಪ್ರಜಾವಾಣಿ ವಾರ್ತೆ



ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡ ಡಿ.ಎ.ಗೋಪಾಲ್ ಮಾತನಾಡಿದರು. ರಾಜ್ಯ ಯುವ ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಅಧ್ಯಕ್ಷ ಗಗನ್ ಯಾದವ್, ಅಫೀಜ್ ಖಾನ್ ಇದ್ದರು.

ಕೆ.ಆರ್.ಪುರ: 'ದಿವಂಗತ ಮಾಜಿ ಸಚಿವ ಎ.ಕೃಷ್ಣಪ್ಪ ಅವರ ಅವಧಿಯಲ್ಲಿ ಆಗಿರುವ ಯೋಜನೆಗಳನ್ನು ಬೈರತಿ ಬಸವರಾಜ ಅವರು ತಮ್ಮ ಯೋಜನೆಗಳು ಎಂದು ಬಿಂಬಿಸಿಕೊಳ್ಳುತ್ತಿರುವುದು ಎಷ್ಟರ ಮಟ್ಟಿಗೆ ಸರಿ' ಎಂದು ಕಾಂಗ್ರೆಸ್ ಮುಖಂಡ ಡಿ.ಎ.ಗೋಪಾಲ್ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕ್ಷೇತ್ರದಲ್ಲಿ ಹೇಳಿಕೊಳ್ಳುವಂತಹ ಅಭಿವೃದ್ಧಿಯಾಗಿದ್ದರೆ ಅದು ಎ.ಕೃಷ್ಣಪ್ಪ ಕಾಲದಲ್ಲಿ ಮಾತ್ರ. ರಾಜ್ಯ ಸಂಪುಟದಲ್ಲಿ ಈಗಿರುವ ಸ್ಥಳೀಯ ಶಾಸಕರು ಸಚಿವರಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ, ಕೆ.ಆರ್.ಪುರ ಕ್ಷೇತ್ರಕ್ಕೆ ಎಲ್ಲಿ ನೋಡಿದರೂ ಹದಗೆಟ್ಟ ರಸ್ತೆಗಳು, ಗುಂಡಿಮಯ ರಸ್ತೆ ಕಾಣಿಸುತ್ತವೆ. ಅಭಿವೃದ್ಧಿ ಮಾತ್ರ ಶೂನ್ಯ' ಎಂದು ದೂರಿದರು.

'ಜನಪ್ರತಿನಿಧಿಯಾಗಿ ಸಾರ್ವಜನಿಕರ ಕುಂದುಕೊರತೆಗಳು ಕೇಳಲು ಒಂದೇ ಒಂದು ಸಾರ್ವಜನಿಕ ಸಭೆ ನಡೆಸಿಲ್ಲ. ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರಿ ಕಚೇರಿಗಳು ಅವ್ಯವಸ್ಥೆಯ ಆಗರವಾಗಿವೆ. ಸಾರ್ವಜನಿಕ ಆಸ್ಪತ್ರೆಯಿಂದ ಹಿಡಿದು ತಾಲ್ಲೂಕು ಕಚೇರಿಯವರೆಗೆ ಎಲ್ಲ ಕಚೇರಿಗಳು ಅವ್ಯವಸ್ಥೆಯಿಂದ ಕೂಡಿವೆ' ಎಂದರು.

'ಭ್ರಷ್ಟಾಚಾರ ಮಿತಿ ಮೀರಿದೆ. ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದೆ. ಸರ್ಕಾರಿ ಕಚೇರಿಗಳಲ್ಲಿ ಮಧ್ಯವರ್ತಿಗಳಿಲ್ಲದೇ ಯಾವುದೇ ಕೆಲಸ ಆಗುವುದಿಲ್ಲ. ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಸಮರ್ಪಕವಾಗಿ ಕಾರ್ಯ-ನಿರ್ವಹಿಸುತ್ತಿಲ್ಲ, ಇದರಿಂದ ನಿತ್ಯ ರೋಗಿಗಳು ಪರದಾಡುವಂತಾ-ಗಿದೆ. ತಾಲ್ಲೂಕು ಕಚೇರಿಗೆ ನಿತ್ಯ ನೂರಾರು ಜನರು ಆಗಮಿಸುತ್ತಾರೆ. ಆದರೆ, ಮೂಲಭೂತ ಸೌಕರ್ಯಗಳು ಮಾತ್ರ ಮರಿಚೀಕೆಯಾಗಿವೆ. ಇದು ತಹಶೀಲ್ದಾರ್ ಅವರ ಆಡಳಿತ ವೈಫಲ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ' ಎಂದು ಹೇಳಿದರು.

ಬೆಂಗಳೂರು ಪೊಲೀಸ್ ಆಯುಕ್ತ ಕೆ.ಆರ್.ಪುರ ಸರ್ಕಲ್ ಇನ್‌ಸ್ಪೆಕ್ಟರ್ ನಂದೀಶ್‌ಗೆ ಯಾವುದೇ ನೋಟಿಸ್ ನೀಡದೆ ಹುದ್ದೆಯಿಂದ ಅಮಾನತು-ಗೊಳಿಸಿದ್ದರು. ಒತ್ತಡದಿಂದ ಮರಣ ಹೊಂದಿದ್ದಾರೆ. ಸಚಿವ ಎಂಟಿಬಿ ನಾಗರಾಜ ಆಸ್ಪತ್ರೆಗೆ ಭೇಟಿ ನೀಡಿ ಅಂತಿಮ ದರ್ಶನ ಪಡೆಯುವ ವೇಳೆ ಹಣ ಮತ್ತು ಒತ್ತಡವೇ ಕಾರಣ ಎಂದು ಹೇಳಿರುವುದರಿಂದ ಈ ಪ್ರಕರಣದ ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.



ಕೆಂಪೇಗೌಡರ ಪ್ರತಿಮೆ ಉದ್ಘಾಟನೆಯ ಅಂಗವಾಗಿ ಕೋರಮಂಗಲದ 8ನೇ ಬ್ಲಾಕ್ ಕೆಂಪೇಗೌಡರ ಸೊಸೆ ಲಕ್ಷ್ಮಿದೇವಿ ಸಮಾಧಿಯ ಬಳಿ ಪವಿತ್ರ ಮೃತ್ತಿಕೆ ಸಂಗ್ರಹ ಅಭಿಯಾನ ನಡೆಯಿತು

ಕೆಂಪೇಗೌಡರ ಸೊಸೆಯ ಸಮಾಧಿ ಸ್ಥಳದಲ್ಲಿ ಪವಿತ್ರ ಮೃತ್ತಿಕೆ ಸಂಗ್ರಹ

ಬೆಂಗಳೂರು: ಕೆಂಪೇಗೌಡರ ಪ್ರತಿಮೆ ಉದ್ಘಾಟನೆಗೆ ಪೂರಕವಾಗಿ ನಡೆಯುತ್ತಿರುವ ಪವಿತ್ರ ಮೃತ್ತಿಕಾ ಸಂಗ್ರಹ ಅಭಿಯಾನವು ಮಂಗಳವಾರ ಕೋರಮಂಗಲದ 8ನೇ ಬ್ಲಾಕ್ ಕೆಂಪೇಗೌಡರ ಸೊಸೆ ಲಕ್ಷ್ಮಿದೇವಿ ಸಮಾಧಿಯ ಬಳಿ ನಡೆಯಿತು.

ಸಚಿವ ಡಾ.ಸಿ.ಎನ್.ಅಶ್ವತ್ಥ-ನಾರಾಯಣ, ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ, ಬಿಜೆಪಿ ಮುಖಂಡರಾದ ಎನ್.ಆರ್.ರಮೇಶ್, ಶ್ರೀಧರರೆಡ್ಡಿ, ರವಿ, ಲೋಕನಾಥ ರೆಡ್ಡಿ, ಗೀತಾ ವಿವೇಕಾನಂದ ಮುಂತಾದವರು ಲಕ್ಷ್ಮಿದೇವಿ ಸಮಾಧಿಗೆ ಪೂಜೆ ಸಲ್ಲಿಸಿ, ಮೃತ್ತಿಕೆ ಸಂಗ್ರಹಿಸಿದರು. ಬಿಜೆಪಿ ಸಂಘಟನಾ ಕಾರ್ಯದರ್ಶಿ ದಶರಥ ಇದ್ದರು. ಜತೆಗೆ, ಡೊಳ್ಳು ಕುಣಿತ ಮುಂತಾದ ಜಾನಪದ ನೃತ್ಯಗಳ ಮೆರುಗು ಆಕರ್ಷಕವಾಗಿತ್ತು.

ಮೆರವಣಿಗೆಯ ಹಾದಿಯಲ್ಲಿ ಬಿಟಿಎಂ ಬಡಾವಣೆಯಲ್ಲಿ ಇರುವ ಕೆಂಪೇಗೌಡ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಮಡಿವಾಳದ ಸೋಮೇಶ್ವರ ದೇವಸ್ಥಾನ, ಕೋರಮಂಗಲದ ಸಿದ್ಧಾರ್ಥ ಕಾಲೊನಿಯಲ್ಲಿ ಇರುವ ಗಣೇಶನ ದೇವಾಲಯ, ಈಜಿಪುರದ ಶ್ರೀರಾಮ ದೇವಸ್ಥಾನ, ದೊಡ್ಡಮ್ಮದೇವಿ ಮಂದಿರಗಳಿಗೆ ತೆರಳಿ, ಪೂಜೆ ನೆರವೇ-ರಿಸಲಾಯಿತು.

ಯಂತ್ರಕ್ಕೆ ಸಿಲುಕಿ ಕಾರ್ಮಿಕ ಸಾವು

ಬೆಂಗಳೂರು: ಸುಬ್ರಹ್ಮಣ್ಯಪುರ ಠಾಣೆ ವ್ಯಾಪ್ತಿಯಲ್ಲಿರುವ ಗೋಪಾಲಕೃಷ್ಣ ಟೆಕ್ಸ್‌ಟೈಲ್ಸ್ ಮಿಲ್ಸ್ ಕಾರ್ಖಾನೆಯಲ್ಲಿ ಯಂತ್ರಕ್ಕೆ ಸಿಲುಕಿ ಕಾರ್ಮಿಕ ಮುನಿಬೀರಯ್ಯ (57) ಮೃತಪಟ್ಟಿದ್ದಾರೆ.

'ಉತ್ತರಹಳ್ಳಿ ಮುಖ್ಯರಸ್ತೆಯಲ್ಲಿರುವ ಕಾರ್ಖಾನೆಯಲ್ಲಿ ಸೋಮವಾರ ಮಧ್ಯಾಹ್ನ ಈ ಅವಘಡ ಸಂಭವಿಸಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ. ಸ್ಥಳೀಯ ನಿವಾಸಿ ಮುನಿಬೀರಯ್ಯ ಅವರು 12 ವರ್ಷದಿಂದ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.



ಅಮೆರಿಕದ ಯುನಿವರ್ಸಿಟಿ ಆಫ್ ಅಲಬಾಮಾದ ಪ್ರೊ. ಲೇಥಾ ಎಟ್ಟಾಕಾನ್ ಅವರು ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಸೋಮವಾರ ಭೇಟಿ ನೀಡಿದ ಸಂದರ್ಭದಲ್ಲಿ ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಅವರು ಹೂಗುಚ್ಛ ನೀಡಿ ಸ್ವಾಗತಿಸಿದರು.

ಯುಎ ಜತೆ ಬಿಸಿಯು ಒಪ್ಪಂದ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯ (ಬಿಸಿಯು) ಮತ್ತು ಅಮೆರಿಕದ ಯುನಿವರ್ಸಿಟಿ ಆಫ್ ಅಲಬಾಮಾ (ಯುಎ) ವಿವಿಧ ಕೋರ್ಸ್‌ಗಳ ಅಧ್ಯಯನ ಸಂಬಂಧ ಒಪ್ಪಂದ ಮಾಡಿಕೊಂಡಿವೆ.

ಎಂ.ಎಸ್ಸಿ. ಕಂಪ್ಯೂಟರ್ ಸೈನ್ಸ್ ಮತ್ತು ಬಿಸಿಎ ಕೋರ್ಸ್‌ಗಳಿಗೆ ಸಂಬಂಧ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಪಠ್ಯಕ್ರಮ ವಿನ್ಯಾಸ ರೂಪಿಸಲು ನಿರ್ಧರಿಸಲಾಗಿದೆ. ಜತೆಗೆ, ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಅವಕಾಶ ಕಲ್ಪಿಸುವ ಕುರಿತು ಚರ್ಚಿಸಲಾಗಿದೆ ಎಂದು ಕುಲಸಚಿವರು ತಿಳಿಸಿದ್ದಾರೆ.

ಮದ್ಯದ ಅಮಲಿನಲ್ಲಿ ಜಗಳ: ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಣನಕುಂಟೆ ಠಾಣೆ ವ್ಯಾಪ್ತಿಯಲ್ಲಿ ಶಫೀರ್ ಅಹಮ್ಮದ್ (23) ಎಂಬುವವರನ್ನು ಭಾನುವಾರ ರಾತ್ರಿ ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದೆ.

'ಬನ್ನೇರುಘಟ್ಟ ರಸ್ತೆಯ ಪಿಳ್ಳಗಾನ ಹಳ್ಳಿಯ ಶಫೀರ್ ವೆಲ್ಡಿಂಗ್ ಕೆಲಸ ಮಾಡುತ್ತಿದ್ದರು. ಸ್ನೇಹಿತ ಸೈಯದ್ ವಾಜೀದ್ ಎಂಬಾತ ಕೃತ್ಯ ಎಸಗಿ ಪರಾರಿಯಾಗಿದ್ದು, ಆತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಶಫೀರ್ ಹಾಗೂ ಸೈಯದ್ ಒಂದೇ ಕಡೆ ಕೆಲಸ ಮಾಡುತ್ತಿದ್ದರು. ಭಾನುವಾರ ರಾತ್ರಿ ಇಬ್ಬರೂ ಒಟ್ಟಿಗೆ ಮದ್ಯ ಕುಡಿದಿದ್ದರು. ಈ ವೇಳೆ ಮಾತಿನ ಚಕಮಕಿ ನಡೆದು, ಪರಸ್ಪರ ಹೊಡೆದಾಡಿಕೊಂಡಿದ್ದರು. ಅದರಿಂದ ಸಿಟ್ಟಾದ ಸೈಯದ್, ತನ್ನ ಬಳಿಯ ಚಾಕುವಿನಿಂದ ಶಫೀರ್ ಅವರಿಗೆ ಇರಿದು ಪರಾರಿಯಾಗಿದ್ದಾನೆ' ಎಂದು ತಿಳಿಸಿದರು.

ಕೆಂಪೇಗೌಡ ಪ್ರಾಧಿಕಾರ ಕಂದಾಯ ಇಲಾಖೆಗೆ: ವ್ಯಾಪಕ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರವನ್ನು ನಗರಾಭಿವೃದ್ಧಿ ಇಲಾಖೆ ವ್ಯಾಪ್ತಿಯಿಂದ ಕಂದಾಯ ಇಲಾಖೆ ವ್ಯಾಪ್ತಿಗೆ ವಹಿಸಿ ಆದೇಶ ಹೊರಡಿಸಿರುವುದು ರಾಜಕೀಯ ವಲಯದಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿದೆ.

ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಪ್ರಾಧಿಕಾರವನ್ನು ನಗರಾಭಿವೃದ್ಧಿ ಇಲಾಖೆಯ ಸುಪರ್ದಿಗೆ ನೀಡಲಾಗಿತ್ತು.

ಪ್ರಾಧಿಕಾರಕ್ಕೆ ಮುಖ್ಯಮಂತ್ರಿ ಅಧ್ಯಕ್ಷರಾಗಿದ್ದು, ರಾಮನಗರ ಜಿಲ್ಲಾಉಸ್ತುವಾರಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಉಪಾಧ್ಯಕ್ಷರಾಗಿದ್ದರು.

ಇದೀಗ ಪ್ರಾಧಿಕಾರ ಕಂದಾಯ ಇಲಾಖೆಗೆ ಬಂದಿದ್ದರೂ ಮುಖ್ಯಮಂತ್ರಿ ಬೊಮ್ಮಾಯಿ ಅಧ್ಯಕ್ಷರಾಗಿ ಮತ್ತು ಅಶ್ವತ್ಥನಾರಾಯಣ ಉಪಾಧ್ಯಕ್ಷರಾಗಿಯೇ ಮುಂದುವರೆಯುತ್ತಾರೆ. ಅದರಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ. ರಾಮನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಸುತ್ತಮುತ್ತ ಇರುವುದರಿಂದ ನಗರಾಭಿವೃದ್ಧಿ ಇಲಾಖೆಯ ಸುಪರ್ದಿಗೆ ನೀಡಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಕಂದಾಯ ಸಚಿವ ಆರ್.ಅಶೋಕ ಅವರು 'ಪ್ರಾಧಿಕಾರವನ್ನು ತಮ್ಮ ಇಲಾಖೆಗೆ ನೀಡಬೇಕು' ಎಂದು ಮುಖ್ಯಮಂತ್ರಿಯವರಲ್ಲಿ ಪಟ್ಟು ಹಿಡಿದ ಕಾರಣ, ಪ್ರಾಧಿಕಾರವನ್ನು ಕಂದಾಯ ಇಲಾಖೆಗೆ ಒಪ್ಪಿಸಿದ್ದಾರೆ. ಇದರಿಂದ ಸಾಂಸ್ಥಿಕ ರಚನೆಯಲ್ಲಿ ಯಾವುದೇ ಬದಲಾವಣೆ ಆಗದೇ ಇದ್ದರೂ, ಕೆಲಸ ಕಾರ್ಯಗಳಲ್ಲಿ ಅನುಮತಿ ಪಡೆಯಲು ತಡವಾಗುವ ಸಾಧ್ಯತೆ ಇರುತ್ತದೆ ಎಂದು ಮೂಲಗಳು ಹೇಳಿವೆ.

ಬೆಂಗಳೂರು ಅಭಿವೃದ್ಧಿಗೆ ಕೆಂಪೇಗೌಡ ಅವರ ಶ್ರಮವನ್ನು ಪರಿಗಣಿಸಿ, ಬೆಂಗಳೂರು ನಗರದಲ್ಲಿ ಮತ್ತು ಸುತ್ತಮುತ್ತಲಲ್ಲಿ, ಬೆಂಗಳೂರು ಕಂದಾಯ ವಿಭಾಗದ ಗ್ರಾಮಾಂತರ, ಚಿಕ್ಕಬಳ್ಳಾಪುರ, ರಾಮನಗರ ಮತ್ತು ತುಮಕೂರು ಜಿಲ್ಲೆಗಳಲ್ಲಿನ ಪ್ರಾರಂಪರಿಕ ತಾಣಗಳು, ಪ್ರವಾಸೋದ್ಯಮ ಸ್ಥಳಗಳು ಮತ್ತು ಸ್ಮಾರಕಗಳನ್ನು ಅಂತರರಾಷ್ಟ್ರೀಯ ಪಾರಂಪರಿಕ, ಸಾಂಸ್ಕೃತಿಕ ಮತ್ತು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿಪಡಿಸುವುದರೊಂದಿಗೆ ಅವುಗಳ ನಿರ್ವಹಣೆಗೆ ಪ್ರಾಧಿಕಾರ ರಚನೆಯಾಗಿದೆ.

ಮೆಟ್ರೊ ರೈಲು ಪ್ರಯಾಣಕ್ಕಿನ್ನು ಕ್ಯೂಆರ್ ಕೋಡ್

ಒಂದನೇ ಪುಟದಿಂದ...

'ಮನೆಯಲ್ಲೇ ಕುಳಿತು ಕ್ಯೂಆರ್ ಕೋಡ್ ಟಿಕೆಟ್ ಸಿದ್ಧಪಡಿಸಿ ಕೊಂಡುಬಂದರೆ ಅದನ್ನು ನಿಲ್ದಾಣದ ಪ್ರವೇಶಗೇಟ್‌ನಲ್ಲಿ ಸ್ಕ್ಯಾನ್ ಮಾಡಿ ಒಳಹೋಗಬಹುದು. ಮನೆಯಿಂದಲೇ ಚಿತ್ರಮಂದಿರಗಳ ಟಿಕೆಟ್ ಖರೀದಿಸಿ ಸ್ಕ್ಯಾನ್ ಮಾಡಿ ಒಳ ಹೋಗುವ ರೀತಿಯಲ್ಲೇ ಮೆಟ್ರೊ ರೈಲು ಪ್ರಯಾಣಿಕರು ಟಿಕೆಟ್ ಖರೀದಿಸಬಹುದು' ಎಂದು ಅಧಿಕಾರಿಗಳು ಹೇಳಿದ್ದಾರೆ.

'ಸುಳ್ಳು ಪ್ರಮಾಣಪತ್ರ': ಜಾರಕಿಹೊಳಿ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚುನಾವಣಾ ಆಯೋಗಕ್ಕೆ ಶಾಸಕ ರಮೇಶ ಜಾರಕಿಹೊಳಿ ಅವರು ಸುಳ್ಳು ಪ್ರಮಾಣಪತ್ರ ಸಲ್ಲಿಸಿದ್ದು, ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಆಗ್ರಹಿಸಿ ಕಾಂಗ್ರೆಸ್ ನಾಯಕರು ಚುನಾವಣಾ ಆಯೋಗಕ್ಕೆ ಸೋಮವಾರ ದೂರು ಸಲ್ಲಿಸಿದರು.

ಕೆಪಿಸಿಸಿ ಮಾಧ್ಯಮ ವಿಭಾಗದ ಉಪಾಧ್ಯಕ್ಷ ರಮೇಶ್ ಬಾಬು ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ. ಲಕ್ಷ್ಮಣ್ ಅವರು ಕೆ.ಆರ್. ವೃತ್ತದ ಬಳಿ ಶೇಷಾದ್ರಿ ರಸ್ತೆಯಲ್ಲಿರುವ ರಾಜ್ಯ ಚುನಾವಣಾ ಆಯುಕ್ತರ ಕಚೇರಿಗೆ ತೆರಳಿ ದೂರು ನೀಡಿದರು.

ಬಳಿಕ ಮಾತನಾಡಿದ ರಮೇಶ್ ಬಾಬು, 'ಚುನಾವಣೆ ಸಂದರ್ಭದಲ್ಲಿ ಸಲ್ಲಿಸಿದ ಪ್ರಮಾಣಪತ್ರದಲ್ಲಿ ರಮೇಶ ಜಾರಕಿಹೊಳಿ ಅಪೂರ್ಣ ಮಾಹಿತಿ ನೀಡಿದ್ದಾರೆ. ಸೌಭಾಗ್ಯ ಶುಗರ್ ಕಂಪನಿ ಸೇರಿ ಬೇರೆ ಬೇರೆ ಕಂಪನಿಗಳಿಗೆ ಸಂಬಂಧಿಸಿದ ದಾಖಲಾತಿಗಳನ್ನು ಅವರು ಕೊಟ್ಟಿಲ್ಲ. ಅವರ ಕುಟುಂಬದ ಸದಸ್ಯರ ಹೆಸರಿನಲ್ಲಿ ಇರುವ ದಾಖಲೆಗಳನ್ನೂ ಕೊಟ್ಟಿಲ್ಲ' ಎಂದು ದೂರಿದರು.

ಎಂ. ಲಕ್ಷಣ್ ಮಾತನಾಡಿ, 'ಇಬ್ಬರು ಮಕ್ಕಳು ಸೇರಿ ಮೂವರ ಹೆಸರಿನಲ್ಲಿ ಸೌಭಾಗ್ಯ ಶುಗರ್ ಕಂಪನಿ ಮೂಲಕ ಒಂಬತ್ತು ಬ್ಯಾಂಕ್‌ಗಳಲ್ಲಿ ರಮೇಶ ಜಾರಕಿಹೊಳಿ ₹ 578 ಕೋಟಿ ಸಾಲ ಪಡೆದಿದ್ದಾರೆ. ಈ ಕಂಪನಿ ದಿವಾಳಿ ಎಂದು ಘೋಷಣೆ ಮಾಡಿದ್ದರೂ ಬೇನಾಮಿ ಹೆಸರಲ್ಲಿ ನಡೆಯುತ್ತಿದೆ' ಎಂದರು.

ಕುಗ್ರಾಮದ ಸಿ. ಕರಿಯಪ್ಪಗೆ ರಾಜ್ಯೋತ್ಸವ ಪ್ರಶಸ್ತಿಯ ಗರಿ

ಪ್ರಜಾವಾಣಿ ವಾರ್ತೆ



ಸಿ.ಕರಿಯಪ್ಪ

ದಾಬಸ್‌ಪೇಟೆ: ದಶಕಗಳಿಂದ ನೇತ್ರ ತಪಾಸಣೆ ಮತ್ತು ಉಚಿತ ಚಿಕಿತ್ಸಾ ಶಿಬಿರ ಏರ್ಪಡಿಸಿ ಸಾವಿರಾರು ಮಂದಿಗೆ ಬೆಳಕಾಗುವ ಮೂಲಕ ಸಮಾಜ ಸೇವೆಯಲ್ಲಿ ತೊಡಗಿರುವ ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿ ವ್ಯಾಪ್ತಿಯ ಕುಗ್ರಾಮ ಬುಗಡಿಹಳ್ಳಿ ಗೊಲ್ಲರಹಟ್ಟಿಯ ಸಿ.ಕರಿಯಪ್ಪ ಅವರಿಗೆ ಸಮಾಜ ಸೇವೆ ವಿಭಾಗದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ.

ಆರೋಗ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾಗಿರುವ ಕರಿಯಪ್ಪ ಅವರು ಜನಸಾಮಾನ್ಯರ ಆರೋಗ್ಯದ ದೃಷ್ಟಿಯಿಂದ ಉಚಿತ ಆರೋಗ್ಯ ಶಿಬಿರಗಳು ಹಾಗೂ ನೇತ್ರ ತಪಾಸಣಾ ಶಿಬಿರಗಳನ್ನು ಏರ್ಪಡಿಸಿ ಅಗತ್ಯ ಇರುವವರಿಗೆ ಉಚಿತವಾಗಿ ಶಸ್ತ್ರಚಿಕಿತ್ಸೆ ಮಾಡಿಸಿ, ಕನ್ನಡಕಗಳನ್ನು ಕೊಡಿಸುವ ಮೂಲಕ ನಿರಂತರ ಸಮಾಜಸೇವೆಯಲ್ಲಿ ತೊಡಗಿಕೊಂಡಿದ್ದಾರೆ.

'ನಾನು ಪ್ರಶಸ್ತಿಗೆ ಅಪೇಕ್ಷೆಪಟ್ಟವನಲ್ಲ. ನನ್ನ ಸೇವೆಯನ್ನು ಗುರುತಿಸಿ ಸರ್ಕಾರ ಪ್ರಶಸ್ತಿಯನ್ನು ನೀಡಿರುವುದು ನಾನು ಇನ್ನಷ್ಟು ಸೇವೆ ಮಾಡಲು ಪ್ರೇರಣೆ ನೀಡಿದೆ. ನಮ್ಮ ಸೋಂಪುರ ಭಾಗಕ್ಕೆ ಇದುವರೆಗೆ ರಾಜ್ಯೋತ್ಸವ ಪ್ರಶಸ್ತಿ ಸಿಕ್ಕಿರಲಿಲ್ಲ. ಅದು ನನ್ನ ಮೂಲಕ ಸಿಕ್ಕಿರುವುದು ಇನ್ನಷ್ಟು ಖುಷಿ ತಂದಿದೆ' ಎಂದು ಸಿ.ಕರಿಯಪ್ಪ ಅವರು ಹೇಳಿದರು.



ಬ್ಯಾಟರಾಯನಪುರ ವ್ಯಾಪ್ತಿಯಲ್ಲಿ ಅಮೃತನಗರ, ದಾಸರಹಳ್ಳಿ ಹಾಗೂ ಥಣಿಸಂದ್ರದ ಭರತ್ ನಗರದಲ್ಲಿ ₹ 1.50 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ಡಾಂಬರು ಮತ್ತು ಕಾಂಕ್ರೀಟ್ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣ ಬೈರೇಗೌಡ ಚಾಲನೆ ನೀಡಿದರು. ಎನ್.ಎನ್.ಶ್ರೀನಿವಾಸಯ್ಯ, ಎಂ.ಜಯಗೋಪಾಲಗೌಡ, ಡಿ.ಬಿ.ಸುರೇಶ್ ಗೌಡ, ಡಿ.ಸಿ.ಮುನಿರಾಜು, ಡಿ.ಸಿ.ಮುನಿಸ್ವಾಮಿ, ಡಿ.ಬಿ.ಸುರೇಶ್, ನವೀನ್ ಮತ್ತು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ನಾಗಪ್ಪ ಹಾಜರಿದ್ದರು.

'ಕೃಷಿಯಲ್ಲಿ ನವೋದ್ಯಮ' ಘೋಷಣೆ ಅಡಿ ಆಯೋಜನೆ • ನ.3ರಿಂದ ಆರಂಭ, 15 ಲಕ್ಷ ಜನರು ಸೇರುವ ನಿರೀಕ್ಷೆ

'ಕೃಷಿ ಮೇಳ'ಕ್ಕೆ ಜಿಕೆವಿಕೆ ಆವರಣ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ವರ್ಷಗಳ ಬಳಿಕ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಅದ್ದೂರಿಯಾಗಿ 'ಕೃಷಿಯಲ್ಲಿ ನವೋದ್ಯಮ' ಘೋಷಣೆ ಅಡಿ 'ಕೃಷಿ ಮೇಳ' ಆಯೋಜಿಸುತ್ತಿದ್ದು ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿ.ಕೆ.ವಿ.ಕೆ)ದ ಆವರಣವು ಸಜ್ಜಾಗುತ್ತಿದೆ. ನ.3ರಿಂದ 6ರ ತನಕ ಕೃಷಿ ಮೇಳವು ನಡೆಯಲಿದ್ದು, ಆವರಣದಲ್ಲಿ ಭರದ ಸಿದ್ಧತೆಗಳು ನಡೆಯುತ್ತಿವೆ.

ನಾಲ್ಕು ದಿನಗಳ ಮೇಳಕ್ಕೆ ಅಂದಾಜು 15 ಲಕ್ಷ ಜನರು ಸೇರುವ ನಿರೀಕ್ಷೆಯಿದೆ. ಕೃಷಿ ವಿವಿಯ ವಿಜ್ಞಾನಿಗಳು ಅಭಿವೃದ್ಧಿ ಪಡಿಸಿರುವ 9 ತಳಿಗಳನ್ನು ಬಿಡುಗಡೆ ಮಾಡಲಾಗುತ್ತಿದ್ದು, ಬೆಳೆಗಳ ಪ್ರಾತ್ಯಕ್ಷಿಕೆಯನ್ನು (ತಾಕು) ಕುಲಪತಿ ಡಾ.ಎಸ್.ವಿ.ಸುರೇಶ ಸೋಮವಾರ ಪರಿಶೀಲಿಸಿದರು.

ರಾಜ್ಯಪಾಲರಿಂದ ಉದ್ಘಾಟನೆ: ನ.3ರಂದು ಬೆಳಿಗ್ಗೆ 11ಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಕೃಷಿ ಮೇಳ ಉದ್ಘಾಟಿಸಲಿದ್ದಾರೆ. ಸಚಿವ ಬಿ.ಸಿ.ಪಾಟೀಲ, ಶಾಸಕ ಕೃಷ್ಣ ಬೈರೇಗೌಡ ಪಾಲ್ಗೊಳ್ಳಲಿದ್ದಾರೆ. ಆನ್‌ಲೈನ್‌ನಲ್ಲೂ ಕೃಷಿ ಮೇಳ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಕುಲಪತಿ ಡಾ.ಎಸ್.ವಿ.ಸುರೇಶ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಒಟ್ಟು 700 ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗಿದೆ. ಮಣ್ಣುರಹಿತ ಕೃಷಿ, ಕೃಷಿಯಲ್ಲಿ ಡ್ರೋನ್ ಬಳಕೆ, ಆಟೋಮೇಟೆಡ್ ಕೃಷಿ ಯಂತ್ರೋಪಕರಣ, ಕೃಷಿ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆ ಈ ಬಾರಿಯ ಆಕರ್ಷಣೆ' ಎಂದರು.

ಸಿರಿಧಾನ್ಯ ಹಾಗೂ ಅವುಗಳ ಮಹತ್ವ, ಔಷಧೀಯ ಮತ್ತು ಸುಗಂಧ ದ್ರವ್ಯ ಸಸ್ಯ, ಜಲಾನಯನ ನಿರ್ವಹಣೆ, ಸಾವಯವ ಕೃಷಿ ಪದ್ಧತಿ, ಸಮಗ್ರ ಪೋಷಕಾಂಶಗಳು, ರೋಗ ನಿರ್ವಹಣೆ, ಹನಿ ಹಾಗೂ ತುಂತುರು ನೀರಾವರಿ ಪದ್ಧತಿ, ಮಳೆ ಮತ್ತು ಚಾವಣಿ ನೀರು ಸಂಗ್ರಹ ಯೋಜನೆಯ ಬಗ್ಗೆ ಮೇಳದಲ್ಲಿ ತಜ್ಞರಿಂದ ರೈತರಿಗೆ ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು.

'ಸುಧಾರಿತ ಕೃಷಿ ಯಂತ್ರೋಪಕರಣಗಳ ಪ್ರದರ್ಶನ, ಕೊಯ್ಲೋತ್ತರ ತಾಂತ್ರಿಕತೆ, ಕೃಷಿ ಉತ್ಪನ್ನ ಸಂಸ್ಕರಣೆ, ಮೌಲ್ಯವರ್ಧನೆ, ಬಿತ್ತನೆ ಬೀಜ ಪರೀಕ್ಷೆ ಹಾಗೂ ಶೇಖರಣೆ, ಮೀನು ಸಾಕಾಣಿಕೆ, ಹವಾಮಾನ ಚತುರ ಕೃಷಿ, ಕೃಷಿಯಲ್ಲಿ ನೂತನ ಮಾಹಿತಿ ತಂತ್ರಜ್ಞಾನ, ಜೈವಿಕ ಹಾಗೂ ನವೀಕರಿಸಲ್ಪಡುವ ಇಂಧನದ ಪ್ರಾತ್ಯಕ್ಷಿಕೆ ಮೇಳದಲ್ಲಿ ಇರಲಿದೆ' ಎಂದು ಹೇಳಿದರು.

ಜಾನುವಾರು ಪ್ರದರ್ಶನ ಇಲ್ಲ: ರಾಜ್ಯದಲ್ಲಿ ಜಾನುವಾರುಗಳಿಗೆ ಚರ್ಮಗಂಟು ರೋಗ ಕಾಣಿಸಿಕೊಂಡಿದ್ದು, ಈ ಬಾರಿ ಮೇಳದಲ್ಲಿ ಜಾನುವಾರು ಪ್ರದರ್ಶನ ಇರುವುದಿಲ್ಲ ಎಂದು ಕುಲಪತಿ ಹೇಳಿದರು.

ಶಿಕ್ಷಣ ನಿರ್ದೇಶಕ ಡಾ.ಕೆ.ಸಿ.ನಾರಾಯಣಸ್ವಾಮಿ, ವಿಸ್ತರಣಾ ನಿರ್ದೇಶಕ ಡಾ.ಕೆ.ನಾರಾಯಣಗೌಡ, ಸಂಶೋಧನಾ ನಿರ್ದೇಶಕ ಡಾ.ಕೆ.ಬಿ.ಉಮೇಶ, ಪ್ರಾಧ್ಯಾಪಕ ಡಾ.ಕೆ.ಶಿವರಾಮು ಹಾಜರಿದ್ದರು.



ಜಿಕೆವಿಕೆ ಆವರಣದಲ್ಲಿ ಹೊಸ ತಳಿಯ ಪ್ರಾತ್ಯಕ್ಷಿಕೆಯನ್ನು ಕೃಷಿ ವಿವಿ ಕುಲಪತಿ ಡಾ.ಎಸ್.ವಿ. ಸುರೇಶ (ಎಡದಿಂದ 5ನೆಯವರು) ವೀಕ್ಷಿಸಿದರು. ವಿಸ್ತರಣಾ ನಿರ್ದೇಶಕರು ಹಾಗೂ ವಿಜ್ಞಾನಿಗಳು ಹಾಜರಿದ್ದರು

ಹಲವು ಬಗೆಯ ನಾಟಿ ಕೋಳಿ

ಮೇಳದಲ್ಲಿ ನಾಟಿ ಕೋಳಿಗಳು ಆಕರ್ಷಣೆ ಇರಲಿದೆ. ಡಿ.ಪಿ ಕ್ರಾಸ್, ಕಾವೇರಿ, ಅಸೀಲ್ ಕ್ರಾಸ್, ಗಿರಿರಾಜ, ಸ್ವರ್ಣಧಾರ, ಫೈಟರ್, ನೇಕೆಡ್ ನೆಕ್, ಗ್ರಾಮಪ್ರಿಯ, ವನರಾಜ, ಟರ್ಕಿ, ಬಾತುಕೋಳಿ, ಗಿನಿ ಫೌಲ್ ಮೇಳದಲ್ಲಿ ಆಕರ್ಷಣೆ ಆಗಿರಲಿವೆ.

ಗೋಪಾಲಗೌಡ, ನವಿಕ್ರಮ್‌ಗೆ ರಾಜ್ಯಮಟ್ಟದ ಕೃಷಿ ಪುರಸ್ಕಾರ


ಮೇಳದಲ್ಲಿ ಪ್ರಗತಿ ಪರ ರೈತರಿಗೆ ರಾಜ್ಯ ಹಾಗೂ ಜಿಲ್ಲಾಮಟ್ಟದ ಪ್ರಶಸ್ತಿ ನೀಡಲಾಗುತ್ತಿದೆ.

ಚಿಕ್ಕಬಳ್ಳಾಪುರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕಿನ ಹಿತ್ತಲಹಳ್ಳಿಯ ಗ್ರಾಮ ಪ್ರಗತಿ ಪರ ಕೃಷಿಕ ಎಚ್.ಜಿ.ಗೋಪಾಲಗೌಡ ಅವರು 'ಎಚ್.ಡಿ.ದೇವೇಗೌಡ ರಾಜ್ಯಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ'ಗೆ ಆಯ್ಕೆ ಆಗಿದ್ದಾರೆ.

ಇವರು ಸಮಗ್ರ ಕೃಷಿಗೆ ಒತ್ತು ನೀಡುತ್ತಿದ್ದು, ರಾಗಿ, ಅವರೆ, ಹುರುಳಿ, ಅಲಸಂದೆ, ಜೋಳ, ಕಡಲೆ ಹಾಗೂ ಸಿರಿಧಾನ್ಯಗಳಾದ ಸಾಮೆ, ನವಣೆಯನ್ನು ಬೆಳೆಯುತ್ತಿದ್ದಾರೆ. ತೋಟಗಾರಿಕೆ ಬೆಳೆಗಳಾದ ಮಾವು, ತೆಂಗು, ಈರುಳ್ಳಿ, ಬೆಳ್ಳುಳ್ಳಿ, ಬೆಂಡೆ, ಟೊಮ್ಯಾಟೊ, ಗೋರಿಕಾಯಿ ಬೆಳೆ ಬೆಳೆಯುತ್ತಿದ್ದಾರೆ. ರೇಷ್ಮೆ ಜೊತೆಗೆ ಅರಣ್ಯ ಕೃಷಿಗೂ ಒತ್ತು ನೀಡುತ್ತಿದ್ದಾರೆ.

ದೊಡ್ಡಬಳ್ಳಾಪುರದ ಲಕ್ಷ್ಮೀದೇವಿಪುರದ ಸಿ. ನವಿಕ್ರಮ್ ಅವರಿಗೆ 'ಡಾ.ಎಂ.ಎಚ್.ಮರಿಗೌಡ ರಾಜ್ಯಮಟ್ಟದ ತೋಟಗಾರಿಕೆ ಪ್ರಶಸ್ತಿ' ಲಭಿಸಿದೆ. ಇವರು ತಮ್ಮ 24 ಎಕರೆಯಲ್ಲಿ ಮಾವು, ದ್ರಾಕ್ಷಿ, ಸೀಬೆ, ಸಪೋಟ, ನೇರಳೆ, ಹಲಸು, ಡ್ರ್ಯಾಗನ್ ಹಣ್ಣು, ನಿಂಬೆ, ದಾಳಿಂಬೆ, ಬಾಳೆ, ಪರಂಗಿ, ಮೂಸಂಬಿ, ಸೀತಾಫಲ, ಚಕೋತ, ಅಂಜೂರ, ನೆಲ್ಲಿ, ಕಿತ್ತಳೆ, ಅನಾನಸ್ ಬೆಳೆಯುತ್ತಿದ್ದಾರೆ.

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಗೂಳೂರುದೊಡ್ಡಿಯ ಸಿ.ಪಿ. ಕೃಷ್ಣ, ಹಾಸನ ಜಿಲ್ಲೆ ಹೊಳೆನರಸಿಪುರ ತಾಲ್ಲೂಕಿನ ಬಂಟರತಳಾಲು ಗ್ರಾಮದ ಎಂ.ಕವಿತಾ ಅವರಿಗೆ ಕ್ರಮವಾಗಿ 'ಕ್ಯಾನ್ ಬ್ಯಾಂಕ್ ಅತ್ಯುತ್ತಮ ರೈತ ಹಾಗೂ ರೈತ ಮಹಿಳೆ ಪುರಸ್ಕಾರ', ಚಿಕ್ಕಬಳ್ಳಾಪುರ ಜಿಲ್ಲೆ ಜಂಗಮಕೋಟೆಯ ಎಂ.ಮುನೇಗೌಡರಿಗೆ ಡಾ.ಆರ್. ದ್ವಾರಕೀನಾಥ್ ರೈತ ಪುರಸ್ಕಾರ, ಹಾಸನ ಜಿಲ್ಲೆ ಕಂದಲಿಯ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ.ರಾಜೇಗೌಡ ಅವರಿಗೆ ಡಾ.ಆರ್. ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ ಲಭಿಸಿದೆ.



ಗೋಪಾಲಗೌಡ



ಸಿ.ನವಿಕ್ರಮ್



ಸಿ.ಪಿ.ಕೃಷ್ಣ



ಎಂ.ಕವಿತಾ



ಡಾ.ರಾಜೇಗೌಡ



ಎಂ.ಟಿ. ಮುನೇಗೌಡ

ಬಿಡುಗಡೆ ಮಾಡುವ ಹೊಸ ತಳಿಗಳು

ಬೆಳೆ	ತಳಿ
ಭತ್ತ	ಕೆಎಂಪಿ 225
ಭತ್ತ	ಆರ್‌ಎನ್‌ಆರ್ 15048
ಮುಸುಕಿನ ಜೋಳ	ಎಂಎಎಚ್ 14-138
ಕೊರಲೆ	ಜಿಪಿಯುಬಿಟಿ 2
ಅವರೆ	ಎಚ್‌ಎ 5
ಎಳ್ಳು	ಜಿಕೆವಿಕೆಎಸ್ 1
ಹುಚ್ಚೆಳ್ಳು	ಕೆಬಿಎನ್ 2
ಹರಳು ಸಂಕರಣ ತಳಿ	ಐಸಿಎಚ್ 66
ಮೇವಿನ ಜೋಳ	ಸಿಎನ್‌ಎಫ್‌ಎಸ್ 1

ಮಣ್ಣುರಹಿತ ಕೃಷಿ ಆಕರ್ಷಣೆ

ಮೇಳಕ್ಕೆ ಬರುವ ರೈತರಿಗೆ ಮಣ್ಣು ರಹಿತ ಕೃಷಿಯ ಮಾಹಿತಿ ನೀಡಲಾಗುವುದು. ಅದರ ಪ್ರಾತ್ಯಕ್ಷಿಕೆ ಸಹ ಮಾಡಲಾಗಿದೆ. ಮಣ್ಣಿನ ಅವಶ್ಯಕತೆ ಇರುವುದಿಲ್ಲ. ಈ ಪದ್ಧತಿಯಲ್ಲಿ ಕಡಿಮೆ ಅವಧಿಯಲ್ಲಿ ಬೆಳೆ ಶೀಘ್ರವಾಗಿ ಬೆಳವಣಿಗೆ ಆಗಲಿದೆ. ನೀರು ಸಹ ಪೋಲಾಗುವುದಿಲ್ಲ. ಶೇ 90ಕ್ಕಿಂತ ಹೆಚ್ಚು ನೀರಿನ ಸದ್ಬಳಕೆ ಮಾಡಬಹುದಾಗಿದೆ ಎಂದು ಡಾ.ನಾಗರಾಜು ಹುಲ್ಲೂರು ತಿಳಿಸಿದರು. ಕಡಿಮೆ ಸ್ಥಳದಲ್ಲಿ ಹೆಚ್ಚು ಉತ್ಪಾದನೆ ಮಾಡಬಹುದಾಗಿದೆ. ವರ್ಷಪೂರ್ತಿ ಬೆಳೆ ಬೆಳೆಯಬಹುದಾಗಿದೆ. ಸಸ್ಯಗಳಿಗೆ ಒದಗಿಸಿದ ಪೋಷಕಾಂಶಗಳು ವ್ಯರ್ಥವಾಗದೆ ಸದ್ಬಳಕೆ ಆಗುತ್ತದೆ. ಕಳೆ ಬರುವುದಿಲ್ಲ. ಕೀಟ ಮತ್ತು ರೋಗಬಾಧೆ ಮುಕ್ತವಾದ ಬೆಳೆ ಪಡೆಯಬಹುದು ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ವನ್ಯಜೀವಿ ಸಾವು ತಡೆ ಕೋರಿ ಪಿಐಎಲ್

ಬೆಂಗಳೂರು: 'ರಾಜ್ಯದ ವಿವಿಧೆಡೆ ಆನೆಗಳು ಮತ್ತು ವನ್ಯಜೀವಿಗಳು ವಿದ್ಯುತ್ ತಂತಿ ತಗುಲಿ ಸಾವನ್ನಪ್ಪುತ್ತಿರುವ ಪ್ರಕರಣಗಳು ಹೆಚ್ಚುತ್ತಿದ್ದು ಇದನ್ನು ನಿಯಂತ್ರಿಸಲು ನಿರ್ದೇಶಿಸಬೇಕು' ಎಂದು ಕೋರಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ (ಪಿಐಎಲ್) ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಹೈಕೋರ್ಟ್ ವಕೀಲ ಅಂಕುಶ್ ಎಣ್ಣೆಮಜಲು ಸಲ್ಲಿಸಿರುವ ಪಿಐಎಲ್ ಅನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅರಣ್ಯ ಮತ್ತು ಪರಿಸರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೇರಿದಂತೆ ಏಳು ಜನ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

'ಅರಣ್ಯ ಮತ್ತು ಇಂಧನ ಇಲಾಖೆಯ ವಿಚಕ್ಷಣಾ ವಿಭಾಗದ ಅಧಿಕಾರಿಗಳು ಈ ವಿಷಯದಲ್ಲಿ ನಿರ್ಲಕ್ಷ್ಯ ತೋರುತ್ತಿದ್ದಾರೆ. ಈ ದಿಸೆಯಲ್ಲಿ ರಾಜ್ಯ ಸರ್ಕಾರ ಸೂಕ್ತ ಮಾರ್ಗದರ್ಶಿ ಸೂತ್ರ ಹೊರಡಿಸಲು ನಿರ್ದೇಶಿಸಬೇಕು. ಇಂತಹ ನಿರ್ಲಕ್ಷ್ಯದಿಂದ ಆನೆಗಳ ಸಂತತಿ ಕ್ಷೀಣವಾಗಬಲ್ಲುದು. ಆದ್ದರಿಂದ, ಸಂಬಂಧಿಸಿದ ಅಧಿಕಾರಿಗಳಿಗೆ ಈ ಕುರಿತಂತೆ ನಿರ್ದೇಶಿಸಬೇಕು' ಎಂದು ಕೋರಿದ್ದಾರೆ. ಅರ್ಜಿದಾರರ ಪರ ವಕೀಲ ಧರ್ಮಪಾಲ್ ವಾದ ಮಂಡಿಸಿದರು.



ಬಸವನಗುಡಿ: ಫುಟ್‌ಪಾತ್ ಒತ್ತುವರಿ ತೆರವಿಗೆ ಆಗ್ರಹ

ಬೆಂಗಳೂರು: ಬಸವನಗುಡಿಯ ಕೆ.ಆರ್. ರಸ್ತೆಯ ಎರಡೂ ಬದಿಯಲ್ಲಿ ದಿನರಾತ್ರಿ ಕಾರುಗಳು ನಿಲುಗಡೆಯಾಗುತ್ತಿದ್ದು, ಫುಟ್‌ಪಾತ್ ವ್ಯಾಪಾರಿಗಳ ತಾಣವಾಗಿದೆ. ಸ್ಥಳೀಯ ನಿವಾಸಿಗಳಿಗೆ ಈ ಬಗ್ಗೆ ಸಾಕಷ್ಟು ತೊಂದರೆಯಾಗಿದೆ. ಈ ಬಗೆಗೆ ದೂರು ನೀಡಿದರೂ ಅಧಿಕಾರಿಗಳು ಕ್ರಮ ತೆಗೆದುಕೊಂಡಿಲ್ಲ ಎಂದು ಬಿ.ಎಸ್. ವಿಶ್ವನಾಥ್ ದೂರಿದ್ದಾರೆ.

'ಪಿಂಚಣಿದಾರರ ಸ್ವರ್ಗದಂತಿದ್ದ ಬಸವನಗುಡಿಯ ನಮ್ಮ ಪ್ರದೇಶ ಇದೀಗ ಕಾಂಕ್ರೀಟ್ ಕಾಡಾಗಿದೆ. ಅಕ್ರಮ ಕಟ್ಟಡಗಳು ಇಲ್ಲಿ ಬಂದಿವೆ. ಜೊತೆಗೆ ಫುಟ್‌ಪಾತ್‌ನಲ್ಲಿ ವ್ಯಾಪಾರಿಗಳು ಹಾಗೂ ವಾಹನಗಳ ನಿಲುಗಡೆಯಿಂದ ಸಂಕಷ್ಟ ಎದುರಾಗಿದೆ. ಈ ಬಗ್ಗೆ ನಿಮಗೆ ಹಾಗೂ ಸ್ಥಳೀಯ ಅಧಿಕಾರಿಗಳಿಗೆ ಪತ್ರ ಬರೆದರೂ ಕ್ರಮ ಕೈಗೊಂಡಿಲ್ಲ' ಎಂದು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಬರೆದ ಪತ್ರದಲ್ಲಿ ವಿಶ್ವನಾಥ್ ಆರೋಪಿಸಿದ್ದಾರೆ.

'ಕೆ.ಆರ್. ರಸ್ತೆಯ ಎರಡೂ ಬದಿಯಲ್ಲಿ ಕಾರು, ವಾಹನಗಳು ನಿಲುಗಡೆಯಾಗಿರುತ್ತವೆ. ಚರಂಡಿ ವ್ಯವಸ್ಥೆ ಹದಗೆಟ್ಟಿದ್ದು, ಸದಾ ತೆರೆದುಕೊಂಡಿರುತ್ತದೆ. ತಳ್ಳುಗಾಡಿಯವರು ವ್ಯಾಪಾರಕ್ಕಾಗಿ ರಸ್ತೆ, ಫುಟ್‌ಪಾತ್ ಅನ್ನು ಅತಿಕ್ರಮಿಸಿಕೊಂಡಿರುವುದರಿಂದ ನಮಗೆಲ್ಲ ತೊಂದರೆಯಾಗುತ್ತಿದೆ. ಕೂಡಲೇ ಈ ಅತಿಕ್ರಮವನ್ನು ತೆರವುಗೊಳಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಫುಟ್‌ಪಾತ್‌ನಲ್ಲಿ ಅತಿಕ್ರಮ ಮಾಡಿಕೊಂಡವರೊಂದಿಗೆ ಸಂಚಾರ ಪೊಲೀಸರು, ಹೊಯ್ಸಳ ಗಸ್ತು ವಾಹನದವರು ಶಾಮೀಲಾಗಿದ್ದು, ಯಾವುದೇ ಕ್ರಮ ಕೈಗೊಳ್ಳುವುದಿಲ್ಲ' ಎಂದು ದೂರಿದ್ದಾರೆ.

ನಕಲಿ ಅಂಕಪಟ್ಟಿ: ಪ್ರಕರಣ ರದ್ದುಗೊಳಿಸಲು ಹೈಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ ಇಲಾಖೆಯಲ್ಲಿ ಸಹಾಯಕ ಉಪನ್ಯಾಸಕರ ಹುದ್ದೆ ಗಿಟ್ಟಿಸಿಕೊಳ್ಳಲು ನಕಲಿ ಅಂಕಪಟ್ಟಿ ಸಲ್ಲಿಸಿದ ಆರೋಪ ಎದುರಿಸುತ್ತಿರುವ ಇಬ್ಬರು ಅಭ್ಯರ್ಥಿಗಳ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

'ನಮ್ಮ ವಿರುದ್ಧದ ಪ್ರಕರಣ ರದ್ದುಗೊಳಿಸಬೇಕು' ಎಂದು ಕೋರಿ ಕಲಬುರಗಿ ಜಯನಗರದ ಬನಶಂಕರಿ ಕಾಲೋನಿಯ ಮಿಥುನ್ ಮತ್ತು ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಕೆಂಚಿಕೊಪ್ಪದ ಕೆ.ಎಚ್.ಕಾಂತರಾಜ ಎಂಬುವರು ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಗಳನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ಪ್ರಕರಣವೇನು?: ಶಿಕ್ಷಣ ಇಲಾಖೆ 2014ರಲ್ಲಿ ನಡೆಸಿದ್ದ ಸಹಾಯಕ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆಯಲ್ಲಿ ಅರ್ಜಿದಾರರು ಆಯ್ಕೆಯಾಗಿದ್ದರು. ಅಂಕಪಟ್ಟಿ ಪರಿಶೀಲನೆ ವೇಳೆ ಮಿಥುನ್ ಮತ್ತು ಕೆ.ಎಚ್.ಕಾಂತರಾಜ ಸಲ್ಲಿಸಿದ್ದ ಪದವಿ ದಾಖಲೆಗಳು ನಕಲಿ ಎಂಬುದಾಗಿ ಪತ್ತೆಯಾಗಿತ್ತು. ಈ ಸಂಬಂಧ ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಕಚೇರಿಯ ಜಂಟಿ ನಿರ್ದೇಶಕ ಆರ್.ಕೆ.ರಮೇಶ್ ಬಾಬು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಈ ಸಂಬಂಧ ತನಿಖೆ ನಡೆಸಿದ್ದ ಪೊಲೀಸರು ಆರೋಪಿಗಳ ವಿರುದ್ಧ ಐಪಿಸಿ 420 (ವಂಚನೆ), 471 (ಸುಳ್ಳು ದಾಖಲೆಗಳನ್ನು ಸಲ್ಲಿಸುವುದು) 465 (ಸುಳ್ಳು ಸೃಷ್ಟನೆ) ಮತ್ತು 468 (ವಂಚನೆ ಮಾಡಲು ಸುಳ್ಳು ಹೇಳುವುದು) ಸೇರಿದಂತೆ ವಿವಿಧ ಕಲಂಗಳ ಅಡಿಯಲ್ಲಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ರಾಜ್ಯ ಸರ್ಕಾರದ ಪರಿಶೀಲನೆ– ಕ್ರಮದ ಭರವಸೆ: ಪ್ರವೀಣ್ ಸೂದ್

'ದಂಪತಿಗೆ ಒಂದೇ ಜಿಲ್ಲೆಯಲ್ಲಿ ಕೆಲಸ ಪ್ರಸ್ತಾವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೊಲೀಸ್ ಇಲಾಖೆಯ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವ ದಂಪತಿ, ಒಂದೇ ಜಿಲ್ಲೆ ಅಥವಾ ಒಂದೇ ಘಟಕದಲ್ಲಿ ಕೆಲಸ ಮಾಡಲು ಅವಕಾಶ ಮಾಡಿಕೊಡುವಂತೆ ಕೋರಿ ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಪ್ರವೀಣ್ ಸೂದ್ ಹೇಳಿದರು.

ಕರ್ನಾಟಕ ಮೀಸಲು ಪೊಲೀಸ್ ಪಡೆಯ (ಕೆಎಸ್‌ಆರ್‌ಪಿ) ಕೋರಮಂಗಲದ ಮೈದಾನದಲ್ಲಿ ಸೋಮವಾರ ಆಯೋಜಿಸಿದ್ದ ಸೇವಾ ಕವಾಯತಿನಲ್ಲಿ ಪೊಲೀಸರಿಂದ ಗೌರವ ವಂದನೆ ಸ್ವೀಕರಿಸಿ ಅವರು ಮಾತನಾಡಿದರು.

'ಪ್ರಸ್ತಾವವನ್ನು ರಾಜ್ಯ ಸರ್ಕಾರ ಪರಿಶೀಲನೆ ನಡೆಸುತ್ತಿದೆ. ಮುಖ್ಯಮಂತ್ರಿ ಹಾಗೂ ಗೃಹಸಚಿವರಿಂದ ಸೂಕ್ತ ಕ್ರಮದ ಭರವಸೆಯೂ ಸಿಕ್ಕಿದೆ' ಎಂದರು.

ಬಾಡಿಗೆ ಕಟ್ಟಡಗಳಲ್ಲಿ ಠಾಣೆ: 'ರಾಜ್ಯದ ಹಲವು ಠಾಣೆಗಳು ಇಂದಿಗೂ ಬಾಡಿಗೆ ಕಟ್ಟಡದಲ್ಲಿವೆ. ಅಂಥ ಎಲ್ಲ ಠಾಣೆಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಸದ್ಯ ರಾಜ್ಯದ 116 ಪೊಲೀಸ್ ಠಾಣೆಗಳಿಗೆ ಹೊಸ ಕಟ್ಟಡ ನಿರ್ಮಾಣ ಕೆಲಸ ನಡೆಯುತ್ತಿದ್ದು, ಶೀಘ್ರವೇ ಮುಕ್ತಾಯವಾಗಲಿದೆ' ಎಂದು ಸೂದ್ ಹೇಳಿದರು.

₹ 78 ಕೋಟಿ ಮೊತ್ತದಲ್ಲಿ ವಾಹನ ಖರೀದಿ: 'ಪೊಲೀಸ್ ಇಲಾಖೆ ಬಳಿಯಿದ್ದ ಸುಮಾರು 80 ವರ್ಷ ಹಳೇ ಶಸ್ತ್ರಾಸ್ತ್ರಗಳನ್ನು ಈಗಾಗಲೇ ವಿಲೇವಾರಿ ಮಾಡಲಾಗಿದೆ. ಜೊತೆಗೆ, ಮುಂದಿನ ದಿನಗಳಲ್ಲಿ ₹ 78 ಕೋಟಿ ಮೊತ್ತದಲ್ಲಿ ಜೀಪು ಹಾಗೂ ಬೈಕ್‌ಗಳನ್ನು ಖರೀದಿಸಲು ಯೋಜಿಸಲಾಗಿದೆ' ಎಂದರು.

'ಮೀಸಲು ಪೊಲೀಸ್ ಪಡೆಯ ಕಾನ್‌ಸ್ಟೆಬಲ್‌ಗಳನ್ನು ನಾಗರಿಕ (ಸಿವಿಲ್) ಸೇವೆಗೆ ಬಳಸಿಕೊಳ್ಳುವ ಬಗ್ಗೆ 20 ವರ್ಷಗಳಿಂದ ಬೇಡಿಕೆ ಇತ್ತು. ಕಳೆದ ವರ್ಷ ಕೆಲವರನ್ನು ಪ್ರಾಯೋಗಿಕವಾಗಿ ಸೇವೆಗೆ ನಿಯೋಜಿಸಲಾಗಿದೆ' ಎಂದರು.



ಬೆಂಗಳೂರಿನ ಕೋರಮಂಗಲದಲ್ಲಿರುವ ರಾಜ್ಯ ಮೀಸಲು ಪೊಲೀಸ್ ಪಡೆಯ (ಕೆಎಸ್‌ಆರ್‌ಪಿ) ಮೈದಾನದಲ್ಲಿ ಸೋಮವಾರ ಆಯೋಜಿಸಿದ್ದ ಸೇವಾ ಕವಾಯತಿನಲ್ಲಿ ಶ್ವಾನದಳದ ಸಿಬ್ಬಂದಿ ಪಥಸಂಚಲನ ನಡೆಸಿದರು – ಪ್ರಜಾವಾಣಿ ಚಿತ್ರ

ಇಂದಿರಾ ಕ್ಯಾಂಟೀನ್ ಮುಚ್ಚಿರುವಲ್ಲಿ ಧರಣಿ– ಡಿಕೆಶಿ

ಬೆಂಗಳೂರು: 'ನಾವು (ಕಾಂಗ್ರೆಸ್) ಇಂದಿರಾ ಗಾಂಧಿ ಸ್ಮರಣೆ ಮಾಡುತ್ತಿದ್ದರೆ, ರಾಜ್ಯ ಬಿಜೆಪಿ ಸರ್ಕಾರ ಬೆಂಗಳೂರಿನಲ್ಲಿರುವ 40 ಇಂದಿರಾ ಕ್ಯಾಂಟೀನ್‌ಗಳಿಗೆ ಬೀಗ ಹಾಕುತ್ತಿದೆ. ಸರ್ಕಾರ ಎಲ್ಲೆಲ್ಲಿ ಇಂದಿರಾ ಕ್ಯಾಂಟೀನ್ ಮುಚ್ಚುತ್ತಿದೆಯೋ ಅಲ್ಲೆಲ್ಲ ಹೋಗಿ ಧರಣಿ ಮಾಡಬೇಕು' ಎಂದು ಪಕ್ಷದ ಕಾರ್ಯಕರ್ತರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸಿ.ವಿ. ರಾಮನ್ ನಗರದ ಕಗ್ಗದಾಸಪುರದಲ್ಲಿ ಸೋಮವಾರ ನಡೆದ ಇಂದಿರಾಗಾಂಧಿ ಅವರ 38ನೇ ಪುಣ್ಯಸ್ಮರಣೆ ಹಾಗೂ ಮಾಜಿ ಉಪ ಪ್ರಧಾನಿ ವಲ್ಲಭಭಾಯಿ ಪಟೇಲ್ ಜನ್ಮದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಆಟೋ ಚಾಲಕರು, ಕಾರ್ಮಿಕರು, ಬಡ ಜನರು ₹ 10ಕ್ಕೆ ಹೊಟ್ಟೆ ತುಂಬ ಊಟ ಮಾಡುತ್ತಿದ್ದರು. ಈಗ ಅವರ ಹೊಟ್ಟೆ ಮೇಲೆ ಕಲ್ಲು ಹಾಕುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಇಂದಿರಾ ಹೆಸರಲ್ಲಿ ನಾವು ಜನರ ಹೊಟ್ಟೆ ತುಂಬಿಸಿದರೆ, ಅದನ್ನು ಯಾಕೆ ನಿಲ್ಲಿಸುತ್ತಿದ್ದೀರಿ? ಇಂಥ ಜನಪರ ಯೋಜನೆಗಳನ್ನು ಹಾಳು ಮಾಡಬೇಡಿ' ಎಂದರು.

'ಈ ವಿಚಾರವಾಗಿ ಪಕ್ಷದ ಜಿಲ್ಲಾ ಘಟಕಗಳಿಂದ ವರದಿ ತರಿಸಿಕೊಂಡು ಹೋರಾಟ ರೂಪಿಸುತ್ತೇವೆ' ಎಂದರು..

ಪಕ್ಷದ ಅಭ್ಯರ್ಥಿ ಗೆಲ್ಲಿಸಲು ಶ್ರಮಿಸಿ: 'ಮುಂದಿನ ತಿಂಗಳ ಒಳಗಾಗಿ ಈ ಕ್ಷೇತ್ರದ 250-300 ಬೂತ್‌ಗಳಲ್ಲಿ ಪ್ರತಿ ಬೂತ್‌ನಿಂದ 15-20 ಜನರನ್ನು ಸೇರಿಸಿ ಸಭೆ ಮಾಡಬೇಕು ಎಂದು ಪಕ್ಷದ ಸ್ಥಳೀಯ ನಾಯಕರಿಗೆ ಅವರು ಸೂಚನೆ ನೀಡಿದರು. ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ರಾಮಲಿಂಗಾರೆಡ್ಡಿ, ಮುಖಂಡರಾದ ಕೆ.ಎಚ್. ಮುನಿಯಪ್ಪ, ಮಾಜಿ ಮೇಯರ್ ಸಂಪತ್ ರಾಜ್, ಯುವ ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ್ ನಲಪಾಡ್ ಇದ್ದರು.



ಹಕ್ಕಿಯ ಗಾನ

ಜಿ.ಪ್ರಭಾಕರ್ ರೆಡ್ಡಿ ಅವರ 'ಚಿಲಿಪಿಲಿ ಹಕ್ಕಿಯ ಗಾನ' ಮಕ್ಕಳ ಕವನ ಸಂಕಲನ ಪುಸ್ತಕವನ್ನು ಕವಿ ಎಚ್.ಎಸ್ ವೆಂಕಟೇಶಮೂರ್ತಿ ಅವರು ಬಿಡುಗಡೆಗೊಳಿಸಿದರು. ವಿಮರ್ಶಕ ಎಲ್.ಎನ್. ಮುಕುಂದರಾಜ್, ಕವಯಿತ್ರಿ ಡಾ.ವಿಜಯಲಕ್ಷ್ಮಿ ಬಾಳೇಕುಂದ್ರಿ ಇದ್ದರು.

ಅಪಘಾತ: ಚಿರತೆ ಸಾವು

ರಾಮನಗರ: ಇಲ್ಲಿನ ಬಿಳಗುಂಬ ಗ್ರಾಮದ ಸಮೀಪ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ವಾಹನ ಡಿಕ್ಕಿಯಾಗಿ ಚಿರತೆಯೊಂದು ಮೃತಪಟ್ಟಿದೆ.

ಮುಂಜಾನೆ ಹೆದ್ದಾರಿಯಲ್ಲಿ ಮಂಜು ಕವಿದಿದ್ದು, ಚಿರತೆ ರಸ್ತೆ ದಾಟುತ್ತಿದ್ದ ವೇಳೆ ವಾಹನ ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ಚಿರತೆಯ ತಲೆಗೆ ತೀವ್ರ ಪೆಟ್ಟಾಗಿದ್ದು, ಸ್ಥಳದಲ್ಲೇ ಸಾವನ್ನಪ್ಪಿದೆ. ಸೋಮವಾರ ಬೆಳಿಗ್ಗೆ ವಾಯುವಿಹಾರಿಗಳು ಚಿರತೆ ಕಳೇಬರ ಕಂಡು ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು.

ಮೂರು ವರ್ಷ ಪ್ರಾಯದ ಗಂಡು ಚಿರತೆ ಇದಾಗಿದೆ. ಡಿಸಿಎಫ್ ಕಚೇರಿ ಆವರಣದಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ಚಿರತೆಯ ಕಳೇಬರವನ್ನು ಸುಡಲಾಯಿತು.



ಅಪಘಾತದಲ್ಲಿ ಸಾವನ್ನಪ್ಪಿದ ಚಿರತೆ

ಬ್ರಹ್ಮಶ್ರೀ ನಾರಾಯಣಗುರು ಅಭಿವೃದ್ಧಿ ನಿಗಮದ ಬದಲು ಕೋಶ: ಆಕ್ಷೇಪ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಬಿಲ್ಲವ, ಈಡಿಗ ಸೇರಿದಂತೆ 26 ಪಂಗಡಗಳಿರುವ ಸಮುದಾಯದ ಅಭಿವೃದ್ಧಿಗೆ ನಿಗಮ ಸ್ಥಾಪಿಸುವ ಬದಲು ರಾಜ್ಯ ಸರ್ಕಾರ 'ಬ್ರಹ್ಮಶ್ರೀ ನಾರಾಯಣಗುರು ಕೋಶ' ಘೋಷಿಸಿರುವುದು ದಿಕ್ಕು ತಪ್ಪಿಸುವ ಹುನ್ನಾರ. ಇದೊಂದು ತೀರ ಹಿಂದುಳಿದ ಸಮಾಜದವರ ಮೂಗಿಗೆ ತುಪ್ಪ ಸವರುವಂತಹ ಆದೇಶ' ಎಂದು ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದ ಕೋಶಾಧಿಕಾರಿ, ವಕೀಲ ಪದ್ಮರಾಜ್ ಆರ್. ಅವರು ದೂರಿದ್ದಾರೆ.



ಪದ್ಮರಾಜ್ ಆರ್.

'ರಾಜ್ಯದಾದ್ಯಂತ ಸುಮಾರು 70 ಲಕ್ಷ ಜನಸಂಖ್ಯೆ ಹೊಂದಿರುವ, ಆರ್ಥಿಕವಾಗಿ ತೀರ ಹಿಂದುಳಿದಿರುವ ಈ ಸಮುದಾಯಕ್ಕೆ ಬ್ರಹ್ಮಶ್ರೀ ನಾರಾಯಣಗುರು ನಿಗಮ ಸ್ಥಾಪಿಸಬೇಕು ಎಂಬ ಹಲವಾರು ವರ್ಷಗಳ ಬೇಡಿಕೆ ಇದ್ದರೂ ಸರ್ಕಾರ ತಾತ್ಸಾರ ಭಾವನೆ ತೋರಿಸುತ್ತಿರುವುದು ಖೇದಕರ' ಎಂದು ಅವರು ಹೇಳಿದ್ದಾರೆ.


'ಬ್ರಹ್ಮಶ್ರೀ ನಾರಾಯಣಗುರು ಕೋಶವನ್ನು ಘೋಷಣೆ ಮಾಡಿರುವ ಸರ್ಕಾರ, ಅಧೀನದ ಅಧಿಕಾರಿಗಳು, ಸಚಿವರಿಗೆ ನಿಗಮ ಮತ್ತು ಕೋಶಕ್ಕಿರುವ ವ್ಯತ್ಯಾಸಗಳ ಬಗ್ಗೆ ಕನಿಷ್ಠ ಜ್ಞಾನವೂ ಇಲ್ಲವೇ? ನಿಗಮ ಎನ್ನುವುದು ಒಂದು ಸ್ವಾಯತ್ತ ಸಂಸ್ಥೆ. ಇದರಲ್ಲಿ ಪ್ರತ್ಯೇಕ, ಅಧ್ಯಕ್ಷ, ನಿರ್ದೇಶಕರಿದ್ದು, ಸಮುದಾಯಯ ಅಭಿವೃದ್ಧಿಗೆ ಬೇಕಾದ ಯೋಜನೆ ರೂಪಿಸಲು ಇವರಿಗೆ ಸ್ವಾತಂತ್ರ್ಯ ಇದೆ. ಆದರೆ 'ಕೋಶ' ಎನ್ನುವುದು ಸರ್ಕಾರದ ನಿರ್ದೇಶನಾಲಯದ ಚಿಕ್ಕ ಅಂಗವಾಗಿದ್ದು, ಇದೊಂದು ಹಲ್ಲಿಲ್ಲದ ಹಾವಿನಂತೆ. ಇಲ್ಲಿ ಉನ್ನತ ಅಧಿಕಾರಿಯನ್ನು ನೇಮಿಸಿದರೂ ಸರ್ಕಾರದ ಕಾರ್ಯದರ್ಶಿಯ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ ಮತ್ತು ಯಾವುದೇ ನಿರ್ಧಾರ ತೆಗೆದುಕೊಳ್ಳಲು ಇವರಿಗೆ ಅಧಿಕಾರ ಇರುವುದಿಲ್ಲ' ಎಂದು ಅವರು ಹೇಳಿದ್ದಾರೆ.

'ಈ ಹಿಂದೆ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಶೇಂದಿ ಇಳಿಸುವವರಿಗಾಗಿ ವಿಶೇಷ ಪ್ಯಾಕೇಜ್ ನೀಡಿದ್ದು, ಅದಕ್ಕೆ ₹12 ಕೋಟಿ ಮೀಸಲಿರಿಸಿತ್ತು. ಇದರಲ್ಲಿ ₹3 ಕೋಟಿ ಮಾತ್ರ ವ್ಯಯವಾಗಿದ್ದು, ಉಳಿದ ಹಣ ಈಗಲೂ ಸರ್ಕಾರದ ಬೊಕ್ಕಸದಲ್ಲಿದೆ. ಇದೇ ರೀತಿ ಈ ಕೋಶಕ್ಕೆ ₹10ರಿಂದ ₹15 ಕೋಟಿ ಅನುದಾನ ಘೋಷಿಸಿ, ವಿವಿಧ ಕಾರಣ ಹೇಳಿ ಹಾಗೆಯೇ ಉಳಿಸುವ ತಂತ್ರಗಾರಿಕೆಯೇ ಹೊರತು ಬೇರೇನೂ ಇಲ್ಲ. ನಿಗಮದಿಂದ ಆಗುವ ಅಭಿವೃದ್ಧಿಯ ಶೇ 2ರಷ್ಟೂ ಈ ಕೋಶದಿಂದ ಆಗುವುದಿಲ್ಲ' ಎಂದು ಅವರು ಹೇಳಿದ್ದಾರೆ.

ಟ್ರ್ಯಾಕ್ಟರ್ ತೊಳೆಯಲು ಹೋದ ಬಾಲಕ ನೀರುಪಾಲು

ಪ್ರಜಾವಾಣಿ ವಾರ್ತೆ

ಬಿಡದಿ: ಬಿಡದಿ ಪುರಸಭೆಯ ವಾರ್ಡ್ ಸಂಖ್ಯೆ 1ರ ಕಲ್ಲುಗೊಪ್ಪಹಳ್ಳಿಯ ಕಲ್ಲು ಗಣಿಗಾರಿಕೆ ಪ್ರದೇಶದಲ್ಲಿ ಭಾನುವಾರ ಟ್ರ್ಯಾಕ್ಟರ್ ತೊಳೆಯಲು ಹೋದ ಬಾಲಕನೊಬ್ಬ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ.



ಮದನ್

ಮೃತ ಬಾಲಕನನ್ನು ಕೆಂಚನಕುಪ್ಪೆ ಜನತಾ ಕಾಲೊನಿಯ ನಿವಾಸಿ ದಾಸಪ್ಪ ಎಂಬುವರ ಪುತ್ರ ಮದನ್ (16) ಎಂದು ಗುರುತಿಸಲಾಗಿದೆ. ಆತ ಇಲ್ಲಿನ ಸರ್ಕಾರಿ ಪ್ರೌಢಶಾಲೆಯ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ.

ಭಾನುವಾರ ಬೆಳಿಗ್ಗೆ 9 ಗಂಟೆಗೆ ಕಲ್ಲುಗೋಪಹಳ್ಳಿ ಬಂಡೆ ಬಳಿಯ ನೀರಿನ ಹೊಂಡದಲ್ಲಿ ಟ್ರ್ಯಾಕ್ಟರ್ ತೊಳೆಯಲು ಚಾಲಕ ಆನಂದ್ ಎಂಬುವರ ಜತೆ ಮದನ್ ಸಹ ಹೋಗಿದ್ದ.

ಮದನ್ ನೀರಿನ ಹೊಂಡದಲ್ಲಿ ಟ್ರ್ಯಾಕ್ಟರ್ ಅನ್ನು ಹಿಮ್ಮುಖವಾಗಿ ಚಲಾಯಿಸಿದಾಗ ಅದು ನಿಯಂತ್ರಣ ತಪ್ಪಿ ಪಲ್ಟಿಯಾಗಿ ಈ ದುರ್ಘಟನೆ ಸಂಭವಿಸಿದೆ. ಬಿಡದಿ ಸಿಪಿಐ ತಿಮ್ಮೇಗೌಡ ಹಾಗೂ ಸಿಬ್ಬಂದಿ ಘಟನಾ ಸ್ಥಳಕ್ಕೆ ಧಾವಿಸಿ ಬಾಲಕನ ದೇಹ ಹೊರ ತೆಗೆಸಿದರು. ಈ ಕುರಿತು ಬಿಡದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದಲ್ಲಿ ಇಂದು

ಕನ್ನಡ ರಾಜ್ಯೋತ್ಸವದ ವಿಶೇಷ ಕಾರ್ಯಕ್ರಮಗಳು

ಕನ್ನಡಕ್ಕಾಗಿ ನಡೆ (ವಾಕಥಾನ್): ಬೆಳಿಗ್ಗೆ 6.45ಕ್ಕೆ ಚಾಲನೆ: ಎಚ್.ಜಿ. ದತ್ತಾತ್ರೇಯ (ದತ್ತಣ್ಣ), ಅತಿಥಿಗಳು: ಇಂದ್ರಜಿತ್ ಲಂಕೇಶ್, ಕೆ.ಪಿ. ಶ್ರೀಕಾಂತ್, ಟಿ.ಎನ್. ಸೀತಾರಾಮ್, ಆಯೋಜನೆ ಮತ್ತು ಸ್ಥಳ: ಬಸವನಗುಡಿ ಯೂನಿಯನ್ ಆ್ಯಂಡ್ ಸರ್ವಿಸ್ ಕ್ಲಬ್, ಸಂಜೆ 7

ಕನ್ನಡ ರಾಜ್ಯೋತ್ಸವ ಧ್ವಜಾರೋಹಣ: ಶೀಲಾದೇವಿ ಎಸ್. ಮಳೀಮಠ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಆವರಣ, ಹೊಂಬೇಗೌಡನಗರ, ಬೆಳಿಗ್ಗೆ 7.30

ಕನ್ನಡ ರಾಜ್ಯೋತ್ಸವ ಕವಿ ಪ್ರತಿಮೆಗೆ ಮಾಲಾರ್ಪಣೆ-ಕನ್ನಡ ಚಿಂತನೆ: ಸ್ಮಿತಾ ರೆಡ್ಡಿ, ನಾಗಭೂಷಣ, ಎನ್. ದೇವಿಕುಮಾರ್, ಆಯೋಜನೆ: ಕನ್ನಡ ಗೆಳೆಯರ ಬಳಗ, ಸ್ಥಳ: ಬಿ.ಎಂ.ಶ್ರೀ ಪ್ರತಿಮೆ ಎದುರು, ಬಸವನಗುಡಿ ನ್ಯಾಷನಲ್ ಕಾಲೇಜು ವೃತ್ತ, ಬೆಳಿಗ್ಗೆ 8

ಕನ್ನಡ ರಾಜ್ಯೋತ್ಸವ: ಅತಿಥಿಗಳು: ಸೋಮಶೇಖರ್, ಡಾ. ಬಿ.ಟಿ. ರುದ್ರೇಶ್, ಆಯೋಜನೆ ಮತ್ತು ಸ್ಥಳ: ಪ್ರೆಸ್ಟೀಜ್ ಜಿಂದಾಲ್ ಸಿಟಿ ಕನ್ನಡ ಬಳಗ, ಬೆಳಿಗ್ಗೆ 8.30

67ನೇ ಕನ್ನಡ ರಾಜ್ಯೋತ್ಸವ ಸಮಾರಂಭದ ಧ್ವಜಾರೋಹಣ: ಬಸವರಾಜ ಬೊಮ್ಮಾಯಿ, ಪ್ರಾಸ್ತಾವಿಕ ನುಡಿ: ಬಿ.ಸಿ. ನಾಗೇಶ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಸಿದ್ದರಾಮಯ್ಯ, ಆಯೋಜನೆ: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಸಮಗ್ರ ಶಿಕ್ಷಣ ಕರ್ನಾಟಕ, ಸ್ಥಳ: ಕಂಠೀರವ ಕ್ರೀಡಾಂಗಣ, ಬೆಳಿಗ್ಗೆ 9

ಡಿವಿಜಿ ಅವರಿಗೆ ನುಡಿ-ನಮನ ಹಾಗೂ ಅವರ ಪುತ್ಥಳಿಗೆ ಮಾಲಾರ್ಪಣೆ: ಉದ್ಘಾಟನೆ: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ಕಟ್ಟೆ ಸತ್ಯನಾರಾಯಣ, ಅತಿಥಿಗಳು: ಜಗದೀಶ ಮುಳಬಾಗಿಲು, ಭಾಸ್ಕರರಾವ್, ಆಯೋಜನೆ: ಡಿವಿಜಿ ಕನ್ನಡ ಬಳಗ, ಸ್ಥಳ: ಕಹಳೆ ಬಂಡೆ, ಉದ್ಯಾನವನ, ಬಸವನಗುಡಿ, ಬೆಳಿಗ್ಗೆ 9

ಕನ್ನಡ ರಾಜ್ಯೋತ್ಸವದ ಧ್ವಜಾರೋಹಣ: ಬೆಳಿಗ್ಗೆ 9.30ಕ್ಕೆ ಮಹೇಶ್ ಜೋಷಿ, ಅತಿಥಿಗಳು: ವಿಜಯ ರಾಘವೇಂದ್ರ, ಸಾಂಸ್ಕೃತಿಕ ಕಾರ್ಯ ಕ್ರಮಗಳು: ಅತಿಥಿಗಳು: ಸುಚೇಂದ್ರ ಪ್ರಸಾದ್, ಆಯೋಜನೆ: ಬ್ರಿಗೇಡ್ ಗೇಟ್‌ವೇ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್, ಸಂಜೆ 5.30



ವಿಜಯ ರಾಘವೇಂದ್ರ

ಉಪಸ್ಥಿತಿ: ಅರುಂಧತಿ ನಾಗ್, ರಾಘವೇಂದ್ರ ರಾಜ್‌ಕುಮಾರ್, ಲೂಸ್ ಮಾದ ಯೋಗಿ, ಮೇಘನಾ ರಾಜ್, ಅಧ್ಯಕ್ಷತೆ: ಭಾ.ಮ. ಹರೀಶ್, ಆಯೋಜನೆ, ಕರ್ನಾಟಕ ಚಲನಚಿತ್ರ ಮಂಡಳಿಯ ಆವರಣದಲ್ಲಿ, ಬೆಳಿಗ್ಗೆ 9.30



ಅರುಂಧತಿ ನಾಗ್

ಉಚಿತ ಆಯುರ್ವೇದ ಚಿಕಿತ್ಸಾ ಶಿಬಿರ ಹಾಗೂ ಧನ್ವಂತರಿ ಪುರಸ್ಕಾರ: ಪುರಸ್ಕೃತರು: ಕೇಶವ ಹೊಳ್ಳ, ರಮೇಶ ಭಟ್, ಕುಮಾರ ಜನ್ನ, ಅತಿಥಿಗಳು: ಉದಯ ಗರುಡಾಚಾರ್, ಮಹೇಶ್ ಜೋಷಿ, ನಾಗರಾಜ ಐತಾಳ, ಆಯೋಜನೆ: ಉಪಾಧ್ಯ ಮತ್ತು ಕಂಪನಿ, ದಕ್ಷಿಣ ಕನ್ನಡಿಗರ ಸಂಘ, ಪೂರ್ಣಿಮಾ ರೀಜೆನ್ಸಿ, ಆನಂದ ಬಳಗ, ಸ್ಥಳ: ಸಂಕರ್ಷಣ ಸಭಾಂಗಣ, ವಿಲ್ಸನ್ ಗಾರ್ಡನ್, ಬೆಳಿಗ್ಗೆ 9.30

67ನೇ ಕನ್ನಡ ರಾಜ್ಯೋತ್ಸವ ಮತ್ತು ರಾಜರಾಜೇಶ್ವರಿ ನಗರ ರತ್ನ ಪ್ರಶಸ್ತಿ ಪ್ರದಾನ: ಪ್ರಶಸ್ತಿ ಪುರಸ್ಕೃತರು: ಅರ್ಪಿತಾ ಕೆ.ವಿ., ಆಯೋಜನೆ: ಬಿ.ಇ.ಎಂ.ಎಲ್ ಬಡಾವಣೆ ನಾಗರಿಕರ ಹಿತರಕ್ಷಣಾ ವೇದಿಕೆ, ಸ್ಥಳ: ಟಿ.ಎನ್. ಬಾಲಕೃಷ್ಣ ಬಯಲು ರಂಗ ಮಂದಿರ, ರಾಜರಾಜೇಶ್ವರಿ ನಗರ, ಬೆಳಿಗ್ಗೆ 9.30

ಕನ್ನಡ ರಾಜ್ಯೋತ್ಸವದ ಧ್ವಜಾರೋಹಣ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು: ಬೆಳಿಗ್ಗೆ 9ಕ್ಕೆ ನಾಡಗೀತೆ, ಕಂಸಾಳೆ ನೃತ್ಯ, ಸಮೂಹ ಗಾಯನ, ಅತಿಥಿಗಳು: ಯಶವಂತ ಸರದೇಶಪಾಂಡೆ, ಆಯೋಜನೆ ಮತ್ತು ಸ್ಥಳ: ಪ್ರೆಸ್ಟೀಜ್ ಲೇಕ್ ರಿಡ್ಜ್ ಕನ್ನಡ ಸಂಘ, ಕೆ. ಆರ್. ಪುರ, ಸಂಜೆ 5ಕ್ಕೆ ಯಕ್ಷಗಾನ ಪ್ರಸಂಗ-ಕಂಸ ವಧೆ, ಸ್ಥಳ: ರಂಗಭೂಮಿ (ಆ್ಯಂಫಿಥಿಯೇಟರ್)

ರಾಜ್ಯೋತ್ಸವದ ಪ್ರಯುಕ್ತ ಪುಸ್ತಕ ಜಾತ್ರೆ, 67 ಪುಸ್ತಕಗಳ ಬಿಡುಗಡೆ: ಉದ್ಘಾಟನೆ: ಸುಧಾಮೂರ್ತಿ, ಸಪ್ತಮಿ ಗೌಡ, ಅತಿಥಿಗಳು: ತಾರಾ ಅನೂರಾಧ, ಟಿ.ಎನ್. ಸೀತಾರಾಮ್, ಕನ್ನಡ ಗೀತೆ: ಚಿನ್ಮಯಿ ಚಂದ್ರಶೇಖರ, ಆಯೋಜನೆ: ಸಪ್ನ ಬುಕ್ ಹೌಸ್, 3ನೇ ಮುಖ್ಯರಸ್ತೆ, ಗಾಂಧಿನಗರ, ಬೆಳಿಗ್ಗೆ 10




ಸುಧಾಮೂರ್ತಿ

ಕನ್ನಡ ರಾಜ್ಯೋತ್ಸವ: ಉದ್ಘಾಟನೆ: ಕುಮಾರ ಚಂದ್ರಶೇಖರ ಸ್ವಾಮೀಜಿ, ಅಧ್ಯಕ್ಷತೆ: ಯು.ಬಿ. ವೆಂಕಟೇಶ್, ಅತಿಥಿಗಳು: ಎಲ್.ಎ. ರವಿಸುಬ್ರಹ್ಮಣ್ಯ, ಕೆ. ಬಾಗೇಗೌಡ, ಎಂ. ಕೃಷ್ಣಪ್ಪ, ಕೆ. ವಿ. ಶಂಕರ್, ಆಯೋಜನೆ: ಶ್ರೀನಗರ ಕನ್ನಡ ರಾಜ್ಯೋತ್ಸವ ಸಮಿತಿ, ಸ್ಥಳ: ಶ್ರೀನಗರದ ಬಸ್ ನಿಲ್ದಾಣ, ಬೆಳಿಗ್ಗೆ 10

67ನೇ ಕನ್ನಡ ರಾಜ್ಯೋತ್ಸವ: ಆಯೋಜನೆ ಮತ್ತು ಸ್ಥಳ: ಸೆಂಟ್ರಲ್ ಕಾಲೇಜು ಹಳೆಯ ವಿದ್ಯಾರ್ಥಿಗಳ ಸಂಘದ ಕಟ್ಟಡದ ಮುಂಭಾಗ, ಸೆಂಟ್ರಲ್ ಕಾಲೇಜು ಕ್ರಿಕೆಟ್ ಮೈದಾನ, ವೈ. ರಾಮಚಂದ್ರ ರಸ್ತೆ, ಗಾಂಧಿನಗರ, ಬೆಳಿಗ್ಗೆ 10

ಕನ್ನಡ ರಾಜ್ಯೋತ್ಸವ ಸಮಾರಂಭದ ಧ್ವಜಾರೋಹಣ: ಪಿ.ಕೆ. ಸ್ಯಾಮುವೇಲ್, ಅತಿಥಿಗಳು: ಡೆಕ್ಸ್‌ಟರ್ ಮಾಬೆನ್, ವಿನ್ಸೆಂಟ್ ವಿನೋದ್ ಕುಮಾರ್, ಆಯೋಜನೆ: ಅಖಿಲ ಕರ್ನಾಟಕ ಕನ್ನಡ ಕ್ರೈಸ್ತರ ಹಿತರಕ್ಷಣಾ ವೇದಿಕೆ, ಸ್ಥಳ: ಎಚ್.ಆರ್.ಡಿ ಕಟ್ಟಡದ ಆವರಣ, ಯೂನಿಟಿ ಬಿಲ್ಡಿಂಗ್ ಹಿಂಭಾಗ, ಬೆಳಿಗ್ಗೆ 10

ಕನ್ನಡ ಸೊಗಡಿನ ಐತಿಹಾಸಿಕ ಜಾನಪದ ಉತ್ಸವ ಕಾರ್ಯಕ್ರಮ: ಬೆಳಿಗ್ಗೆ 9.30ಕ್ಕೆ ಧ್ವಜಾರೋಹಣ: ಶ್ರೀ ಶ್ರೀ ರವಿಶಂಕರ ಗುರೂಜಿ, ಸಂಜೆ 6.30: ಸಂಗೀತ ಕಾರ್ಯಕ್ರಮ, ಅತಿಥಿಗಳು: ಸೌಮ್ಯ ರೆಡ್ಡಿ, ಎಸ್. ಕೆ. ನಟರಾಜ್, ಆಯೋಜನೆ: ಜ್ಞಾನ ಬೆಳಕಿನೆಡೆಗೆ ವೇದಿಕೆ, ಸ್ಥಳ: ಸಾರಕ್ಕಿ ಗ್ರಾಮ, ಜೆ.ಪಿ. ನಗರ



ರವಿಶಂಕರ ಗುರೂಜಿ

ಹತ್ತು ಕೃತಿಗಳ ಬಿಡುಗಡೆ ಸಮಾರಂಭ: ಉದ್ಘಾಟನೆ: ರವೀಂದ್ರ ಭಟ್ಟ, ಪುಸ್ತಕ ಬಿಡುಗಡೆ: ಡಾ.ಸಿ.ಎನ್. ಮಂಜುನಾಥ್, ಮಂಡ್ಯ ರಮೇಶ್, ಅಧ್ಯಕ್ಷತೆ: ಮಲ್ಲೇಪುರಂ ಜಿ. ವೆಂಕಟೇಶ್, ಅತಿಥಿಗಳು: ಸುದರ್ಶನ ಚನ್ನಂಗಿಹಳ್ಳಿ, ಪುಸ್ತಕ ಪರಿಚಯ: ಕುಸುಮಾ ಆಯರಹಳ್ಳಿ, ಆಯೋಜನೆ: ವೀರಲೋಕ, ಸ್ಥಳ: ಡಾ.ಸಿ. ಅಶ್ವಥ್ ಕಲಾಭವನ, ಎನ್. ಆರ್. ಕಾಲೊನಿ, ಸಂಜೆ 5



ಡಾ.ಸಿ.ಎನ್. ಮಂಜುನಾಥ್

ಕನ್ನಡ ರಾಜ್ಯೋತ್ಸವ: ಚಾಲನೆ: ಬಸವರಾಜ ಬೊಮ್ಮಾಯಿ, ಧ್ವಜಾರೋಹಣ: ವಾಟಾಳ್ ನಾಗರಾಜ್, ಅತಿಥಿಗಳು: ತುಷಾರ್ ಗಿರಿನಾಥ್, ಉಪಸ್ಥಿತಿ: ರಾಕೇಶ್ ಸಿಂಗ್, ಆಯೋಜನೆ: ಕರ್ನಾಟಕ ರಾಜ್ಯೋತ್ಸವ ಸಮಿತಿ, ಸ್ಥಳ: ಮೈಸೂರು ಬ್ಯಾಂಕ್ ಹತ್ತಿರ, ಬೆಳಿಗ್ಗೆ 10


ಕನ್ನಡ ರಾಜ್ಯೋತ್ಸವ ಸಮಾರಂಭದ ಧ್ವಜಾರೋಹಣ: ಬಿ.ಝಡ್. ಜಮೀರ್ ಅಹಮದ್ ಖಾನ್, ಅತಿಥಿಗಳು: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಪಿ.ಸಿ ಮೋಹನ್, ರಾಮಲಿಂಗಾ ರೆಡ್ಡಿ, ಸೌಮ್ಯ ರೆಡ್ಡಿ, ಮಹಮ್ಮದ್ ಹ್ಯಾರಿಸ್ ನಲಪಾಡ್, ಆಯೋಜನೆ ಮತ್ತು ಸ್ಥಳ: ಚಾಮರಾಜಪೇಟೆ ನಾಡಹಬ್ಬದ ಕನ್ನಡ ರಾಜ್ಯೋತ್ಸವ ಸಮಿತಿ, ಚಾಮರಾಜಪೇಟೆ, ಬೆಳಿಗ್ಗೆ 10.30

ಕನ್ನಡ ರಾಜ್ಯೋತ್ಸವ: ಆಯೋಜನೆ: ಕರ್ನಾಟಕ ರಕ್ಷಣಾ ವೇದಿಕೆ, ಸ್ಥಳ: ಕರವೇ ಕೇಂದ್ರ ಕಚೇರಿ, ಗಾಂಧಿನಗರ, 5ನೇ ಮುಖ್ಯರಸ್ತೆ, ಬೆಳಿಗ್ಗೆ 11.30

67ನೇ ಕನ್ನಡ ರಾಜ್ಯೋತ್ಸವ ಸಮಾರಂಭ: ಕನ್ನಡ ಜನಾಂದೋಲನ ಉದ್ಘಾಟನೆ, ಪರಮೇಶ್ವರ ಪುಲಿಕೇಶಿ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಪ್ರಶಸ್ತಿ ಪ್ರದಾನ: ಸಿ.ಎಂ. ಇಬ್ರಾಹಿಂ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಬಿ.ಕೆ. ಹರಿಪ್ರಸಾದ್, ನಾಗರಾಜ್ ಯಾದವ್, ಎಂ ಗೌತಮ್ ಕುಮಾರ್, ಆಯೋಜನೆ: ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿ, ಸ್ಥಳ: ಪರಮೇಶ್ವರ ಪುಲಿಕೇಶಿ ಮಹಾಮಂಟಪ, ಬನ್ನಪ್ಪ ಪಾರ್ಕ್ ಆಟದ ಮೈದಾನ, ಕೆಂಪೇಗೌಡ ರಸ್ತೆ, ಮಧ್ಯಾಹ್ನ 12

67ನೇ ಕನ್ನಡ ರಾಜ್ಯೋತ್ಸವ ಕನ್ನಡ ತಾಯಿಗೆ ಶತಕಂಠಗಳ ಗಾಯನದಾರತಿ: ಉದ್ಘಾಟನೆ: ಎಂ. ಪ್ರಕಾಶಮೂರ್ತಿ, ಅತಿಥಿಗಳು: ಮಾಗಡಿ ಗಿರೀಶ, ಬಿ.ಎಸ್. ರಾಜಶೇಖರಯ್ಯ, ಅಧ್ಯಕ್ಷತೆ: ಜಿ. ಬಾಬು, ಆಯೋಜನೆ: ಟೆಲಿಕಾಂ ನೌಕರರ ಗೃಹ ನಿರ್ಮಾಣ ಸಂಘ, ಸ್ಥಳ: ಜಕ್ಕೂರಿನ ಟೆಲಿಕಾಂ ಬಡಾವಣೆ, ಸಂಜೆ 4.30

ರಾಜ್ಯಮಟ್ಟದ 23ನೇ ಅಂಧರ ಸಾಂಸ್ಕೃತಿಕೋತ್ಸವ, ಕನ್ನಡ ರಾಜ್ಯೋತ್ಸವ, ವಿಷ್ಣುವರ್ಧನ್ ಜಯಂತಿ: ಉಚಿತ ಆರೋಗ್ಯ ತಪಾಸಣಾ ಶಿಬಿರ: ಬೆಳಿಗ್ಗೆ 10, ಉದ್ಘಾಟನೆ: ವಾಟಾಳ್ ನಾಗರಾಜ್, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಅತಿಥಿಗಳು: ಎಸ್. ಕೆ. ಉಮೇಶ್, ಮಂಜುನಾಥ್ ಬಾಬು, ವಿನಾಯಕ್ ಪಾಟೀಲ್, ಆಯೋಜನೆ: ಆಶ್ರಯ ಅಂಗವಿಕಲರ ಗ್ರಾಮೀಣಾಭಿವೃದ್ಧಿ ಮತ್ತು ಸಾಂಸ್ಕೃತಿಕ ಕಲ್ಯಾಣ ಸಂಸ್ಥೆ, ಸ್ಥಳ: ಕದಂಬ ವೇದಿಕೆ ಅರುಣ ಥಿಯೇಟರ್ ಮುಂಭಾಗ, ಸನ್‌ರೈಸ್ ವೃತ್ತ, ಸಂಜೆ 6



ವಾಟಾಳ್ ನಾಗರಾಜ್

ಕಲಾಸಿಪಾಳ್ಯ ದಟ್ಟಣೆ ನೀಗಿಸುವ ಬಿಎಂಟಿಸಿ ಟರ್ಮಿನಲ್

ಕಾಮಗಾರಿ ಬಹುತೇಕ ಪೂರ್ಣ: ಉದ್ಘಾಟನೆಗೆ ಸಜ್ಜು



ಕಲಾಸಿಪಾಳ್ಯದಲ್ಲಿ ನಿರ್ಮಾಣವಾಗಿರುವ ಸುಸಜ್ಜಿತ ಬಸ್ ಟರ್ಮಿನಲ್ –ಪ್ರಜಾವಾಣಿ ಚಿತ್ರಗಳು / ಎಂ.ಎಸ್.ಮಂಜುನಾಥ್

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಕಾಮಗಾರಿ ಆರಂಭವಾಗಿ ಆರು ವರ್ಷಗಳ ಬಳಿಕ ಕೊನೆಗೂ ಕಲಾಸಿಪಾಳ್ಯದಲ್ಲಿ ಸುಸಜ್ಜಿತ ಬಸ್ ನಿಲ್ದಾಣ(ಟಿಟಿಎಂಸಿ) ಉದ್ಘಾಟನೆಗೆ ಸಜ್ಜಾಗಿದೆ. ಹಲವು ಸೌಕರ್ಯಗಳನ್ನು ಹೊಂದಿರುವ ಟಿಟಿಎಂಸಿ, ಈ ಭಾಗದ ಸಂಚಾರ ದಟ್ಟಣೆ ನಿವಾರಣೆ ಮಾಡಲಿದೆ ಎಂಬ ನಿರೀಕ್ಷೆ ಸ್ಥಳೀಯರಲ್ಲಿದೆ.

1940ರಲ್ಲಿ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರ ಮಾರ್ಗದರ್ಶನದಲ್ಲಿ ಬಸ್ ನಿಲ್ದಾಣ ನಿರ್ಮಾಣವಾಗಿತ್ತು. ರಾಜ್ಯದ ಪ್ರಮುಖ ಸ್ಥಳಗಳಿಗೆ ಸಂಪರ್ಕ ಕಲ್ಪಿಸುವ ನಿಲ್ದಾಣ ಇದಾಗಿತ್ತು. ಕೆ.ಆರ್. ಮಾರುಕಟ್ಟೆಗೆ ಸಮೀಪ ಇರುವುದರಿಂದ ಇದು ಈಗಲೂ ಅತ್ಯಂತ ಜನನಿಬಿಡ ಪ್ರದೇಶ. ಬಸ್ ಸೇರಿ ಬೇರೆ ವಾಹನಗಳ ನಿಲುಗಡೆಗೆ ಜಾಗವಿಲ್ಲದೆ ಇಡೀ ಕಲಾಸಿಪಾಳ್ಯ ಕಿಷ್ಕಿಂಧೆಯಂತಾಗಿದೆ.

ಈ ಜಾಗದಲ್ಲಿ ಸುಸಜ್ಜಿತ ಟಿಟಿಎಂಸಿ ನಿರ್ಮಾಣಕ್ಕೆ 2016ರ ಆಗಸ್ಟ್‌ನಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಿದ್ದರು. 4.13 ಎಕರೆ ವಿಸ್ತೀರ್ಣದಲ್ಲಿ ₹63.17 ಕೋಟಿ ವೆಚ್ಚದಲ್ಲಿ ನಿಲ್ದಾಣ ನಿರ್ಮಾಣಕ್ಕೆ ಯೋಜನೆ ಸಿದ್ಧವಾಗಿತ್ತು. 'ಕೆಎಂವಿ ಪ್ರಾಜೆಕ್ಟ್ಸ್ ಲಿಮಿಟೆಡ್ ಸಂಸ್ಥೆಯು ಯೋಜನೆಯ ಗುತ್ತಿಗೆ ಪಡೆದಿದ್ದು, ಕಾಮಗಾರಿ ಪೂರ್ಣಗೊಳಿಸಲು 24 ತಿಂಗಳ ಕಾಲಮಿತಿ ನೀಡಲಾಗಿತ್ತು. ಅದರಂತೆ 2018ರ ಆಗಸ್ಟ್ ವೇಳೆಗೆ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. ಅನುದಾನ ಬಿಡುಗಡೆ ವಿಳಂಬದಿಂದ ಕಾಮಗಾರಿ ವಿಳಂಬವಾಯಿತು. ಬಳಿಕ 2019ರ ಡಿಸೆಂಬರ್‌ಗೆ ಎರಡನೇ ಕಾಲಮಿತಿ ನೀಡಲಾಗಿತ್ತು.

ಅನುದಾನ ಬಿಡುಗಡೆಯಾಗುವಷ್ಟರಲ್ಲಿ ಕೋವಿಡ್ ಲಾಕ್‌ಡೌನ್ ಜಾರಿಯಾಯಿತು. ಬಳಿಕ ಕಾರ್ಮಿಕರ ಕೊರತೆಯಿಂದಾಗಿ ಈ ಕಾಮಗಾರಿಯೂ ಸ್ಥಗಿತಗೊಂಡಿತ್ತು. ಜನ ಜೀವನ ಸಹಜ ಸ್ಥಿತಿಗೆ ಬಂದ ಬಳಿಕ ಕಾಮಗಾರಿ ಆರಂಭವಾಗಿತ್ತು. ಈಗ ಅಂತಿಮ ಹಂತದ ಕಾಮಗಾಗಳೂ ಪೂರ್ಣಗೊಂಡಿವೆ ಎನ್ನುತ್ತಾರೆ ಅಧಿಕಾರಿಗಳು.

ಈ ಟಿಟಿಎಂಸಿಯಿಂದ ಬಿಎಂಟಿಸಿ ಬಸ್‌ಗಳು ಮಾತ್ರವಲ್ಲ, ಕೆಎಸ್‌ಆರ್‌ಟಿಸಿ ಬಸ್‌ಗಳೂ ಕಾರ್ಯಾಚರಣೆ ನಡೆಸಲಿವೆ. ನಿರ್ಮಾಣವಾಗಿರುವ ಕಟ್ಟಡದ ಒಳಗೆ ಕೆಎಸ್‌ಆರ್‌ಟಿಸಿ ಬಸ್‌ಗಳು ನಿಲ್ಲಲಿದ್ದು, ಆವರಣದೊಳಗಿನ ಹೊರಾಂಗಣದಲ್ಲಿ ಬಿಎಂಟಿಸಿ ಬಸ್‌ಗಳಿಗೆ ಸ್ಥಳಾವಕಾಶ ಕಲ್ಪಿಸಲಾಗುತ್ತದೆ. ಬಸ್‌ಗಳು ಮತ್ತು ಪ್ರಯಾಣಿಕರ ನಿಲುಗಡೆಗೆ ಪ್ರತ್ಯೇಕ ತಾಣಗಳನ್ನು ನಿರ್ಮಿಸಲಾಗಿದೆ.

ಕೆ.ಆರ್. ಮಾರುಟಕ್ಟೆ ಕಡೆಯಿಂದ ಬರುವ ಜನರು ನೇರವಾಗಿ ಕೆಎಸ್‌ಆರ್‌ಟಿಸಿ ಬಸ್ ನಿಲುಗಡೆ ತಾಣದ ಕಡೆಗೆ ಹೋಗಲು ಸುರಂಗ ಮಾರ್ಗವೊಂದನ್ನು ನಿರ್ಮಿಸಲಾಗಿದೆ. ಬಿಎಂಟಿಸಿ ಬಸ್‌ಗಳು ನಿಲ್ಲುವ ಜಾಗದಿಂದ ಮೇಲಕ್ಕೆ ಹತ್ತಲು ಅಲ್ಲಲ್ಲಿ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ.

'ಸುಸಜ್ಜಿತವಾದ ಟಿಟಿಎಂಸಿ ನಿರ್ಮಾಣವಾಗುತ್ತಿರು-ವುದು ಖುಷಿಯ ವಿಚಾರ. ಆದರೆ, ಅದು ಸಾರ್ವಜನಿಕರ ಬಳಕೆಗೆ ಲಭ್ಯವಾಗಲು ಇಷ್ಟೊಂದು ಕಾಲಾವಕಾಶ ಬೇಕಾಯಿತು ಎಂಬುದು ಬೇಸರದ ವಿಷಯ. ಕಾಮಗಾರಿ ಪೂರ್ಣಗೊಂಡ ಬಳಿಕವೂ ಉದ್ಘಾಟನೆಗಾಗಿ ಕಾಯಲಾಗುತ್ತಿದೆ. ಆದಷ್ಟು ಬೇಗ ಸಾರ್ವಜನಿಕರ ಸೇವೆಗೆ ಸಮರ್ಪಿಸಬೇಕು ಎಂಬುದು ಸ್ಥಳೀಯರ ಒತ್ತಾಯ.

ಮುಖ್ಯಮಂತ್ರಿಯಿಂದ ಉದ್ಘಾಟನೆ?

ಸಿವಿಲ್ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದಲೇ ಉದ್ಘಾಟನೆ ಮಾಡಿಸಲು ಅಧಿಕಾರಿಗಳು ಕಾದಿದ್ದಾರೆ.

ದಿನಾಂಕ ನಿಗದಿ ಮಾಡಲು ಮುಖ್ಯಮಂತ್ರಿ ಕಚೇರಿಗೆ ಕೋರಲಾಗಿದೆ. ಅಲ್ಲಿಂದ ಎಷ್ಟು ಬೇಗ ಪ್ರತಿಕ್ರಿಯೆ ಬರಲಿದೆಯೇ ಅಷ್ಟು ಬೇಗ ಬಸ್ ನಿಲ್ದಾಣ ಸಾರ್ವಜನಿಕರ ಸೇವೆಗೆ ಲಭ್ಯವಾಗಲಿದೆ ಎಂದು ಬಿಎಂಟಿಸಿ ಅಧಿಕಾರಿಯೊಬ್ಬರು ತಿಳಿಸಿದರು.

ಸುಸಜ್ಜಿತವಾದ ನಿಲ್ದಾಣ ನಿರ್ಮಾಣವಾಗಿದ್ದು, ಸದ್ಯದಲ್ಲೇ ಮುಖ್ಯಮಂತ್ರಿ ಅವರು ದಿನಾಂಕ ನಿಗದಿ ಮಾಡಲಿದ್ದಾರೆ. ಕೆಲವೇ ದಿನಗಳಲ್ಲಿ ಸಾರ್ವಜನಿಕ ಸೇವೆಗೆ ಲಭ್ಯವಾಗಲಿದೆ

ಉದಯ ಗರುಡಾಚಾರ್, ಚಿಕ್ಕಪೇಟೆ ಶಾಸಕ



ಬಿಎಂಟಿಸಿ ಬಸ್‌ಗಳ ನಿಲುಗಡೆಗೆ ನಿರ್ಮಾಣವಾಗಿರುವ ಬಸ್ ಬೇ

ಸಂಚಾರ ದಟ್ಟಣೆ ನೀಗುವ ನಿರೀಕ್ಷೆ

ಕಲಾಸಿಪಾಳ್ಯ ಎಂದರೆ ನಗರದ ಅತ್ಯಂತ ಜನನಿಬಿಡ ಪ್ರದೇಶಗಳಲ್ಲೇ ಪ್ರಮುಖ ಸ್ಥಳ. ನಿರ್ಮಾಣವಾಗಿರುವ ಟರ್ಮಿನಲ್ ಸುತ್ತಮುತ್ತಲಿನ ರಸ್ತೆಗಳಲ್ಲೇ ಖಾಸಗಿ ಬಸ್ ಮತ್ತು ಸಾರಿಗೆ ಸಂಸ್ಥೆ ಬಸ್‌ಗಳು ನಿಲ್ಲುತ್ತಿವೆ. ದ್ವಿಚಕ್ರ ವಾಹನ ಮತ್ತು ಕಾರುಗಳನ್ನು ನಿಲ್ಲಿಸಲು ಸುತ್ತಮುತ್ತ ಜಾಗವೇ ಇಲ್ಲವಾಗಿದೆ.

ಈ ನಿಲ್ದಾಣ ಸಾರ್ವಜನಿಕ ಸೇವೆಗೆ ಲಭ್ಯವಾದರೆ ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಸ್‌ಗಳು ರಸ್ತೆಗೆ ನಿಲ್ಲುವುದು ತಪ್ಪಲಿದೆ. ಎರಡೂ ಸಂಸ್ಥೆಗಳ ನಿಲ್ದಾಣದ ಅಧಿಕಾರಿಗಳು ರಸ್ತೆಯಲ್ಲೇ ನಿಂತು ಸೇವೆ ಸಲ್ಲಿಸುತ್ತಿದ್ದಾರೆ. ಪ್ರಯಾಣಿಕರು ಕೂಡ ರಸ್ತೆಯಲ್ಲೇ ನಿಲ್ಲುತ್ತಿದ್ದಾರೆ. ಸುಸಜ್ಜಿತ ಶೌಚಾಲಯ ವ್ಯವಸ್ಥೆ ಇಲ್ಲದೆ ಪರದಾಡುತ್ತಿದ್ದಾರೆ. ಈ ಸಮಸ್ಯೆಗೂ ಪರಿಹಾರ ದೊರಕಿದಂತೆ ಆಗಲಿದೆ ಎನ್ನುತ್ತಾರೆ ಸ್ಥಳೀಯರು. '6 ವರ್ಷಗಳಿಂದ ರೋಸಿ ಹೋಗಿದ್ದೇವೆ. ಈಗಲಾದರೂ ಸುಸಜ್ಜಿತ ಕಟ್ಟಡದ ನಿರ್ಮಾಣ ಆಗಿರುವುದು ಸಮಾಧಾನ ತಂದಿದೆ' ಎಂದು ಬಿಎಂಟಿಸಿ ಸಿಬ್ಬಂದಿ ಹೇಳುತ್ತಾರೆ.

ಟರ್ಮಿನಲ್‌ನಲ್ಲಿ ಇರುವ ಸೌಕರ್ಯ

- ಕೆಎಸ್‌ಆರ್‌ಟಿ, ಬಿಎಂಟಿಸಿ ಬಸ್ ನಿಲುಗಡೆಗೆ ಪ್ರತ್ಯೇಕ ಬಸ್ ಬೇ.
- 120 ಕಾರು, 100 ದ್ವಿಚಕ್ರ ವಾಹನಗಳ ನಿಲುಗಡೆಗೆ ವ್ಯವಸ್ಥೆ.
- ಮಹಿಳೆಯರಿಗೆ ಪ್ರತ್ಯೇಕ ವಿಶ್ರಾಂತಿ ಗೃಹ.
- 4 ಎಕರೆ 13 ಗುಂಟೆ ವಿಸ್ತೀರ್ಣದ ವಿಶಾಲ ನಿಲ್ದಾಣ.
- ಹೈಟೆಕ್ ಶೌಚಾಲಯ, ಅಂಗವಿಕಲರಿಗಾಗಿ ರ್‍ಯಾಂಪ್‌ಗಳು.
- ಕೆ.ಆರ್.ಮಾರುಕಟ್ಟೆ ಕಡೆಯಿಂದ ಬರುವ ಪ್ರಯಾಣಿಕರಿಗಾಗಿ ಸುರಂಗ ಮಾರ್ಗ

ನಿಧನ ವಾರ್ತೆ

ಸೈಯ್ಯದ್ ಅಶ್ರಫ್



ಬೆಂಗಳೂರು: 'ನಾಕುತಂತಿ' ಖ್ಯಾತಿಯ ಕಿರುತೆರೆ ನಟ, ನಿರ್ದೇಶಕ ಸೈಯ್ಯದ್ ಅಶ್ರಫ್(47) ಸೋಮವಾರ(ಅ.31) ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರಿಗೆ ಪತ್ನಿ, ಇಬ್ಬರು ಮಕ್ಕಳು ಇದ್ದಾರೆ.

ನಿರ್ದೇಶಕ ಬಿ.ಸುರೇಶ ಹಾಗೂ ನಿರ್ಮಾಪಕಿ ಶೈಲಜಾ ನಾಗ್ ಅವರ ತಂಡದಲ್ಲಿ ನಟನಾಗಿ ತಮ್ಮ ವೃತ್ತಿ ಬದುಕು ಆರಂಭಿಸಿದ್ದ ಸೈಯದ್, ನಂತರ ಸಹ ನಿರ್ದೇಶಕರಾಗಿ, ನಿರ್ದೇಶಕನಾಗಿ ಸುಮಾರು ಎರಡು ದಶಕ ಕಿರುತೆರೆ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿದ್ದರು.

'ನಾಕುತಂತಿ', 'ತಕಧಿಮಿತ', 'ಮದ ರಂಗಿ', 'ಅಳುಗುಳಿಮನೆ', 'ಫ್ಯಾಮಿಲಿ ನಂ.1', 'ಜೀವನದಿ' ಹೀಗೆ ಶೈಲಜಾ ನಾಗ್ ಹಾಗೂ ಕರ್ನಾಟಕ ಟೆಲಿವಿಷನ್ ಅಸೋಸಿಯೇಷನ್ ಅಧ್ಯಕ್ಷ ಎಸ್. ವಿ.ಶಿವಕುಮಾರ್ ಅವರ ನಿರ್ಮಾಣ ಸಂಸ್ಥೆಯ ಧಾರಾವಾಹಿಗಳಲ್ಲಿ ನಟನೆಯ ಜೊತೆಗೆ ಸಂಚಿಕೆ ನಿರ್ದೇಶಕರಾಗಿ ಹಾಗೂ 'ಅಮ್ಮ ನಾಗಮ್ಮ' ಎಂಬ ವಾರಾಂತ್ಯದ ಶೋನಲ್ಲೂ ಸೈಯದ್ ಕಾರ್ಯನಿರ್ವಹಿಸಿದ್ದರು.

ಸೈಯದ್ ಅವರ ಪಾರ್ಥಿವ ಶರೀರವನ್ನು ಮಧ್ಯಾಹ್ನದವರೆಗೆ ಸಂಪಂಗಿ ರಾಮನಗರದಲ್ಲಿರುವ ಅವರ ಮನೆಯಲ್ಲಿ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಮೈಸೂರು ರಸ್ತೆ ಗೌರಿಪಾಳ್ಯದ ಬಳಿ ಇರುವ ರುದ್ರಭೂಮಿ-ಯಲ್ಲಿ ಅಂತ್ಯಸಂಸ್ಕಾರ ನಡೆಯಿತು.

ಸೂಚನಾ ಫಲಕಕ್ಕೆ ದ್ವಿಚಕ್ರ ವಾಹನ ಡಿಕ್ಕಿ

ದುರ್ಘಟನೆಯಲ್ಲಿ ಇಬ್ಬರ ಸಾವು • ಸವಾರರಿಬ್ಬರೂ ಹೆಲ್ಮೆಟ್ ಧರಿಸಿರಲಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರವರ್ತುಲ ರಸ್ತೆಯ ಲಗ್ಗೆರೆ ಬಳಿ ಭಾನುವಾರ ರಾತ್ರಿ ಅಪಘಾತ ಸಂಭವಿಸಿದ್ದು, ದ್ವಿಚಕ್ರ ವಾಹನ ಸವಾರರಿಬ್ಬರು ಮೃತಪಟ್ಟಿದ್ದಾರೆ.

'ಗೊರಗುಂಟೆಪಾಳ್ಯ ನಿವಾಸಿ ಜಗದೀಶ್ (21) ಹಾಗೂ ದೇವರಾಜ್ (22) ಮೃತರು. ಖಾಸಗಿ ಕಂಪನಿ ಉದ್ಯೋಗಿಗಳಾದ ಇವರಿಬ್ಬರು ಸುಮನಹಳ್ಳಿಯಿಂದ ಗೊರಗುಂಟೆ-ಪಾಳ್ಯದ ಕಡೆಗೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ರಾಜಾಜಿನಗರ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಹೊರವರ್ತುಲ ರಸ್ತೆ ಹಾದು ಹೋಗಿರುವ ನಂದಿನಿ ಲೇಔಟ್–ಲಗ್ಗೆರೆ ಮೇಲ್ಸೇತುವೆ ಬಳಿ ಕಾಮಗಾರಿ ನಡೆಯುತ್ತಿದ್ದು, ಈ ಸ್ಥಳದಲ್ಲಿ ನಿಧಾನವಾಗಿ ಚಲಿಸುವಂತೆ ಸೂಚನಾ ಫಲಕ ಅಳವಡಿಸಲಾಗಿದೆ' ಎಂದು ತಿಳಿಸಿದರು.

'ಜಗದೀಶ್ ಅವರು ವಾಹನ ಚಲಾಯಿಸುತ್ತಿದ್ದರು. ಹಿಂಬದಿಯಲ್ಲಿ ದೇವರಾಜ್ ಕುಳಿತಿದ್ದರು. ಇಬ್ಬರೂ ಹೆಲ್ಮೆಟ್ ಧರಿಸಿರಲಿಲ್ಲ. ಜಗದೀಶ್ ಅವರು ಅತಿ ವೇಗವಾಗಿ ನಿರ್ಲಕ್ಷ್ಯದಿಂದ ದ್ವಿಚಕ್ರ ವಾಹನ ಚಲಾಯಿಸಿದ್ದರು. ಇದರಿಂದಾಗಿ ಸೂಚನಾ ಫಲಕಕ್ಕೆ ವಾಹನ ಡಿಕ್ಕಿ ಹೊಡೆದು, ಉರುಳಿಬಿದ್ದಿ-ತ್ತು' ಎಂದು ಹೇಳಿದರು.

'ತಲೆ ಹಾಗೂ ದೇಹದ ಹಲವು ಭಾಗಗಳಿಗೆ ತೀವ್ರ ಪೆಟ್ಟು ಬಿದ್ದು ಜಗದೀಶ್ ಸ್ಥಳದಲ್ಲೇ ಮೃತಪಟ್ಟಿದ್ದರು. ಗಾಯಗೊಂಡಿದ್ದ ದೇವರಾಜ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಸೋಮವಾರ ಬೆಳಿಗ್ಗೆ ದೇವರಾಜ್ ಸಹ ಅಸುನೀಗಿದ್ದಾರೆ' ಎಂದು ತಿಳಿಸಿದರು.

ಮದ್ಯ ಕುಡಿದಿದ್ದ ಅನುಮಾನ: 'ಜಗದೀಶ್ ಅವರು ಮದ್ಯ ಕುಡಿದು ದ್ವಿಚಕ್ರ ವಾಹನ ಚಲಾಯಿಸುತ್ತಿದ್ದರೆಂಬುದು ಗೊತ್ತಾಗಿದೆ. ಸಂಚಾರ ನಿಯಮ ಉಲ್ಲಂಘಿಸಿದ್ದರಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಸವಾರನ ವಿರುದ್ಧವೇ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.



ಹೊರವರ್ತುಲ ರಸ್ತೆಯ ಲಗ್ಗೆರೆ ಮೇಲ್ಸೇತುವೆ ಬಳಿ ಭಾನುವಾರ ರಾತ್ರಿ ಅಪಘಾತ ಸಂಭವಿಸಿದ್ದ ಸ್ಥಳ – ಪ್ರಜಾವಾಣಿ ಚಿತ್ರ

ಅಪರಾಧ ಸುದ್ದಿ

ಉದ್ಯಮಿ ಹತ್ಯೆ

ಜೋಹಾನ್ಸ್‌ಬರ್ಗ್ (ಪಿಟಿಐ): ಭಾರತೀಯ ಮೂಲದ ಉದ್ಯಮಿ ಕುಂತಾಜ್ ಪಟೇಲ್ (24) ಎಂಬುವರನ್ನು ಉಗಾಂಡದ ಪೊಲೀಸ್ ಕಾನ್‌ಸ್ಟೆಬಲ್‌ವೊಬ್ಬರು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ. ಕಿಸೊರೊ ನಗರದಲ್ಲಿ ಅ. 27ರಂದು ಘಟನೆ ನಡೆದಿದೆ.

'ದಿ ವೈರ್' ಸಂಪಾದಕರ ಮನೆಯಲ್ಲಿ ಶೋಧ

ನವದೆಹಲಿ (ಪಿಟಿಐ): 'ದಿ ವೈರ್' ಸಂಸ್ಥಾಪಕ ಸಂಪಾದಕ ಸಿದ್ಧಾರ್ಥ್ ವರದರಾಜನ್, ಡೆಪ್ಯುಟಿ ಎಡಿಟರ್ ಎಂ.ಕೆ. ವೇಣು ಮತ್ತು ಎಕ್ಸಿಕ್ಯೂಟಿವ್ ನ್ಯೂಸ್ ಪ್ರೊಡ್ಯೂಸರ್ ಜಾಹ್ನವಿ ಸೇನ್ ಅವರ ಮನೆಗಳಲ್ಲಿ ದೆಹಲಿ ಪೊಲೀಸರು ಸೋಮವಾರ ಶೋಧ ನಡೆಸಿದ್ದು, ಇದುವರೆಗೆ ಯಾರನ್ನೂ ಬಂಧಿಸಿಲ್ಲ' ಎಂದು ಹಿರಿಯ ಪೊಲೀಸ್ ಅಧಿಕಾರಿ-ಯೊಬ್ಬರು ತಿಳಿಸಿದ್ದಾರೆ.

ಸುದ್ದಿ ಸಂಸ್ಥೆಯ ಕಚೇರಿಯನ್ನೂ ಶೋಧಿಸಲಾಗಿದ್ದು, ತನಿಖೆಗೆ ಸಂಬಂಧಿಸಿದ ಎಲ್ಲಾ ಎಲೆಕ್ಟ್ರಾನಿಕ್ ಸಾಧನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದೂ ಅವರು ಮಾಹಿತಿ ನೀಡಿದ್ದಾರೆ.

ಬಿಜೆಪಿಯ ಐ.ಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವಿಯಾ ಅವರು 'ದಿ ವೈರ್' ವಿರುದ್ಧ ಸಲ್ಲಿಸಿದ ದೂರಿನ ಆಧಾರದ ಮೇಲೆ ವಂಚನೆ, ಫೋರ್ಜರಿ, ಮಾನನಷ್ಟ ಮತ್ತು ಕ್ರಿಮಿನಲ್ ಪಿತೂರಿ ಅಡಿ ಶನಿವಾರ ಪ್ರಕರಣ ದಾಖಲಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪೊಲೀಸರು ದಾಳಿ ನಡೆಸಿದ್ದು, ಪರಿಶೀಲನೆ ಕೈಗೊಂಡಿದ್ದಾರೆ ಎನ್ನಲಾಗಿದೆ.

'ಪೊಲೀಸರು ಸಂಜೆ 4.40 ರ ಸುಮಾರಿಗೆ ಬಂದು 6 ಗಂಟೆಗೆ ಹೋದರು. ಅಮಿತ್ ಮಾಳವಿಯಾ ಸಲ್ಲಿಸಿರುವ ದೂರಿನ ಸಂಬಂಧ ದಾಖಲಾಗಿರುವ ಎಫ್‌ಐಆರ್ ಹಿನ್ನೆಲೆಯಲ್ಲಿ, ದೆಹಲಿಯ ಅಪರಾಧ ವಿಭಾಗದ ಪೊಲೀಸರ ಪರವಾಗಿ ಇಲ್ಲಿಗೆ ಬಂದಿರುವುದಾಗಿ ಅವರು ಹೇಳಿದರು. ಮಾಹಿತಿಯನ್ನು ಕಾಪಿ ಮಾಡಿಕೊಳ್ಳಲು ಅವರು ನನ್ನ ಐಫೋನ್ ಮತ್ತು ಐಪ್ಯಾಡ್ ಅನ್ನು ತೆಗೆದುಕೊಂಡು ಹೋದರು. ವರದರಾಜನ್ ಅವರ ಮನೆಯ ಮೇಲೂ ದಾಳಿ ನಡೆಯುತ್ತಿದೆ' ಎಂದು ಎಂ.ಕೆ. ವೇಣು ಅವರ ಹೇಳಿಕೆ ಉಲ್ಲೇಖಿಸಿ ಸುದ್ದಿ ಮಾಧ್ಯಮಗಳು ವರದಿ ಮಾಡಿವೆ.

ಈ ಸಂಬಂಧ ಸಿದ್ಧಾರ್ಥ್ ಅವರ ಸಹೋದರ ತುಂಕು ವರದರಾಜನ್ ಟ್ವೀಟ್ ಮಾಡಿದ್ದು, 'ಮಾಳವಿಯಾ ವಿರುದ್ಧ ಪ್ರಕಟಿಸಿದ್ದನ್ನು ಹಿಂಪಡೆದಿರು-ವಾಗಲೂ ಎಲೆಕ್ಟ್ರಾನಿಕ್ ಸಾಧನಗಳನ್ನು ವಶಪಡಿಸಿಕೊಂಡಿರುವುದು ಪ್ರಜಾ-ಪ್ರಭುತ್ವದಲ್ಲಿ ಅಸಹ್ಯಕರವಾದದ್ದು. ಈ ಕುರಿತು ಭಾರತೀಯರು ಪ್ರತಿಭಟನೆಯ ಧ್ವನಿ ಎತ್ತಬೇಕು'ಎಂದಿದ್ದಾರೆ.

ಬೈಂದೂರಿನಲ್ಲಿ ಸುಲಿಗೆಗೆ ಯತ್ನ: ಬೆಂಗಳೂರಿನಲ್ಲಿ ಸಿಕ್ಕಿಬಿದ್ದ ಆರೋಪಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಡುಪಿ ಜಿಲ್ಲೆಯ ಬೈಂದೂರು ವ್ಯವಸಾಯ ಸೇವಾ ಸಹಕಾರಿ ಸಂಘದ ಕಚೇರಿಯಲ್ಲಿ ಸುಲಿಗೆಗೆ ಯತ್ನಿಸಿ ಪರಾರಿಯಾಗಿದ್ದ ಆರೋಪಿಗಳು, ಬೆಂಗಳೂರಿನ ಜಯನಗರ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾರೆ.

'ಮಂಗಳೂರಿನ ಮೊಹಮ್ಮದ್ ರಫೀಕ್ ಹಾಗೂ ಬೆಂಗಳೂರು ಶಿವಾಜಿ ನಗರದ ಮೊಹಮ್ಮದ್ ಅನೀಸ್ ಬಂಧಿತರು. ನಗರದಲ್ಲಿ ನಡೆದಿದ್ದ ಸರ ಗಳವು ಪ್ರಕರಣದಲ್ಲಿ ಇವರಿಬ್ಬರನ್ನು ಬಂಧಿಸಲಾಗಿದೆ. ಬೈಂದೂರಿನಲ್ಲಿ ಸುಲಿಗೆಗೆ ಯತ್ನಿಸಿದ್ದ ಸಂಗತಿಯನ್ನು ಆರೋಪಿಗಳು ಬಾಯಿ ಬಿಟ್ಟಿದ್ದಾರೆ' ಎಂದು ಜಯನಗರ ಪೊಲೀಸರು ಹೇಳಿದರು. 'ಪಟ್ಟಾಭಿರಾಮನಗರದ 13ನೇ ಅಡ್ಡರಸ್ತೆಯಲ್ಲಿ ಮಹಿಳೆಯೊಬ್ಬ-ರನ್ನು ಹಿಂಬಾಲಿಸಿದ್ದ ಆರೋಪಿಗಳು, ವಿಳಾಸ ಕೇಳುವ ನೆಪದಲ್ಲಿ ಚಿನ್ನದ ಸರ ಕಿತ್ತೊಯ್ದಿದ್ದರು. ಈ ಸಂಬಂಧ ಪ್ರಕರಣ ದಾಖಲಾಗಿತ್ತು' ಎಂದು ತಿಳಿಸಿದರು.

'ಬೆಂಗಳೂರಿನ ಜೆ.ಪಿ.ನಗರ, ಎಚ್‌ಎಸ್‌ಆರ್ ಲೇಔಟ್, ಶಂಕರಪುರ, ಬಸವನಗುಡಿ, ಬನ್ನೇರುಘಟ್ಟ, ಮಂಗಳೂರು ಹಾಗೂ ಚಿಕ್ಕಮಗ-ಳೂರಿನಲ್ಲಿ ಆರೋಪಿಗಳು ಅಪರಾಧ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ. ಇವರ ಸಹಚರರು ತಲೆಮ-ರೆಸಿಕೊಂಡಿದ್ದು, ಅವರ ಪತ್ತೆಗಾಗಿ ತನಿಖೆ ಮುಂದುವರಿಸಲಾಗಿದೆ' ಎಂದರು.

ಜೈಲಿನಿಂದ ಪರಾರಿಯಾಗಿದ್ದ ಆರೋಪಿ: 'ಬಂಧಿತ ಆರೋಪಿ ಮೊಹಮ್ಮದ್ ರಫೀಕ್ ಅಪರಾಧ ಹಿನ್ನೆಲೆಯುಳ್ಳವ. ಪ್ರಕರಣವೊಂದರಲ್ಲಿ ಜೈಲು ಸೇರಿದ್ದ ಈತ, ಅಲ್ಲಿಂದ ಪರಾರಿಯಾಗಿದ್ದ. ಈ ಸಂಬಂಧ ಪ್ರತ್ಯೇಕ ಪ್ರಕರಣವೂ ದಾಖಲಾಗಿತ್ತು' ಎಂದು ಪೊಲೀಸರು ತಿಳಿಸಿದರು.

'ಸಹಚರರ ಜೊತೆ ಕೆಲ ದಿನಗಳ ಹಿಂದೆಯಷ್ಟೇ ಬೈಂದೂರಿಗೆ ಹೋಗಿದ್ದ ರಫೀಕ್, ಅಲ್ಲಿಯ ವ್ಯವಸಾಯ ಸೇವಾ ಸಹಕಾರಿ ಸಂಘದ ಕಚೇರಿಗೆ ನುಗ್ಗಿದ್ದ. ಸಿಬ್ಬಂದಿಯನ್ನು ಬೆದರಿಸಿ ಸುಲಿಗೆಗೆ ಯತ್ನಿಸಿದ್ದ. ಸ್ಥಳೀಯರು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದಂತೆ ಆರೋಪಿಗಳು ಅಲ್ಲಿಂದ ಪರಾರಿಯಾಗಿ-ದ್ದರು' ಎಂದು ಹೇಳಿದರು.

ಮೃತದೇಹ ಪಡೆಯದ ಕುಟುಂಬಸ್ಥರು: ಪೊಲೀಸರಿಂದ ಅಂತ್ಯಕ್ರಿಯೆ

ಬೆಂಗಳೂರು: ಯಲಹಂಕ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡಿದ್ದ ಪ್ರೇಮಾ (48) ಅವರ ಮೃತದೇಹ ಪಡೆಯಲು ಕುಟುಂಬಸ್ಥರು ನಿರಾಕರಿಸಿದ್ದು, ಪೊಲೀಸರೇ ಅಂತ್ಯಕ್ರಿಯೆ ನೆರವೇರಿಸಿದ್ದಾರೆ.

'ಯಲಹಂಕದ ಗಾಂಧಿನಗರ 2ನೇ ಮುಖ್ಯರಸ್ತೆಯ ಬಾಡಿಗೆ ಮನೆಯಲ್ಲಿ ಒಂಟಿಯಾಗಿ ನೆಲೆಸಿದ್ದ ಪ್ರೇಮಾ, ಅ. 26ರಂದು ರಾತ್ರಿ ಎರಡನೇ ಮಹಡಿಯಿಂದ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದರು' ಎಂದು ಪೊಲೀಸರು ಹೇಳಿದರು.

'ಬಾಡಿಗೆ ಮನೆ ಪಡೆಯುವ ವೇಳೆಯಲ್ಲಿ ಪ್ರೇಮಾ ಅವರು ಕುಟುಂಬಸ್ಥರ ಬಗ್ಗೆ ಮಾಹಿತಿ ನೀಡಿರಲಿಲ್ಲ. ಆರಂಭದಲ್ಲಿ ಪ್ರೇಮಾ ಕುಟುಂಬಸ್ಥರು ಯಾರು ಎಂಬುದು ಗೊತ್ತಾಗಿರಲಿಲ್ಲ. ಆಸ್ಪತ್ರೆಯಲ್ಲೇ ಮೃತದೇಹವಿಟ್ಟು, ಸಂಬಂಧಿಕರಿಗಾಗಿ ಹುಡುಕಾಟ ನಡೆಸಲಾಗಿತ್ತು.'

'ಪ್ರೇಮಾ ಅವರಿಗೆ ಪತಿ ಹಾಗೂ ಮಗ ಇರುವ ಮಾಹಿತಿ ಲಭ್ಯವಾಗಿತ್ತು. ಮಗ ಬಾಲಕನಾಗಿದ್ದಾಗಲೇ ಪತಿಗೆ ವಿಚ್ಛೇದನ ನೀಡಿದ್ದ ಪ್ರೇಮಾ, ಅಂದಿನಿಂದಲೇ ಒಂಟಿಯಾಗಿ ವಾಸವಿದ್ದರು. ಶಾಲೆಯೊಂದರಲ್ಲಿ ಕೆಲಸಕ್ಕೆ ಹೋಗುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

'ಪ್ರೇಮಾ ಸಾವಿನ ವಿಷಯವನ್ನು ಪತಿ– ಮಗನಿಗೆ ತಿಳಿಸಲಾಯಿತು. ಅದಕ್ಕೆ ಪ್ರತಿಕ್ರಿಯಿಸಿದ್ದ ಇಬ್ಬರೂ, 'ಪ್ರೇಮಾ ಅವರು ಹಲವು ವರ್ಷಗಳ ಹಿಂದೆಯೇ ನಮ್ಮನ್ನು ಬಿಟ್ಟು ಹೋಗಿದ್ದಾರೆ. ಅವರ ಮುಖ ನಾವು ನೋಡುವುದಿಲ್ಲ. ಅಂತ್ಯಕ್ರಿಯೆ ಸಹ ಮಾಡುವುದಿಲ್ಲ. ಬೇಕಾದರೆ, ನೀವೇ ಅಂತ್ಯಕ್ರಿಯೆ ಮಾಡಿ' ಎಂಬುದಾಗಿ ಹೇಳಿಕೆ ನೀಡಿದ್ದರು.''ಮೃತದೇಹ ನೋಡಲು ಸಹ ಕುಟುಂಬಸ್ಥರು ಯಾರೂ ಬಂದಿರಲಿಲ್ಲ. ಹೀಗಾಗಿ, ಪೊಲೀಸರೇ ಅಂತ್ಯಕ್ರಿಯೆ ನಡೆಸಲು ತೀರ್ಮಾನಿಸಿದ್ದರು. ಡಿಸಿಪಿ ಅನೂಪ್ ಶೆಟ್ಟಿ, ಇನ್‌ಸ್ಪೆಕ್ಟರ್ ವಿ. ಬಾಲಾಜಿ ಮಾರ್ಗ-ದರ್ಶದಲ್ಲಿ ಕಾನ್‌ಸ್ಟೆಬಲ್ ಶಂಕರೆಪ್ಪ ಹಾಗೂ ಇತರರು, ಕಲ್ಪಳ್ಳಿ ರುದ್ರಭೂಮಿ-ಯಲ್ಲಿ ಪ್ರೇಮಾ ಅವರ ಅಂತ್ಯಕ್ರಿಯೆ ನಡೆಸಿ ವಿಧಿ–ವಿಧಾನ ನೆರವೇರಿಸಿದ್ದಾರೆ' ಎಂದು ಪೊಲೀಸರು ಹೇಳಿದರು.



ಅವ್ವರಸಿ

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಎನ್.ಆರ್. ಕಾಲೊನಿಯ ಪ್ರಭಾತ್ ಕಲಾ ಪೂರ್ಣಿಮಾದಲ್ಲಿ ಸೆಂಟರ್ ಫಾರ್ ಡಿವೈನ್ ಆರ್ಟ್ಸ್ ಆಯೋಜಿಸಿದ್ದ 'ಅವ್ವರಸಿ' ಏಕವ್ಯಕ್ತಿ ಪ್ರಯೋಗದಲ್ಲಿ ಹಿರಿಯ ರಂಗಭೂಮಿ ಕಲಾವಿದೆ ಡಾ. ಲೀಲಾ ಬಸವರಾಜು ಅಭಿನಯಿಸಿದ ಒಂದು ದೃಶ್ಯ.

ಬಹಿರಂಗ ಚರ್ಚೆಗೆ ಸಿದ್ಧ: ಸಿ.ಎನ್. ಬಾಲಕೃಷ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಒಕ್ಕಲಿಗರ ಸಂಘದಲ್ಲಿ ಯಾವುದೇ ರೀತಿಯ ಅವ್ಯವಹಾರ ನಡೆದಿಲ್ಲ. ಯಾವುದೇ ಪ್ರಕರಣದ ಬಗ್ಗೆ ಬಹಿರಂಗ ಚರ್ಚೆಗೆ ನಾವು ಸಿದ್ಧ' ಎಂದು ಸಂಘದ ಅಧ್ಯಕ್ಷ ಸಿ.ಎನ್. ಬಾಲಕೃಷ್ಣ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಸಂಘದಲ್ಲಿ ಅವ್ಯವಹಾರ ನಡೆದಿದೆ ಎಂದು ಕೆಲವರು ಆರೋಪ ಮಾಡಿದ್ದಾರೆ. ಅದರಲ್ಲಿ ಯಾವುದೇ ಸತ್ಯಾಂಶವಿಲ್ಲ. ನಾವು ಅಧಿಕಾರಕ್ಕೆ ಬಂದಾಗಿನಿಂದ ಹೊಸ ಟೆಂಡರ್ ಕರೆದಿಲ್ಲ. ಹಿಂದಿನ ಕಾಮಗಾರಿಯನ್ನೇ ಮುಂದುವರಿಸಲಾ-ಗಿದೆ' ಎಂದು ಹೇಳಿದರು.

'ಅಧ್ಯಕ್ಷರ ವಿರುದ್ಧದ ಅವಿಶ್ವಾಸ ನಿರ್ಣಯಕ್ಕೆ ಸಂಬಂಧಿಸಿದಂತೆ 18 ಜನರು ಬರೆದಿರುವ ಪತ್ರವನ್ನು ಕಾರ್ಯದರ್ಶಿಯವರಿಗೆ ನೀಡಿದ್ದಾರೆ. ಇದರಲ್ಲಿ ಆರು ಮಂದಿಯ ಸಹಿ ಇಲ್ಲ. ಇನ್ನೊಂದಿಬ್ಬರು ನಾವು ಸಹಿಯೇ ಮಾಡಿಲ್ಲ ಎಂದು ನಮಗೆ ತಿಳಿಸಿದ್ದಾರೆ. ಹೀಗಾಗಿ ಈ ಪತ್ರದ ಸತ್ಯಾಸತ್ಯತೆ ಬಗ್ಗೆ ಪರಿಶೀಲನೆ ನಡೆಸಬೇಕಿದೆ. ಸಹಕಾರ ಸಂಘಗಳ ರಿಜಿಸ್ಟ್ರಾರ್‌ಗೆ ಪತ್ರ ಬರೆದು ಈ ಬಗ್ಗೆ ಮಾಹಿತಿ ಪಡೆಯಲಿದ್ದೇವೆ. ನಂತರ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ' ಎಂದು ವಿವರಿಸಿದರು.

'10 ತಿಂಗಳ ಅವಧಿಯಲ್ಲಿ ನಮ್ಮ ಆಡಳಿತ ಮಂಡಳಿ ಸಾಕಷ್ಟು ಹಣವನ್ನು ಉಳಿಸಿದೆ. ಶ್ರೀಗಂಧದ ಕಾವಲಿನ ಹಾಸ್ಟೆಲ್ ನಿರ್ಮಾಣದಲ್ಲಿ ಅವ್ಯವಹಾರದ ₹36 ಲಕ್ಷವನ್ನು ತಡೆ-ಹಿಡಿಯಲಾಗಿದೆ. ಮಾಜಿ ನಿರ್ದೇಶಕರು ಹಾಗೂ ಸಿಬ್ಬಂದಿಯಿಂದ ಸಂಘಕ್ಕೆ ಬರಬೇಕಿದ್ದ ಹಣದಲ್ಲಿ ₹50 ಲಕ್ಷ ವಸೂಲಿ ಮಾಡಲಾಗಿದ್ದು, ಬಾಕಿ ಉಳಿಕೆಗೆ ಕ್ರಮ ಕೈಗೊಳ್ಳಲಾಗಿದೆ. ಶ್ರೀಗಂಧದ ಕಾವಲು ಮತ್ತು ಮಂಡ್ಯದಲ್ಲಿ ನರ್ಸಿಂಗ್ ಕಾಲೇಜುಗಳನ್ನು ಪ್ರಾರಂಭಿಸ-ಲಾಗುತ್ತಿದೆ. ಆಯುರ್ವೇದಿಕ್ ಕಾಲೇಜು ಆರಂಭವಾಗುತ್ತಿದೆ. ಸಜ್ಜೆಪಾಳ್ಯದ ಐದು ಸಾವಿರ ಕೋಟಿ ಬೆಲೆಬಾಳುವ ಜಮೀನನ್ನು ಸಂಘಕ್ಕೆ ಪಡೆಯುವ ಪ್ರಯತ್ನಕ್ಕೆ ಕೈ ಹಾಕಿದ್ದನ್ನು ಸಹಿಸದೆ ವೃಥಾ ಆರೋಪ ಮಾಡುತ್ತಿದ್ದಾರೆ' ಎಂದರು.

'ಕಾಮಗಾರಿ ನಡೆಯದ ಯಾವುದೇ ಬಿಲ್‌ಗೆ ನಾವು ಪಾವತಿ ಮಾಡಿಲ್ಲ. ಈ ಬಗ್ಗೆ ಯಾರಾದರೂ ಸಾಬೀತು ಮಾಡಿ ದರೆ ಕಾರ್ಯದರ್ಶಿ ಸ್ಥಾನಕ್ಕೆ ಮಾತ್ರವಲ್ಲ, ನಿರ್ದೇಶಕ ಸ್ಥಾನಕ್ಕೇ ರಾಜೀನಾಮೆ ನೀಡುತ್ತೇನೆ' ಎಂದು ಪ್ರಧಾನ ಕಾರ್ಯ ದರ್ಶಿ ಟಿ. ಕೋನಪ್ಪ ರೆಡ್ಡಿ ಹೇಳಿದರು.

'350 ಕಾಟ್‌ಗಳ ಖರೀದಿಯಲ್ಲಿ ಒಂದು ಕಾಟ್‌ಗೆ ₹1,500 ಹೆಚ್ಚು ಹಣ ಕೊಟ್ಟು ಕೋಟ್ಯಂತರ ಅವ್ಯವಹಾರ ಮಾಡಲಾಗಿದೆ ಎಂದು ದೂರಲಾಗಿದೆ. ಇದರಲ್ಲಿ ಸತ್ಯಾಂಶ ಇಲ್ಲ. ಕೋಟ್ಯಂತರ ಎಂಬುದೇ ತಪ್ಪು. ಅವರು ಹೇಳುವ ಲೆಕ್ಕದಲ್ಲಿ, ₹5.25 ಲಕ್ಷವಾಗುತ್ತದೆ. ಇಂತಹ ಅವ್ಯವಹಾರವೂ ಆಗಿಲ್ಲ. ಬದಲಿಗೆ ಸೇವಾ ಶುಲ್ಕದಲ್ಲೇ ಕೆಲವು ಸಾವಿರ ಉಳಿಸಲಾಗಿದೆ' ಎಂದು ಖರೀದಿ ಸಮಿತಿ ಅಧ್ಯಕ್ಷ ಎಚ್.ಎನ್. ರವೀಂದ್ರ ವಿವರ ನೀಡಿದರು.

ಎಲ್‌.ಸಿ.ನಾಗರಾಜ್ ವಿರುದ್ಧದ ಲಂಚ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಂಚದ ಆರೋಪಕ್ಕೆ ಸಂಬಂಧಿಸಿದಂತೆ ಕೆಎಎಸ್ ಅಧಿಕಾರಿ-ಯೊಬ್ಬರ ವಿರುದ್ಧ 7 ವರ್ಷಗಳ ನಂತರ ದಾಖಲಿಸಲಾಗಿದ್ದ ಕ್ರಿಮಿನಲ್ ಪ್ರಕರಣ-ವನ್ನು ಹೈಕೋರ್ಟ್ ರದ್ದುಪಡಿಸಿದೆ.

'ನನ್ನ ವಿರುದ್ಧದ ಸೆಷನ್ಸ್ ನ್ಯಾಯಾಲಯದಲ್ಲಿನ ವಿಚಾರಣೆ ರದ್ದು-ಗೊಳಿಸಬೇಕು' ಎಂದು ಕೋರಿ ಎಲ್‌.ಸಿ. ನಾಗರಾಜ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾ. ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಎ.ಎಸ್.ಪೊನ್ನಣ್ಣ, 'ದೂರುದಾರರು ಸಾಕಷ್ಟು ವಿಳಂಬ ಮಾಡಿ ದೂರು ದಾಖಲಿಸಿದ್ದಾರೆ. ಏಳು ವರ್ಷಗಳ ಅವಧಿಯಲ್ಲಿ ನ್ಯಾಯಾಲಯ ಅಥವಾ ಅರೆ ನ್ಯಾಯಾಂಗ ಪ್ರಾಧಿಕಾರದ ಮುಂದೆ ಯಾಕೆ ದೂರು ಕೊಡದೇ ದುರುದ್ದೇಶದಿಂದ 2022ರ ಫೆಬ್ರುವರಿ 16ರಂದು ಭ್ರಷ್ಟಾಚಾರ ನಿಗ್ರಹ ದಳದಲ್ಲಿ (ಎಸಿಬಿ) ದೂರು ದಾಖಲಿಸಿದ್ದಾರೆ. ಆದರೆ, ಈ ವಿಳಂಬಕ್ಕೆ ಸೂಕ್ತ ಕಾರಣ ನೀಡಿಲ್ಲ' ಎಂಬ ವಾದ ಮಂಡಿಸಿದ್ದರು.

ವಾದಾಂಶ ಮಾನ್ಯ ಮಾಡಿದ ನ್ಯಾಯಪೀಠ ಸಿಟಿ ಸಿವಿಲ್ ಕೋರ್ಟ್‌ನ 23ನೇ ಹೆಚ್ಚುವರಿ ಸೆಷನ್ಸ್ ನ್ಯಾ-ಯಾಲಯದಲ್ಲಿ ಅರ್ಜಿದಾರರ ವಿರುದ್ಧ ನಡೆಯುತ್ತಿರುವ ವಿಚಾರಣೆ ರದ್ದುಗೊಳಿಸಿ ಆದೇಶಿಸಿದೆ.

ಪ್ರಕರಣವೇನು?

ಬೆಂಗಳೂರು ದಕ್ಷಿಣ ತಾಲ್ಲೂಕಿನ ವಡ್ಡರಪಾಳ್ಯದಲ್ಲಿ ಜಮೀನಿನ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಾಗಿತ್ತು. ಈ ಸಂಬಂಧ ಸಹಾಯಕ ಆಯುಕ್ತರ ಮುಂದೆ ಮನವಿ ಸಲ್ಲಿಸುವಂತೆ ಹೈಕೋರ್ಟ್ 2014ರಲ್ಲಿ ನಿರ್ದೇಶಿಸಿತ್ತು.

ವ್ಯಾಜ್ಯದ ಭಾಗೀದಾರ ಎಂ.ಬಸವರಾಜು 2014ರಲ್ಲಿ ಅಂದು ಸಹಾಯಕ ಆಯುಕ್ತ-ರಾಗಿದ್ದ ಎಲ್‌.ಸಿ. ನಾಗರಾಜ್ ಮುಂದೆ ದೂರು ಸಲ್ಲಿಸಿದ್ದರು. 'ಈ ಪ್ರಕರಣದಲ್ಲಿ ನಿಮ್ಮ ಪರ ತೀರ್ಪು ಪಡೆಯಲು ₹ 6 ಲಕ್ಷ ಲಂಚ ನೀಡಬೇಕು. ಇದಕ್ಕೆ ಒಪ್ಪಿ 2015ರ ಮಾರ್ಚ್ 15ರಂದು ₹ 2 ಲಕ್ಷ ಲಂಚದ ರೂಪದಲ್ಲಿ ನೀಡಲಾಗಿತ್ತು' ಎಂದು ಬಸವರಾಜು ಆರೋಪಿಸಿದ್ದರು.

ಮೊರ್ಬಿ ದುರಂತ: ಜಾಗತಿಕ ನಾಯಕರ ಸಂತಾಪ

ವಾಷಿಂಗ್ಟನ್ (ಪಿಟಿಐ): ಗುಜರಾತ್‌ನ ಮೊರ್ಬಿ ನಗರದಲ್ಲಿ ಸಂಭವಿಸಿದ ತೂಗುಸೇತುವೆ ಕುಸಿತದ ದುರಂತದಲ್ಲಿ ಮೃತಪಟ್ಟ ಸಂತ್ರಸ್ತರ ಕುಟುಂಬಗಳಿಗೆ ಅಮೆರಿಕ ಅಧ್ಯಕ್ಷ ಜೋ ಬೈಡನ್, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮತ್ತು ಇಸ್ರೇಲ್ ಪ್ರಧಾನಿ ಯೈರ್ ಲಾಪಿಡ್ ಸೇರಿ ಜಾಗತಿಕ ನಾಯಕರು ಸೋಮವಾರ ಸಂತಾಪ ಸೂಚಿಸಿದ್ದಾರೆ.

'ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಗಳಿಗೆ ತೀವ್ರ ಸಂತಾಪ ಸೂಚಿಸುತ್ತೇವೆ. ಗುಜರಾತ್ ಜನರೊಂದಿಗೆ ದುಃಖ ದಲ್ಲಿ ಭಾಗಿಯಾಗಿದ್ದೇವೆ. ಈ ಕಷ್ಟದ ಸಮಯ ದಲ್ಲಿ ನಾವು ಭಾರತೀಯ ರೊಂದಿಗೆ ನಿಲ್ಲುತ್ತೇವೆ' ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಶ್ರೀಲಂಕಾ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ, ನೇಪಾಳ ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ಸೇರಿ ಅನೇಕರು ದುರಂತಕ್ಕೆ ಕಂಬನಿ ಮಿಡಿದಿದ್ದಾರೆ.

ಶೋಕ ದಿನಾಚರಣೆ: ಮೃತಪಟ್ಟವರಿಗೆ ಶ್ರದ್ಧಾಂಜಲಿ ಸಲ್ಲಿಸಲು ಗುಜರಾತ್ ಸರ್ಕಾರ ಮಂಗಳವಾರ ರಾಜ್ಯಾದ್ಯಂತ ಶೋಕಾಚರಣೆಗೆ ನಿರ್ಧರಿಸಿದೆ. ಮೋದಿ ನೇತೃತ್ವದಲ್ಲಿ ನಡೆದ ಸಭೆ ಈ ತೀರ್ಮಾನಕ್ಕೆ ಬಂದಿದೆ.

ಪ್ರಜಾವಾಣಿ
ಮಂಗಳವಾರ, 1 ನವೆಂಬರ್ 2022



ಮಾತು ಅರ್ಥಗಳ ದಾಂಪತ್ಯ

ಇಬ್ಬರು ವ್ಯಕ್ತಿಗಳು ಮದುವೆಯಾದ ನಂತರ ಎಲ್ಲವನ್ನೂ ಹಂಚಿಕೊಂಡು ಒಂದೇ ಸೂರಿನಡಿಗೆ ಬದುಕು ಸಾಗಿಸುವುದು ಸುಲಭದ ಕಾರ್ಯವಲ್ಲ; ಅದೊಂದು ತಪಸ್ಸೇ.

ಡಾ. ಕೆ. ಎಸ್. ಶುಭ್ರತಾ

ನದಿ ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಹರಿಯುತ್ತದೆ. ಎರಡೂ ಕಡೆಗೂ ಜನರಿದ್ದಾರೆ. ಈ ನದಿಯ ನೀರು ಹರಿಯುವುದನ್ನು ನೋಡುವುದೇ ಮನಸ್ಸಿಗೆ ಖುಷಿಕೊಡುತ್ತದೆ. ಹಾಗೆಯೇ ಎರಡೂ ಜಾಗದ ಜನರಿಗೆ ಎಷ್ಟೋ ಅನುಕೂಲಗಳು. ಒಮ್ಮೊಮ್ಮೆ ನದಿಯ ನೀರಿನ ಪ್ರಮಾಣ ಕಡಿಮೆಯಾಗಿ, ಈ ಬದಿಯ ಜನರಿಗೆ ನೀರೇ ಸಿಗುವುದಿಲ್ಲ. ಇನ್ನು ಕೆಲವು ಬಾರಿ, ನೀರಿನ ರಭಸ ಹೆಚ್ಚಾಗಿ, ಈ ಬದಿಯ ಜಾಗಕ್ಕೆ ನೀರು ಮುನ್ನುಗ್ಗಿ ಬಂದು, ತೊಂದರೆಗಳನ್ನು ಮಾಡುತ್ತದೆ. ಒಟ್ಟಿನಲ್ಲಿ ಈ ನದಿಯ ನೀರು ಹೆಚ್ಚು ಅಲ್ಲದೇ, ಕಡಿಮೆಯೂ ಆಗದೇ, ಸರಿಯಾದ ಪ್ರಮಾಣದಲ್ಲಿ ಹರಿದರಷ್ಟೇ ಎಲ್ಲವೂ ಸಹಜ, ಸಂತಸ. ಅಂತೆಯೇ ಪತಿ-ಪತ್ನಿಯ ನಡುವಿನ ಸಂವಹನ ಕೂಡ. ಸಂಗಾತಿಗಳ ಮಧ್ಯೆ, ಈ ನದಿಯ ನೀರಿನಂತೆ ಮನಸ್ಸಿನ ಇಚ್ಛೆಗಳು-ಯೋಚನೆಗಳು, ಮಾತುಗಳ ಮೂಲಕ ಸರಿಯಾಗಿ ಒಬ್ಬರಿಂದ ಇನ್ನೊಬ್ಬರಿಗೆ ತಲುಪಿದರೆ ಎಲ್ಲವೂ ಸುಖ. ಇಲ್ಲದಿದ್ದರೆ ದಾಂಪತ್ಯದಲ್ಲಿ ವಿಧವಿಧ ಸಮಸ್ಯೆಗಳು. ಒಂದು ಅಧ್ಯಯನದ ಪ್ರಕಾರ, ಸತಿ-ಪತ್ನಿಯ ನಡುವಿನ ಸಂವಹನ ಪರಿಣಾಮಕಾರಿಯಾಗಿದ್ದರೆ, ಶೇ. 50ರಷ್ಟು ವಿಚ್ಛೇದನಗಳನ್ನು ತಡೆಗಟ್ಟಬಹುದಂತೆ. ಇನ್ನೊಂದು ಅಧ್ಯಯನದ ಪ್ರಕಾರ ಲಿವಿಂಗ್ ರೂಂನಲ್ಲಿ ಆಗುವ ಸಂವಹನದಿಂದ, ನಿಮ್ಮ ಸಂಗಾತಿಗೆ ಸಂತಸ ಸಿಕ್ಕರೆ, ಬೆಡ್ ರೂಂನಲ್ಲಿನ ಲೈಂಗಿಕ ಕ್ರಿಯೆಯೂ ಸುಖಕರವಾಗಿರುತ್ತದಂತೆ.

ಪರಿಣಾಮಕಾರಿಯಾದ ಸಂವಹನ ಒಂದು ಕಲೆ. ಹುಟ್ಟಿನಿಂದಲೇ ಇರಬೇಕಾದ ಕೌಶಲವೇನಲ್ಲ. ಬಾಲ್ಯದ ಘಟನೆಗಳು, ನಮ್ಮ ಸುತ್ತಮುತ್ತಲಿನ ವ್ಯಕ್ತಿಗಳು, ನಾವು ಬೆಳೆದ ವಾತಾವರಣ, ಕೌಟುಂಬಿಕ ಪರಿಸರ – ಇವೆಲ್ಲವೂ ನಾವು ಬೆಳೆಸಿಕೊಳ್ಳುವ ವಿವಿಧ ಸ್ವಭಾವ ಲಕ್ಷಣಗಳ ಮೇಲೆ ಪರಿಣಾಮ ಬೀರುತ್ತವೆ. ಈ ರೀತಿ ನಮ್ಮಲ್ಲಿ ರೂಪುಗೊಂಡ ಸಂವಹನ ಕಲೆನನ್ನು ನಾಳಿನ ಜೀವನ, ಪರಸ್ಪರ ವ್ಯಕ್ತಿಗಳ ಸಂಬಂಧಗಳು ಯಶಸ್ವಿಯಾಗಲು ಮಹತ್ವದ ಪಾತ್ರವನ್ನು ವಹಿಸುತ್ತವೆ. ಅದಕ್ಕೇ ವಿಶ್ವ ಆರೋಗ್ಯ ಸಂಸ್ಥೆ ನೀಡಿರುವ ಎಲ್ಲರಲ್ಲಿ ಇರಲೇಬೇಕಾದ ಹತ್ತು ಜೀವನ ಕೌಶಲಗಳಲ್ಲಿ, ಪರಿಣಾಮಕಾರಿಯಾದ ಸಂವಹನವೂ ಒಂದು. ಬೇರೆ ಬೇರೆ ಪರಿಸರದಲ್ಲಿ ಬೆಳೆದು, ಇಬ್ಬರು ವ್ಯಕ್ತಿಗಳು ಮದುವೆಯಾದ ನಂತರ ಎಲ್ಲವನ್ನೂ ಹಂಚಿಕೊಂಡು ಒಂದೇ ಸೂರಿನಡಿಗೆ ಬದುಕು ಸಾಗಿಸುವುದು ಸುಲಭದ ಕಾರ್ಯವಲ್ಲ. ಅದೊಂದು ತಪಸ್ಸೇ. ಈ ತಪಸ್ಸಿನಲ್ಲಿ ಇಬ್ಬರೂ ಈ ಸಂವಹನ ಕಲೆಯನ್ನು ರೂಢಿಸಿಕೊಂಡರೆ, ತಪಸ್ಸು ಕಷ್ಟವೆನಿಸಲಿಕ್ಕಿಲ್ಲ.

- ಪತಿ-ಪತ್ನಿಯ ನಡುವೆ ಜಗಳಗಳು ಸಾಮಾನ್ಯವೇ. ಭಾವನಾತ್ಮಕವಾಗಿ ನೊಂದ ಮನಸ್ಸಿನಿಂದ ಬರುವಂತಹ ಮಾತುಗಳಿಗೆ ಹಲವಾರು ಬಾರಿ ಅರ್ಥವಿಲ್ಲ. ಅಸಂಬದ್ಧ ಪ್ರಲಾಪವದು. ಆದರೆ ಒಂದು ಬಾರಿ ಆಡಿದ ಮಾತು, ಇನ್ನೊಬ್ಬ ಸಂಗಾತಿಯಲ್ಲಿ ಗಟ್ಟಿಯಾಗಿ ಉಳಿದುಬಿಡುವುದು. ಆದ್ದರಿಂದ ಜಗಳಗಳಾಗುವಾಗ, ಆದಷ್ಟು ಮಾತು ನಿಯಂತ್ರಿಸಲು ಪ್ರಯತ್ನಿಸಿ. ಮನಸ್ಸು ಶಾಂತವಾದ ನಂತರ ನಿಮ್ಮ ಸಂವಾದ ಮುಂದುವರೆಯಲಿ.
- ಸಂವಹನದ ಮೊದಲ ಹೆಜ್ಜೆ ಆಸಕ್ತಿಯಿಂದ ಕೇಳುವುದು, ನಿಮ್ಮ ಸಂಗಾತಿ ಮಾತನಾಡುವಾಗ ಅವರ ಮಾತುಗಳನ್ನು ಆಲಿಸಿ, ಕೈಯಲ್ಲಿರುವ ಮೊಬೈಲ್, ಕಿವಿಯಲ್ಲಿರುವ ಇಯರ್ ಫೋನ್, ಕಣ್ಣಲ್ಲಿ ನೋಡುತ್ತಿರುವ ಟಿ.ವಿ.ಯನ್ನು ಕೆಲವು ಕ್ಷಣಗಳ ಕಾಲವಾದರೂ ದೂರ ಮಾಡಿ.
- ನೀವು ನಿಮ್ಮ ಸಂಗಾತಿಗೆ ಏನು ಹೇಳಲು ಬಯಸುತ್ತೀರ, ಅದನ್ನು ನೇರವಾಗಿ ಹೇಳಿ. ಸುತ್ತಿ ಬಳಸಿ, ನಕಾರಾತ್ಮಕವಾಗಿ ಹೇಳುವುದು ಬೇಡ.
- ಇನ್ನೊಬ್ಬರು ನಮ್ಮ ಮಾತು ಕೇಳಲು, ನಾವು ಕಿರುಚಿ ಏರುದನಿಯಲ್ಲಿ ಹೇಳುವ ಅಗತ್ಯವಿಲ್ಲ.
- ಸಂವಹನ ಎಂದಾಗ ಕೇವಲ ಮಾತಷ್ಟೇ ಅಲ್ಲ, ನಮ್ಮ ದೇಹದ ಭಾಷೆ (body language), ಕಣ್ಣಲ್ಲಿ ಕಣ್ಣಿಟ್ಟು ನೋಡುವುದು ಎಲ್ಲವೂ ಸೇರಿದೆ. ಆದ್ದರಿಂದ ನಿಮ್ಮ ಸಂಗಾತಿಯ ಜೊತೆಗೆ ಮಾತನಾಡುವಾಗ, ಈ ಎಲ್ಲದರ ಬಗ್ಗೆ ಗಮನವಿರಲಿ.
- ಇನ್ನೂ ಕೆಲವರಿರುತ್ತಾರೆ. ನೇರವಾಗಿ ಒಬ್ಬರಿಗೊಬ್ಬರು ಹೇಳದೇ, ಮೂರನೆಯವರ ಮುಖಾಂತರ ಹೇಳಿಸುತ್ತಾರೆ. ಗಂಡ-ಹೆಂಡತಿಯರ ಮಧ್ಯೆ ಮೂರನೆಯವರ ಮಧ್ಯಸ್ಥಿಕೆ ಬೇಡ.
- ಸಂಗಾತಿಗಳ ಮಧ್ಯೆ ಭಿನ್ನತೆಗಳು ಇರುವುದು ಸಾಮಾನ್ಯ. ಭಿನ್ನತೆಗಳನ್ನು ಅರಿತು, ಸಾಧ್ಯವಾದಷ್ಟು ಹೊಂದಿಕೊಂಡು, ಇಲ್ಲದಿದ್ದರೆ ಪರಿಣಾಮಕಾರಿಯಾದ ಸಂವಹನದಿಂದ ಸರಿದೂಗಿಸಿಕೊಂಡರೆ ಬಾಳು ಬಂಗಾರವಾಗುತ್ತದೆ. ಆಗ ಸಂಸಾರ ಆನಂದಸಾಗರವಾಗುವುದರಲ್ಲಿ ಸಂಶಯವಿಲ್ಲ. ❖



ಮಾತನಾಡುವ ಮುನ್ನ...

ಡಾ. ಕಿರಣ್ ವಿ. ಎಸ್.

‘ನರಕಕ್ಕೆ ಹೋಗು’ ಎನ್ನುವ ಮಾತನ್ನು ಯಾರಿಗಾದರೂ ಹೇಳುವಾಗ ಆ ವ್ಯಕ್ತಿಗೆ ‘ನಾನು ಅಲ್ಲಿಗೆ ಹೋದರೆ ಚೆನ್ನ’ ಎಂದು ಕಾತರಿಸುವಷ್ಟು ಚೆನ್ನಾಗಿ ಹೇಳಬಲ್ಲವನು ಮುತ್ಸದ್ದಿ!

‘ಮಾತು ಆಡಿದರೆ ಹೋಯಿತು; ಮುತ್ತು ಒಡೆದರೆ ಹೋಯಿತು’ ಎನ್ನುವ ಗಾದೆಯನ್ನು ಕೇಳಿರುತ್ತೇವೆ. ಒಡೆದಿರುವ ಅಸಲಿ ಮುತ್ತನ್ನು ಹೆಚ್ಚು ಮಂದಿ ಕಂಡಿರಲಾರರು. ಆದರೆ ತಪ್ಪುಮಾತಿನ ಪರಿಣಾಮವನ್ನು ಜೀವನದಲ್ಲಿ ಎಂದಾದರೂ ಅನುಭವಿಸಿಯೇ ಇರುತ್ತೇವೆ. ‘ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ’ ಎನ್ನುವ ನಾಣ್ಣುಡಿ ಜಾಣರ ಜೀವನಕ್ರಮದ ಸಂಕೇತ. ಯಾವುದೇ ಸಂದರ್ಭದಲ್ಲಿ ತಮ್ಮ ನಿಲುವನ್ನು ಸ್ಪಷ್ಟಪಡಿಸುವುದರಿಂದ ಹಿಡಿದು, ವೈಯಕ್ತಿಕ ಮತ್ತು ವ್ಯಾವಹಾರಿಕ ಸಂಬಂಧಗಳ ನಿರ್ವಹಣೆಯವರೆಗೆ ಮಾತಿನ ಸೂಕ್ಷ್ಮತೆಯನ್ನು ಅರಿತವರು ಗೆಲ್ಲುತ್ತಾರೆ. ಪ್ರಶ್ನೆ ಎದುರಾದಾಗ ಕೆಲಕ್ಷಣಗಳ ಕಾಲ ಯೋಚಿಸಿ ಉತ್ತರಿಸುವ ತಂತ್ರಗಾರಿಕೆಯನ್ನು ಸಂದರ್ಶನಗಳನ್ನು ಎದುರಿಸುವ ಕಲೆಗಾರಿಕೆ ಕಲಿಸುವವರು ಸೂಚಿಸುತ್ತಾರೆ.

ಕೆಲವು ಪ್ರಜ್ಞಾಪೂರ್ವಕ ವಿಧಾನಗಳಿಂದ ಸಮಂಜಸವಾಗಿ ಮಾತನಾಡುವ ಕಲೆಯನ್ನು ರೂಢಿಸಿಕೊಳ್ಳಬಹುದು. ಐದು ಮುಖ್ಯ ಅಂಶಗಳನ್ನು ಮಾತಿನಲ್ಲಿ ಅಂತರ್ಗತಗೊಳಿಸುವ ಅಗತ್ಯವಿದೆ. ಮಾತು ಸತ್ಯವಾಗಿರಬೇಕು; ಮತ್ತೊಬ್ಬರಿಗೆ ಸಹಾಯಕವಾಗಿರಬೇಕು; ಸ್ಫೂರ್ತಿ ನೀಡುವಂತಿರಬೇಕು; ಆ ಸಂದರ್ಭಕ್ಕೆ ಅಗತ್ಯವೆನಿಸುವಂತಿರಬೇಕು; ಮಾತಿನಲ್ಲಿ ಸಹೃದಯತೆಯಿರಬೇಕು. ಅಪ್ರಿಯವಾದ ಸತ್ಯವನ್ನು ನುಡಿಯಬಾರದು ಎನ್ನುವ ಸಲಹೆಯ ಜೊತೆಗೆ ಪ್ರಿಯವಾದ ಅಸತ್ಯವನ್ನೂ ಹೇಳಬಾರದೆಂಬ ಎಚ್ಚರಿಕೆಯನ್ನು ಗಮನಿಸಬೇಕು. ಯಾವುದಾದರೂ ಸಂದರ್ಭದಲ್ಲಿ ಸತ್ಯವನ್ನು ಹೇಳುವುದು ಕಠಿಣ ಎನಿಸಿದಾಗ ಅಸತ್ಯವನ್ನು ನುಡಿಯುವುದಕ್ಕಿಂತ ಸುಮ್ಮನಿರುವುದು ಲೇಸು.

ನಮ್ಮ ಮಾತು ಇತರಿಗೆಗೆ ಸಹಾಯಕವಾಗಬಹುದು ಎನಿಸಿದಾಗ ಅದನ್ನು ನುಡಿಯುವುದು ಸೂಕ್ತ. ಅದೇ ರೀತಿ, ನಮ್ಮ ಮಾತುಗಳಿಂದ ಮತ್ತೊಬ್ಬರಿಗೆ ನೋವಾಗುವುದಾದರೆ, ಅಂತಹ ಮಾತನ್ನು ಆ ಸಂದರ್ಭದಲ್ಲಿ ಆಡಬೇಕೇ ಎಂದು ಚೆನ್ನಾಗಿ ಆಲೋಚಿಸಬೇಕು. ಕೆಲವು ಮಾತುಗಳು ಸಂಬಂಧಗಳನ್ನು ಕೆಡಿಸಬಹುದು. ಅಂತಹ ಮಾತುಗಳನ್ನು ನುಡಿಯುವ ಮುನ್ನ ಪರಿಣಾಮಗಳ ಬಗ್ಗೆ ಸ್ಪಷ್ಟತೆ ಇರಬೇಕು. ಒಮ್ಮೆ ಆಡಿದ ಮಾತನ್ನು ಹಿಂಪಡೆಯಲಾಗದು. ಹೀಗಾಗಿ, ಕಠಿಣ ಮಾತುಗಳನ್ನು ನುಡಿಯುವ ಮುನ್ನ ಆ ಮಾತನ್ನಾಡುವ ಮತ್ತು ಸುಮ್ಮನಿರುವ ಆಯ್ಕೆಗಳ ನಡುವಿನ ಯುಕ್ತಾಯುಕ್ತ ವಿವೇಚನೆ ಇರಬೇಕಾಗುತ್ತದೆ. ತೀರಾ ಹತ್ತಿರದ ಸಂಬಂಧದಲ್ಲಿ ವಿಮರ್ಶೆ ಅಗತ್ಯವಾದರೆ, ಅದನ್ನು ಏಕಾಂತದಲ್ಲಿ ಸೂಚ್ಯವಾಗಿ ಹೇಳುವುದು ಉತ್ತಮ ವಿಧಾನ. ಯಾವ ಕಾರಣಕ್ಕೂ ನಾಲ್ಕು ಜನರ ಮಧ್ಯೆ ನಿಷ್ಠುರ ವಿಮರ್ಶೆ ಸಲ್ಲದು. ‘ಹೊಗಳುವುದು ಎಲ್ಲರ ಮುಂದೆ; ಖಂಡಿಸುವುದು ಖಾಸಗಿಯಾಗಿ’ ಎನ್ನುವ ಮಂತ್ರ ಪಾಲಿಸಲು ಅರ್ಹವಾದದ್ದು.

ನಮ್ಮ ಪರಿಚಿತರು ಒಳ್ಳೆಯ ಕೆಲಸ ಮಾಡಿದ್ದಾರೆ ಎಂದಾಗ ನಿರ್ವಂಚನೆಯಿಂದ ಪ್ರಶಂಸಿಸುವುದು ಸರಿಯಾದ ಮಾರ್ಗ. ನಾವು ಬಾಳುವ ಈ ಜಗತ್ತು ಒಳ್ಳೆಯದಾಗಿರಬೇಕೆಂದರೆ ಸಮಷ್ಟಿಯ ಒಳಿತು ಬೆಳೆಯುವುದು ಮುಖ್ಯ. ಋಜುತ್ವದ ಅಭಿವೃದ್ಧಿಗೆ ಪ್ರಾಮಾಣಿಕ ಮೆಚ್ಚುಗೆಗಿಂತ ಪ್ರಬಲ ಸಾಧನವಿಲ್ಲ. ನಮ್ಮ ಮಾತುಗಳು ಅವರನ್ನು ಮತ್ತಷ್ಟು ಒಳಿತು ಮಾಡಲು ಪೂರಕವಾಗುವಂತೆ ಇರಬೇಕು. ಸಿನಿಕತೆಯ ಮಾತುಗಳಿಗೆ ಆಸ್ಪದ ಇರಬಾರದು. ಒಳ್ಳೆಯದನ್ನು ತುಚ್ಛೀಕರಿಸುವವರ ಬಗ್ಗೆ ಯಾರಿಗೂ ಗೌರವ ಮೂಡುವುದಿಲ್ಲ. ಕೆಲವರು ಒಳಿತನ್ನು ಮಾಡುವ ಭರದಲ್ಲಿ ತಾವೇ ಅಪಾಯಕ್ಕೆ ಈಡಾಗಬಲ್ಲರು. ಅಂತಹ ಸಂದರ್ಭದಲ್ಲಿ ಮಾತ್ರ ವೈಯಕ್ತಿಕವಾಗಿ ಅವರಿಗೆ ಅಪಾಯಗಳ ಸಾಧ್ಯತೆಯ ಬಗ್ಗೆ ತಿಳಿಸಬೇಕು.

ಮುತ್ಸದ್ದಿ ಯಾರು ಎನ್ನುವ ಪ್ರಶ್ನೆಗೆ ಒಂದು ಚಂದದ ಉತ್ತರವಿದೆ. ‘ನರಕಕ್ಕೆ ಹೋಗು’ ಎನ್ನುವ ಮಾತನ್ನು ಯಾರಿಗಾದರೂ ಹೇಳುವಾಗ ಆ ವ್ಯಕ್ತಿಗೆ ‘ನಾನು ಅಲ್ಲಿಗೆ ಹೋದರೆ ಚೆನ್ನ’ ಎಂದು ಕಾತರಿಸುವಷ್ಟು ಚೆನ್ನಾಗಿ ಹೇಳಬಲ್ಲವನು ಮುತ್ಸದ್ದಿ! ಅಂದರೆ, ಆಡುವ ಮಾತನ್ನು ಅನೇಕ ಬಗೆಗಳಲ್ಲಿ ನುಡಿಯಬಹುದು. ವಿಮರ್ಶಾತ್ಮಕ ಸಲಹೆಗಳನ್ನು ನೀಡುವಾಗ ಅದನ್ನು ಹೇಳುವ ವಿಧಾನವೂ ಮುಖ್ಯ. ಈ ಕಲೆಗಾರಿಕೆ ಅಷ್ಟು ಸುಲಭವಲ್ಲವಾದರೂ, ಸಾಕಷ್ಟು ಪ್ರಯತ್ನದಿಂದ ಇದನ್ನು ಸಾಧಿಸಬಹುದು. ಸಲಹೆಗಳಿಗೆ ಪ್ರತಿಯೊಬ್ಬರೂ ವಿಭಿನ್ನವಾಗಿ ಸ್ಪಂದಿಸುತ್ತಾರೆ. ಆದ್ದರಿಂದ ಮಾನವ ಸ್ವಭಾವವನ್ನು ಆಳವಾಗಿ ಅರಿತರೆ ಯಾರಿಗೆ ಯಾವ ವಿಧಾನದಲ್ಲಿ ಸಲಹೆಗಳನ್ನು ನೀಡುವುದು ಸಾಧ್ಯ ಎಂದು ಅರಿಯಬಹುದು.

> ಕೆಲವೊಮ್ಮೆ ಉತ್ತರಿಸುವ ಧಾವಂತದಲ್ಲಿ ಎದುರು ವ್ಯಕ್ತಿಯ ಮಾತನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಮಾತನಾಡಿ ಪೇಚಾಡುವಂತಾಗುತ್ತದೆ.

ಒಳ್ಳೆಯ ಮಾತುಗಾರರಾಗಬೇಕೆಂದರೆ ಮೊದಲು ಒಳ್ಳೆಯ ಕೇಳುಗರಾಗಬೇಕು. ಮತ್ತೊಬ್ಬರ ಮಾತಿನ ಮೇಲೆ ನೈಜ ಆಸಕ್ತಿ ತೋರಬೇಕು. ಇದರಿಂದ ಅವರ ಚಿಂತನೆಗಳನ್ನು ಸರಿಯಾಗಿ ಅರಿಯಲು ಸಾಧ್ಯವಾಗುತ್ತದೆ; ಸಮಂಜಸವಾಗಿ ಉತ್ತರಿಸಲು ನೆರವಾಗುತ್ತದೆ. ಮತ್ತೊಬ್ಬರು ಮಾತನಾಡುವಾಗ ಪ್ರತ್ಯುತ್ತರವನ್ನು ನೀಡಲು ಹೊರಟರೆ ನಮ್ಮ ಗಮನ ಅವರ ಮಾತಿನಿಂದ ದೂರ ಸರಿಯುತ್ತದೆ. ಆಗ ಸರಿಯಾದ ಪ್ರತಿಕ್ರಿಯೆ ನೀಡಲಾಗದು. ಎದುರು ವ್ಯಕ್ತಿಯ ಮಾತು ಮುಗಿದ ಕೆಲಕ್ಷಣಗಳ ನಂತರ ಪ್ರತ್ಯುತ್ತರ ನೀಡುವುದು ಸರಿಯಾದ ವಿಧಾನ. ಈ ಕೆಲಕ್ಷಣಗಳಲ್ಲಿ ನಮ್ಮ ಮಾತುಗಳು ಸ್ಪಷ್ಟ ರೂಪ ಪಡೆಯಬಲ್ಲವು. ಒಂದು ವೇಳೆ ನಮ್ಮ ಆಲೋಚನೆಗಳನ್ನು ಕ್ರೋಢೀಕರಿಸಲು ಕೆಲಕ್ಷಣಗಳಿಗಿಂತಲೂ ಹೆಚ್ಚು ಸಮಯ ಬೇಕೆನಿಸಿದರೆ ‘ನನಗೆ ಉತ್ತರಿಸಲು ಒಂದು ನಿಮಿಷ ಬೇಕು’ ಎಂದು ಕೇಳಬಹುದು. ಇದರಿಂದ ಒತ್ತಡ ಕಡಿಮೆಯಾಗಿ ಆಲೋಚನೆಗಳು ತಿಳಿಯಾಗುತ್ತವೆ.

ಕೆಲವೊಮ್ಮೆ ಉತ್ತರಿಸುವ ಧಾವಂತದಲ್ಲಿ ಎದುರು ವ್ಯಕ್ತಿಯ ಮಾತನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಮಾತನಾಡಿ ಪೇಚಾಡುವಂತಾಗುತ್ತದೆ. ಇಂತಹ ಸಂದರ್ಭದಲ್ಲಿ ಉತ್ತರಿಸುವ ಮೊದಲು ಎದುರು ವ್ಯಕ್ತಿಯ ಮಾತನ್ನು ಮತ್ತೊಮ್ಮೆ ಸ್ಪಷ್ಟಪಡಿಸಿಕೊಳ್ಳುವುದು ಉಚಿತ. ‘ಅಂದರೆ ನಿಮ್ಮ ಅಭಿಪ್ರಾಯ ಹೀಗೆಂದೇ?’ ಎಂದೋ, ಅಥವಾ ‘ನೀವು ಹೇಳಿದ ಈ ಮಾತನ್ನು ಸ್ವಲ್ಪ ವಿವರಿಸಬಹುದೇ?’ ಎಂದೋ ಕೇಳಿದರೆ, ಇಡೀ ಮಾತು ಮತ್ತೊಮ್ಮೆ ಬರುವಂತಾಗುತ್ತದೆ. ಇದರಿಂದ ಮಾತಿನ ಅರ್ಥ ಸ್ಪಷ್ಟವಾಗಿ, ಉತ್ತರಿಸಲು ನೆರವಾಗುತ್ತದೆ. ಒಟ್ಟಿನಲ್ಲಿ, ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳದೆ ಉತ್ತರಿಸುವುದು ಸರಿಯಾದ ವಿಧಾನವಲ್ಲ.

ಸಂದರ್ಶನದಂತಹ ಸಂದರ್ಭಗಳಲ್ಲಿ ಮಾನಸಿಕ ಒತ್ತಡ ಹೆಚ್ಚಿರುತ್ತದೆ. ಆಗ ಮಾತಿನಲ್ಲಿ ತಪ್ಪುಗಳಾಗಬಹುದು. ಇಂತಹುದೇ ಸಾಧ್ಯತೆಗಳು ವಾಗ್ವಾದಗಳ ವೇಳೆಯೂ ಆಗಬಹುದು. ಈ ರೀತಿಯ ಸಂದರ್ಭಗಳಲ್ಲಿ ನಮಗೇ ಅರಿವಿಲ್ಲದಂತೆ ಉಸಿರುಗಟ್ಟುವುದು ಸಹಜ ಪ್ರಕ್ರಿಯೆ. ಇದನ್ನು ಪ್ರಯತ್ನಪೂರ್ವಕವಾಗಿ ಬದಲಾಯಿಸಬಹುದು. ಎದುರು ವ್ಯಕ್ತಿಯ ಮಾತಿನ ವೇಳೆ ನಿಧಾನವಾಗಿ, ದೀರ್ಘ ಶ್ವಾಸವನ್ನು ತೆಗೆದುಕೊಳ್ಳುವುದರಿಂದ ಗಮನ ಹೆಚ್ಚುತ್ತದೆ; ಆಲೋಚನೆಗಳನ್ನು ಒಟ್ಟುಗೂಡಿಸಲು ನೆರವಾಗುತ್ತದೆ. ಸಂಭಾಷಣೆಯ ವಿಷಯ ಗಂಭೀರವಾದಷ್ಟೂ ಎದುರು ವ್ಯಕ್ತಿಯ ಮಾತಿನ ಮೇಲೆ ಗಮನವನ್ನು ಕೇಂದ್ರೀಕರಿಸುವುದು ಅಗತ್ಯ. ಹೀಗಾಗಿ, ನಮ್ಮ ಮಾತಿನ ಮುನ್ನ ಸಂಭಾಷಣೆಯ ವಿವರಗಳನ್ನು ಗ್ರಹಿಸುವುದು ಕಡ್ಡಾಯ.

ಸಂಭಾಷಣೆಯ ವೇಳೆ ದೇಹದ ಆಂಗಿಕ ಭಾಷೆಯೂ ಮುಖ್ಯವಾಗುತ್ತದೆ. ಆಂಗಿಕ ಭಾಷೆ ಸಾರ್ವತ್ರಿಕ. ಎದುರು ವ್ಯಕ್ತಿ ದೇಹಭಾಷೆಯ ವಿವರಗಳನ್ನು ಅರಿಯದಿದ್ದರೂ, ಅದನ್ನು ಪರೋಕ್ಷವಾಗಿ ಗ್ರಹಿಸಬಲ್ಲರು. ಮಾತನಾಡುತ್ತಿರುವ ವ್ಯಕ್ತಿಯೆಡೆಗೆ ನೋಡುವುದು; ಕೈಗಳನ್ನು ಕಟ್ಟಿಕೊಳ್ಳದೆ ಬದಿಯಲ್ಲಿ ಸಡಿಲ ಬಿಡುವುದು; ಹುಬ್ಬುಗಳನ್ನು ಗಂಟಿಡದೆ ತಟಸ್ಥವಾಗಿಡುವುದು; ಮುಖದಲ್ಲಿ ಸಹಜ ಕಿರುನಗೆಯಿರುವುದು ಮೊದಲಾದುವು ಆಸಕ್ತ ಆಂಗಿಕ ಭಾಷೆಯ ಲಕ್ಷಣಗಳು.

ಮಾತನಾಡುವಾಗ ಒಂದು ವೇಳೆ ಒಂದಕ್ಕಿಂತ ಹೆಚ್ಚು ಅಂಶಗಳನ್ನು ಬೆರೆಸಬಾರದು. ಹಲವಾರು ಅಂಶಗಳನ್ನು ಒಟ್ಟೊಟ್ಟಿಗೆ ಹೇಳಿದರೆ ಗೊಂದಲವಾಗುತ್ತದೆ. ಸರಣಿ ಮಾತುಗಾರಿಕೆಯ ವೇಳೆ ಒಂದು ಅಂಶವನ್ನು ಸ್ಪಷ್ಟಪಡಿಸಿದ ನಂತರವೇ ಮತ್ತೊಂದು ಅಂಶಕ್ಕೆ ಹೋಗುವುದು ಸೂಕ್ತ. ಎರಡು ಅಂಶಗಳ ಮಾತಿನ ನಡುವೆ ಕೆಲಕ್ಷಣಗಳ ಅಂತರವಿರಬೇಕು. ಆಗ ಮೊದಲ ಅಂಶದ ವಿಷಯವಾಗಿ ಪ್ರಶ್ನೆಗಳಿದ್ದರೆ ಅವುಗಳನ್ನು ವಿವರಿಸಲು ಕಾಲಾವಕಾಶವಾಗುತ್ತದೆ. ಇದರಿಂದ ಒಂದೇ ವಿಷಯವನ್ನು ಮತ್ತೆ ಮತ್ತೆ ಆಡುವ ಪ್ರಸಂಗ ಬರುವುದಿಲ್ಲ; ನಿರ್ಧಾರಗಳು ವೇಗವಾಗಿ ಆಗಬಲ್ಲವು. ಮುಖ್ಯವಾದ ಸಂಭಾಷಣೆಯ ಕೊನೆಯಲ್ಲಿ ಮಾತಿನ ಸಾರಾಂಶವನ್ನು ಸಂಗ್ರಹವಾಗಿ ಒಂದು ಸಣ್ಣ ವಾಕ್ಯದಲ್ಲಿ ಹೇಳುವುದರಿಂದ ಮಾತಿಗೆ ಒಂದು ತಾರ್ಕಿಕ ಅಂತ್ಯ ನೀಡಿದಂತಾಗುತ್ತದೆ. ಮಾತು ನಮ್ಮ ಭಾವನೆಗಳ ಪ್ರತಿಬಿಂಬ. ಇದನ್ನು ಸಮರ್ಥವಾಗಿ ನಿಭಾಯಿಸುವುದು ಜೀವನದ ಆವಶ್ಯಕತೆಗಳಲ್ಲಿ ಒಂದು. ಮಾತುಗಳ ಶಕ್ತಿ ಅಪರಿಮಿತ. ಹೀಗಾಗಿ, ಅದನ್ನು ತೂಗಿ ಆಡುವುದು ಮುಖ್ಯವಾಗುತ್ತದೆ. ಮಾತನಾಡುವ ಮುನ್ನ ಆಡಬೇಕಾದ ಮಾತಿನ ಮಹತ್ವವನ್ನು ಅರಿಯಲೇಬೇಕು. ❖

ಮೂಗೆಂದು ಮೂಗು ಮುರಿಯದಿರಿ

ಡಾ. ವಿನಯ ಶ್ರೀನಿವಾಸ್



ಪಂಚೇಂದ್ರಿಯಗಳಲ್ಲಿ ಒಂದಾದ ಮೂಗು ವಾಸನೆಯನ್ನು ಗ್ರಹಿಸಲು ನೆರವಾಗುವುದರ ಜೊತೆಯಲ್ಲಿ ಉಚ್ಛ್ವಾಸ-ನಿಃಶ್ವಾಸ ಪ್ರಕ್ರಿಯೆಗೂ ಅಗತ್ಯವಾದ ಅಂಗವಾಗಿದೆ. ಅಪಘಾತಗಳಾದಾಗ ಮೂಗಿನಿಂದ ರಕ್ತ ಅಥವಾ ಇತರ ಸ್ರಾವವಿದ್ದರೆ ವೈದ್ಯರು ತುರ್ತಾಗಿ ತಲೆಯ ಭಾಗದ ಸಿಟಿ ಸ್ಕ್ಯಾನ್ ಮಾಡಿಸಿ ಮೆದುಳು ಮತ್ತು ತಲೆಬುರುಡೆ ಸುರಕ್ಷಿತವಾಗಿದೆಯೇ ಎಂದು ಮೊದಲು ದೃಢಪಡಿಸಿಕೊಳ್ಳುತ್ತಾರೆ. ವ್ಯಕ್ತಿ ಅತಿಯಾದ ಬಿಸಿಲಿಗೆ ಮೈಯೊಡ್ಡಿದಾಗ, ರಕ್ತದೊತ್ತಡ ವಿಪರೀತ ಹೆಚ್ಚಾದಾಗ ಮೂಗಿನಲ್ಲಿ ರಕ್ತಸ್ರಾವವಾಗುವುದೂ ಇದೆ. ಚಳಿಗಾಲದ ದಿನಗಳಲ್ಲಂತೂ ಅಲರ್ಜಿಯಿಂದ ಆರಂಭವಾಗುವ ನೆಗಡಿ, ಸೈನಸ್‌ಗಳ ಉರಿಯೂತಕ್ಕೂ ಕಾರಣವಾಗಬಹುದು. ಕೆಲವೊಮ್ಮೆ ಮೆದುಳಿನ ಒಳಭಾಗದ ರಕ್ತನಾಳಗಳಲ್ಲಿ ಹೆಪ್ಪುಗಟ್ಟುವಿಕೆಗೂ ಕಾರಣವಾಗಬಹುದು. ಹಾಗಾಗಿಯೇ ಮೂಗಿನ ಯಾವ ಸಮಸ್ಯೆಗಳನ್ನೂ ನಿರ್ಲಕ್ಷಿಸುವಂತಿಲ್ಲ.

ಮೂಗಿನ ಸಾಮಾನ್ಯ ಸಮಸ್ಯೆಗಳು

ಸೈನಸ್‌ಗಳ ಉರಿಯೂತ (ಸೈನುಸೈಟಿಸ್): ಮುಖದ ಮೂಳೆಗಳ ಒಳಭಾಗದಲ್ಲಿ ಚಿಕ್ಕ ಪೊಟ್ಟಣದಂತಹ ಕಿರಿದಾದ ಟೊಳ್ಳು ಜಾಗವೇ ಸೈನಸ್. ಸಾಮಾನ್ಯವಾಗಿ ಇದರ ಒಳಭಾಗದಲ್ಲಿ ಲೋಳೆಪದರವಿದ್ದು ಕನಿಷ್ಠ ಪ್ರಮಾಣದ ಲೋಳೆಯಂತಹ ವಸ್ತುವು ಉತ್ಪತ್ತಿಯಾಗುತ್ತದೆ. ವೈರಾಣು ಅಥವಾ ಸೂಕ್ಷ್ಮಾಣುಗಳ ಸೋಂಕು ತಗುಲಿದಾಗ ಉರಿಯೂತ ಪ್ರಕ್ರಿಯೆಯಿಂದಾಗಿ ಇಲ್ಲಿ ಸ್ರವಿಸುವಿಕೆ ಹೆಚ್ಚಾಗುತ್ತದೆ.

ಸಾಮಾನ್ಯವಾಗಿ ನೆಗಡಿ ಅಥವಾ ಶೀತದಂತೆ ಆರಂಭವಾಗುವ ಸೈನಸ್ ಉರಿಯೂತವು ಧೂಮಪಾನಿಗಳನ್ನು ಮತ್ತು ಅಲರ್ಜಿ ಇರುವವರನ್ನು ಪದೇ ಪದೇ ಕಾಡುತ್ತದೆ. ಮೂಗು ಕಟ್ಟುವಿಕೆ, ಮೂಗಿನಿಂದ ವಿಪರೀತ ಸ್ರಾವ (ಶೀತ ಮತ್ತು ಮೂಗಿನ ಹಿಂಭಾಗದಿಂದ ಸ್ರಾವವು ಗಂಟಲಿಗೆ ಇಳಿಯುವುದು), ಮೂಗಿನ ಇಬ್ಬದಿಗಳಲ್ಲಿ ಮತ್ತು ಹಣೆಯ ಭಾಗದಲ್ಲಿ ವಿಪರೀತ ನೋವು, ತಲೆನೋವು, ತಲೆ ಭಾರವಾದಂತೆನಿಸುವುದು, ತಲೆಯನ್ನು ಕೆಳಕ್ಕೆ ಬಗ್ಗಿಸಿದಾಗ ನೋವು ಹೆಚ್ಚಾಗುವುದು ಮೊದಲಾದುವು ಇದರ ಮುಖ್ಯ ಲಕ್ಷಣಗಳು. ಒಮ್ಮೊಮ್ಮೆ ಕೆಮ್ಮು, ಉಸಿರಿನ ದುರ್ನಾತದಂತಹ ಲಕ್ಷಣಗಳೂ ಕಾಣಿಸಿಕೊಳ್ಳಬಹುದು.

ಇಂತಹ ಲಕ್ಷಣಗಳು ಬಾಧಿಸಿದಾಗ ಬೆಚ್ಚಗಿನ ನೀರಿನಲ್ಲಿ ಅದ್ದಿದ ಸ್ವಚ್ಛ ಬಟ್ಟೆಯನ್ನು ಹಣೆಯ ಮತ್ತು ಮುಖದ ಮೇಲಿರಿಸಿಕೊಳ್ಳುವುದು ಮತ್ತು ಬಿಸಿನೀರಿನ ಆವಿಯನ್ನು ಉಸಿರಿನ ಒಳಕ್ಕೆ ತೆಗೆದುಕೊಳ್ಳುವುದು ಮೊದಲಾದ ಕ್ರಮಗಳು ಸ್ವಲ್ಪ ಮಟ್ಟಿಗೆ ರೋಗಲಕ್ಷಣಗಳನ್ನು ನಿಯಂತ್ರಿಸಲು ನೆರವಾಗುತ್ತವೆ. ತಣ್ಣನೆಯ ವಾತಾವರಣದಿಂದ ದೂರವಿದ್ದು, ದೇಹವನ್ನು ಆದಷ್ಟು ಬೆಚ್ಚಗಿಟ್ಟುಕೊಳ್ಳಬೇಕು. ಬಿಸಿನೀರು ಮತ್ತು ಬಿಸಿಯಾದ ಆಹಾರ ಪದಾರ್ಥಗಳನ್ನೇ ಸೇವಿಸಬೇಕು. ಒಂದು ವೇಳೆ, ನಿಯಂತ್ರಣಕ್ಕೆ ಬರದಿದ್ದಲ್ಲಿ ವೈದ್ಯರನ್ನು ಸಂಪರ್ಕಿಸಬೇಕು.

> ಮೂಗಿನಿಂದ ರಕ್ತ ಒಸರುವುದನ್ನು ಕಂಡ ಕೂಡಲೇ ಗಾಬರಿಯಾಗಬಾರದು. ನೇರವಾಗಿ ಕುಳಿತು ತಲೆ ಮತ್ತು ಕುತ್ತಿಗೆಯನ್ನು ಸ್ವಲ್ಪ ಮುಂದಕ್ಕೆ ಬಾಗಿಸಬೇಕು.

ಅಲರ್ಜಿ(ರೈನೈಟಿಸ್): ಅಲರ್ಜಿಯಿಂದ ಉಂಟಾಗುವ ಮೂಗಿನ ಉರಿಯೂತದೊಂದಿಗೆ ಕಣ್ಣು, ಕಿವಿ ಹಾಗೂ ಗಂಟಲಿನ ಉರಿಯೂತವೂ ಸಾಮಾನ್ಯ. ಮೂಗು, ಗಂಟಲು ಮತ್ತು ಕಣ್ಣುಗಳಲ್ಲಿ ನವೆ, ಮೂಗು ಕಟ್ಟುವಿಕೆ, ವಿಪರೀತ ಶೀತ, ನಿರಂತರ ಸೀನು, ಧ್ವನಿ ಬದಲಾವಣೆ, ಮೊದಲಾದುವು ಮೂಗಿನ ಉರಿಯೂತದ ಲಕ್ಷಣಗಳು. ಸಾಮಾನ್ಯವಾಗಿ ಅಲರ್ಜಿಗೆ ಕಾರಣವಾಗುವ ವಸ್ತುಗಳೆಂದರೆ, ತಣ್ಣನೆಯ ವಾತವರಣ (ಹವೆ), ಹೂವಿನ ಪರಾಗ, ಕೀಟಗಳ (ಉದಾ: ಜಿರಳೆ) ಉತ್ಪನ್ನಗಳು, ಧೂಳಿನ ಕಣಗಳು, ಹೊಗೆ, ಧೂಮಪಾನ, ಸುಗಂಧ ದ್ರವ್ಯಗಳು, ಪ್ರಾಣಿ/ಸಸ್ಯಗಳ ಕೆಲವು ಉತ್ಪನ್ನಗಳು ಮೊದಲಾದುವು. ಅಲರ್ಜಿ ಇರುವವರು ಯಾವ ವಸ್ತುವಿನ ಸಂಪರ್ಕ ಬಂದರೆ ಸಮಸ್ಯೆ ಆರಂಭವಾಗುವುದು ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿ ಆ ವಸ್ತುವಿನಿಂದ ಆದಷ್ಟು ದೂರವಿರಬೇಕು. ಕೆಲವು ವಿಶೇಷ ಪ್ರಯೋಗಾಲಯಗಳಲ್ಲಿ ವ್ಯಕ್ತಿಯಲ್ಲಿ ಯಾವ ವಸ್ತುವಿಗೆ ಅಲರ್ಜಿ ಪ್ರಕ್ರಿಯೆ ಆರಂಭವಾಗುತ್ತದೆ ಎಂಬುದನ್ನು ತಪಾಸಣೆ ಮಾಡಲಾಗುತ್ತದೆ. ಅಂತಹ ಪರೀಕ್ಷೆಯ ಸಹಾಯದಿಂದ ಅಲರ್ಜಿಗೆ ಕಾರಣವಾಗುವ ವಸ್ತುವನ್ನು ಗುರುತು ಮಾಡಲು ಪ್ರಯತ್ನಿಸಬಹುದು.

ರಕ್ತಸ್ರಾವ: ಮೂಗಿನಲ್ಲಿ ರಕ್ತಸ್ರಾವಕ್ಕೆ ಕಾರಣಗಳು ಅನೇಕ. ಮುಖ್ಯವಾದುವೆಂದರೆ, ಒಣಹವೆ, ದೀರ್ಘಕಾಲಿಕ ನೆಗಡಿ, ಸೈನಸ್‌ಗಳ ಉರಿಯೂತ, ಜೋರಾಗಿ ಸೀನುವುದು, ಮೂಗು, ತಲೆ ಅಥವಾ ಮುಖಕ್ಕೆ ಪೆಟ್ಟು, ಬೆಟ್ಟ ಗುಡ್ಡಗಳಂತಹ ಎತ್ತರದ ಪ್ರದೇಶಗಳಲ್ಲಿನ ತಿರುಗಾಟ, ಮೂಗಿನ ಹೊಳ್ಳೆಗಳನ್ನು ಪ್ರತ್ಯೇಕಿಸುವ ನಡುತಡಿಕೆ ಡೊಂಕಾದಾಗ (ಡಿ. ಎನ್. ಎಸ್., ಡೀವಿಯೇಟೆಡ್ ನೇಸಲ್ ಸೆಪ್ಟಮ್), ಮೂಗಿನ ಒಳಭಾಗದಲ್ಲಿರಬಹುದಾದ ಗಡ್ಡೆಗಳು, ಅಧಿಕ ರಕ್ತದೊತ್ತಡ, ಅತಿಯಾದ ಮದ್ಯಪಾನ ಮತ್ತು ಧೂಮಪಾನ ಮೊದಲಾದುವು.

ಮೂಗಿನಿಂದ ರಕ್ತ ಒಸರುವುದನ್ನು ಕಂಡ ಕೂಡಲೇ ಗಾಬರಿಯಾಗಬಾರದು. ನೇರವಾಗಿ ಕುಳಿತು ತಲೆ ಮತ್ತು ಕುತ್ತಿಗೆಯನ್ನು ಸ್ವಲ್ಪ ಮುಂದಕ್ಕೆ ಬಾಗಿಸಬೇಕು. ಇದು ರಕ್ತವು ಗಂಟಲಿಗೆ ಹೋಗುವುದನ್ನು ತಪ್ಪಿಸಿ, ಅದರಿಂದ ಆಗಬಹುದಾದ ವಾಕರಿಕೆ ಮತ್ತು ವಾಂತಿಯನ್ನು ತಪ್ಪಿಸುತ್ತದೆ. ಆ ಸಂದರ್ಭದಲ್ಲಿ ಬಾಯಿಯಿಂದ ದೀರ್ಘವಾಗಿ ಉಸಿರಾಡುತ್ತಾ, ಬಾಯಿಯಲ್ಲಿ ಬರಬಹುದಾದ ರಕ್ತವನ್ನು ಉಗಿಯಬೇಕು. ಸಾಧ್ಯವಾದಷ್ಟೂ ಈ ರಕ್ತವನ್ನು ಒಂದು ಸೀಸೆ ಅಥವಾ ಪಾತ್ರೆಯಲ್ಲಿ ಉಗಿಯಬೇಕು. ಇದು ಎಷ್ಟು ಪ್ರಮಾಣದ ರಕ್ತವು ದೇಹದಿಂದ ನಷ್ಟವಾಗಿದೆ ಎಂಬುದನ್ನು ಅಂದಾಜು ಮಾಡಲು ನೆರವಾಗುತ್ತದೆ. ಟಿಶ್ಯು ಕಾಗದ ಅಥವಾ ಒದ್ದೆಬಟ್ಟೆಯಿಂದ ಮೂಗನ್ನು ಒತ್ತಿ ಹಿಡಿಯಬೇಕು. ಹೆಬ್ಬೆರಳು ಹಾಗೂ ತೋರುಬೆರಳನ್ನು ಉಪಯೋಗಿಸಿ ಮೂಗಿನ ಹೊಳ್ಳೆಗಳನ್ನು ಒತ್ತಿಹಿಡಿಯಬೇಕು. ಹೀಗೆ ಒತ್ತುವಾಗ ಮೂಗಿನ ಮೆದುಭಾಗವನ್ನು ಮಧ್ಯದ ಗಟ್ಟಿಯಾದ ನಡುತಡಿಕೆಗೆ ವಿರುದ್ಧವಾಗಿ ಒತ್ತಬೇಕು. ಸುಮಾರು ಎರಡರಿಂದ ಐದು ನಿಮಿಷಗಳವರೆಗೆ ಒತ್ತಿ ಹಿಡಿದಾಗ ರಕ್ತಸ್ರಾವ ಸ್ಥಗಿತಗೊಳ್ಳುತ್ತದೆ. ಮಂಜುಗಡ್ಡೆಗಳ ತುಂಡುಗಳು ಲಭ್ಯವಿದ್ದಲ್ಲಿ ಅದನ್ನು ಒಂದು ಪಾಲಿಥಿನ್ ಕಾಗದದಲ್ಲಿ ಸುತ್ತಿಕೊಂಡು ಮೂಗಿನ ಹೊಳ್ಳೆಗಳ ಬಳಿ ಇಟ್ಟುಕೊಳ್ಳಬೇಕು. ಇದು ರಕ್ತನಾಳಗಳನ್ನು ಕುಗ್ಗಿಸುವುದರಿಂದ ರಕ್ತಸ್ರಾವ ಬೇಗನೆ ನಿಲ್ಲುತ್ತದೆ. ಕಡಿಮೆಯಾಗದಿದ್ದಲ್ಲಿ ವೈದ್ಯರನ್ನು ಸಂಪರ್ಕ ಮಾಡಬೇಕು.

ವಾಸನೆ ಗ್ರಹಿಕೆಯಲ್ಲಿ ಸಮಸ್ಯೆ: ಮೂಗಿನ ಅಲರ್ಜಿ ಮತ್ತು ಸೈನಸ್ ಉರಿಯೂತಗಳಲ್ಲಿ ತಾತ್ಕಾಲಿಕವಾಗಿ ವ್ಯಕ್ತಿ ವಾಸನೆಗಳನ್ನು ಗ್ರಹಿಸಲು ಕಷ್ಟ ಪಡುತ್ತಾನೆ. ಸಮಸ್ಯೆ ಕಡಿಮೆಯಾದ ಮೇಲೆ ಅದು ತಂತಾನೆ ಸರಿಹೋಗುತ್ತದೆ. ಆದರೆ ಮೆದುಳಿನ ಕೆಲವು ಸಮಸ್ಯೆಗಳಲ್ಲಿ (ಅಲ್ಜೈಮರ್ಸ್, ಪಾರ್ಕಿನ್ಸನ್ ಕಾಯಿಲೆ) ಕೆಲವೊಮ್ಮೆ ಶಾಶ್ವತವಾಗಿ ವ್ಯಕ್ತಿ ವಾಸನೆಯನ್ನು ಗ್ರಹಿಸುವ ಶಕ್ತಿಯನ್ನು ಕಳೆದುಕೊಳ್ಳಬಹುದು. ಈ ಸಮಸ್ಯೆಗಳಲ್ಲಿ ನರರೋಗತಜ್ಞರನ್ನು ಸಂಪರ್ಕಿಸಬೇಕು.

ನೆನಪಿಡಿ

- ಮೂಗಿನಲ್ಲಿ ಕೈ ಬೆರಳನ್ನು ಅಥವಾ ಪೆನ್ನು, ಪೆನ್ಸಿಲ್‌ನಂತಹ ಯಾವುದೇ ವಸ್ತುವನ್ನು ತೂರಿಸದಿರಿ.
- ಅಲರ್ಜಿ ಇರುವವರು ಚಳಿಗಾಲದಲ್ಲಿ ಬಿಸಿನೀರು ಮತ್ತು ಬಿಸಿ ಆಹಾರ ಪದಾರ್ಥಗಳನ್ನೇ ಸೇವಿಸಿ.
- ಫ್ರಿಜ್‌ನಲ್ಲಿರಿಸಿದ ತಣ್ಣನೆಯ ಆಹಾರ ಪದಾರ್ಥಗಳ ಸೇವನೆ ಬೇಡ.
- ರೋಗನಿರೋಧಕ ವ್ಯವಸ್ಥೆಯನ್ನು ಸಬಲಗೊಳಿಸಿಕೊಳ್ಳಿ. ಅಧ್ಯಯನಗಳು ಹೇಳುವಂತೆ ವಿಟಮಿನ್ ಸಿ, ವಿಟಮಿನ್ ಡಿ ಮತ್ತು ಸತು (ಝಿಂಕ್) ಹೇರಳವಾಗಿರುವ ಆಹಾರವು ದೇಹದ ರಕ್ಷಣಾವ್ಯವಸ್ಥೆಯನ್ನು ಸದೃಢಪಡಿಸುತ್ತದೆ. ಆದ್ದರಿಂದ ವಿಟಮಿನ್ ಸಿ ಹೇರಳವಾಗಿರುವ ನಿಂಬೆ, ಕಿತ್ತಳೆ, ಪೇರಲೆ, ನೆಲ್ಲಿಕಾಯಿ, ವಿಟಮಿನ್ ಡಿ ಹೇರಳವಾಗಿರುವ ಮೊಟ್ಟೆ, ಮೀನು, ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು, ಸತುವಿನ ಅಂಶ ಹೇರಳವಾಗಿರುವ ಬೇಳೆಕಾಳುಗಳು, ಸಿಹಿಗೆಣಸು, ಹಾಲಿನ ಉತ್ಪನ್ನಗಳು, ಬಾದಾಮಿ, ಶೇಂಗಾ, ಗೋಡಂಬಿ, ಕುಂಬಳ ಮತ್ತು ಅಗಸೆ ಬೀಜ ಮೊದಲಾದುವುಗಳನ್ನು ನಿಮ್ಮ ನಿತ್ಯದ ಆಹಾರದಲ್ಲಿ ಬಳಸಿ. ಸೂರ್ಯನ ಬಿಸಿಲಿನಲ್ಲಿ (ಬೆಳಿಗ್ಗೆ ಹನ್ನೊಂದರಿಂದ ಮಧ್ಯಾಹ್ನ ಮೂರರವರೆಗಿನ ಸಮಯ) ಕಡ್ಡಾಯವಾಗಿ ವಾರದಲ್ಲಿ ಮೂರು ದಿನಗಳಾದರೂ ಓಡಾಡಿ.
- ಪದೇ ಪದೇ ಮೂಗಿನ ಅಲರ್ಜಿಯಿಂದ ಬಳಲುವವರು ವಾತಾವರಣದ ದೂಳು, ಕಣಗಳಿಂದ ಮತ್ತು ಸೂಕ್ಷ್ಮಾಣುಗಳಿಂದ ರಕ್ಷಿಸಿಕೊಳ್ಳಲು ಮಾಸ್ಕ್ ಬಳಸುವುದು ಸೂಕ್ತ.
- ಸಾಬೂನಿನಿಂದ ಕೈಗಳನ್ನು ಸ್ವಚ್ಛವಾಗಿ ಆಗಾಗ್ಗೆ ತೊಳೆದುಕೊಳ್ಳಿ. ❖

ಅರೆನ್ಯಾಯಿಕ ಅಧಿಕಾರ ವಿಭಜನೆಗೆ ಶೀಘ್ರ ಆದೇಶ: ಸಚಿವ ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ ಮತ್ತು ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ತ್ವರಿತ ವಿಲೇವಾರಿಗಾಗಿ ಅರೆ ನ್ಯಾಯಿಕ ಅಧಿಕಾರವನ್ನು ಅನ್ಯ ಅಧಿಕಾರಿಗಳಿಗೂ ನೀಡಲು ಶೀಘ್ರ ಆದೇಶ ಹೊರಡಿಸಲಾಗುವುದು ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಭೂ ಕಂದಾಯ ಕಾಯ್ದೆ ಪ್ರಕರಣಗಳ ವಿಚಾರಣೆ ಕೋವಿಡ್ ಕಾರಣದಿಂದ ದೀರ್ಘ ಕಾಲ ಸ್ಥಗಿತವಾಗಿತ್ತು. ಪ್ರಕರಣಗಳ ಸಂಖ್ಯೆಯೂ ಏರುತ್ತಲೇ ಇದೆ. ಸದ್ಯ 93,834 ಪ್ರಕರಣಗಳು ವಿಲೇವಾರಿಗೆ ಬಾಕಿ ಇವೆ' ಎಂದರು.

ಜಿಲ್ಲಾಧಿಕಾರಿಗಳ ನ್ಯಾಯಾಲಯಗಳಲ್ಲಿ 15,881, ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ 62,100 ಮತ್ತು ತಹಶೀಲ್ದಾರ್ ನ್ಯಾಯಾಲಯಗಳಲ್ಲಿ 15,853 ಪ್ರಕರಣಗಳು ಬಾಕಿ ಇವೆ. ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರ್‌ಗಳಿಗೆ ಕೆಲಸದ ಒತ್ತಡ ಇರುವುದರಿಂದ ಪ್ರಕರಣಗಳ ವಿಲೇವಾರಿ ವಿಳಂಬವಾಗುತ್ತಿದೆ ಎಂದರು.



ಜಿಲ್ಲಾಧಿಕಾರಿಗಳ ನ್ಯಾಯಾಲಯಗಳಲ್ಲಿ ಬಾಕಿ ಇರುವ ಕೆಲವು ತಾಲ್ಲೂಕುಗಳ ಪ್ರಕರಣಗಳ ವಿಚಾರಣೆಯನ್ನು ಹೆಚ್ಚುವರಿ ಜಿಲ್ಲಾಧಿಕಾರಿಗಳಿಗೆ, ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿನ ಕೆಲವು ತಾಲ್ಲೂಕುಗಳ ಪ್ರಕರಣಗಳನ್ನು ಸಮಾನ ದರ್ಜೆಯ ಕೆಎಎಸ್ ಅಧಿಕಾರಿಗಳಾಗಿರುವ ವಿಶೇಷ ಭೂಸ್ವಾಧೀನಾಧಿಕಾರಿಗಳಿಗೆ ನೀಡಲು ನಿರ್ಧರಿಸಲಾಗಿದೆ. ತಹಶೀಲ್ದಾರ್ ನ್ಯಾಯಾಲಯಗಳಲ್ಲಿರುವ ಕೆಲವು ಹೋಬಳಿಗಳ ಪ್ರಕರಣಗಳ ವಿಚಾರಣೆ ಅಧಿಕಾರವನ್ನು ಉಪ ತಹಶೀಲ್ದಾರ್‌ಗಳಿಗೆ ನೀಡಲಾಗುವುದು. ಈ ಸಂಬಂಧ 20 ದಿನಗಳೊಳಗೆ ಆದೇಶ ಹೊರಬೀಳಲಿದೆ ಎಂದರು.

ಪ್ರತಿ ಅಧಿಕಾರಿಗೂ ಪ್ರಕರಣಗಳ ವಿಲೇವಾರಿಗೆ ಗುರಿ ನಿಗದಿಪಡಿಸಲಾಗುವುದು. ವಿಚಾರಣೆ ಪೂರ್ಣಗೊಳಿಸಿದ ಬಳಿಕ ಆದೇಶ ಪ್ರಕಟಿಸುವುದಕ್ಕೂ ಗಡುವು ನೀಡಲಾಗುವುದು ಎಂದು ಸಚಿವರು ತಿಳಿಸಿದರು.

60 ಸಾವಿರ ಹಕ್ಕುಪತ್ರ: ರಾಜ್ಯದಲ್ಲಿರುವ ಎಲ್ಲ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಘೋಷಣೆ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಇದೊಂದು ಐತಿಹಾಸಿಕ ನಿರ್ಧಾರ. ಲಂಬಾಣಿ ತಾಂಡಾಗಳಲ್ಲಿ ಒಟ್ಟು 6 ಲಕ್ಷ ಕುಟುಂಬಗಳಿವೆ. ಎಲ್ಲರಿಗೂ ಹಂತ ಹಂತವಾಗಿ ಹಕ್ಕುಪತ್ರ ವಿತರಿಸಲಾಗುವುದು ಎಂದರು.


ನವೆಂಬರ್ ಕೊನೆಯ ವಾರ ಯಾದಗಿರಿ ಜಿಲ್ಲೆಯಲ್ಲಿ ಲಂಬಾಣಿ ತಾಂಡಾ ಜನರ ಸಮಾವೇಶ ನಡೆಸಲಾಗುವುದು. 60,000 ಕುಟುಂಬಗಳಿಗೆ ಅಲ್ಲಿ ಏಕಕಾಲದಲ್ಲಿ ಹಕ್ಕುಪತ್ರ ವಿತರಿಸಲಾಗುವುದು ಎಂದು ಹೇಳಿದರು.

ಬೆಳಗಾವಿ ಪ್ರವೇಶಕ್ಕೆ ಶಿವಸೇನೆ ಕಾರ್ಯಕರ್ತರ ಯತ್ನ: ತಡೆದ ಪೊಲೀಸ್ ಪಡೆ

ನಿಪ್ಪಾಣಿ (ಬೆಳಗಾವಿ ಜಿಲ್ಲೆ): ಗಡಿಭಾಗದಿಂದ ರಾಜ್ಯ ಪ್ರವೇಶಿಸಲು ಯತ್ನಿಸಿದ ಮಹಾರಾಷ್ಟ್ರದ ಶಿವಸೇನೆಯ ಕಾರ್ಯಕರ್ತರನ್ನು ಸೋಮವಾರ ತಾಲ್ಲೂಕಿನ ಕೊಗನೊಳಿ ಚೆಕ್ ಪೋಸ್ಟ್ ಬಳಿ ಪುಣೆ- ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ತಡೆದ ರಾಜ್ಯ ಪೊಲೀಸರು ಅವರನ್ನು ಮರಳಿ ಕಳುಹಿಸಿದ್ದಾರೆ.


ಕರ್ನಾಟಕ ರಾಜ್ಯೋತ್ಸವದಂದು ಬೆಳಗಾವಿಯಲ್ಲಿ ರ‍್ಯಾಲಿ ಆಯೋಜಿಸಲಾಗುವುದೆಂದು ಘೋಷಿಸಿ, ರಾಜ್ಯ ಪ್ರವೇಶಿಸಲು ಪ್ರಯತ್ನಿಸುತ್ತಿದ್ದ ಶಿವಸೇನೆಯ ಕೊಲ್ಹಾಪುರ ಜಿಲ್ಲೆಯ ಅಧ್ಯಕ್ಷ ವಿಜಯ ದೇವಣೆ ಮತ್ತು ಕಾರ್ಯಕರ್ತರನ್ನು ಗಡಿಯಲ್ಲಿಯೇ ಪೊಲೀಸರು ತಡೆದರು.

ಕೂಡಲೇ ಶಿವಸೇನೆಯ ಕಾರ್ಯಕರ್ತರು ರಾಷ್ಟ್ರೀಯ ಹೆದ್ದಾರಿಯಲ್ಲಿಯೇ ಕುಳಿತುಕೊಂಡರು. ನಂತರ ಪಕ್ಕದ ದೂಧಗಂಗಾ ನದಿಯಲ್ಲಿ ಇಳಿದು, 'ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ನದಿಯು ಹರಿಯುತ್ತದೆ. ಇದಕ್ಕೆ ನಮಸ್ಕರಿಸಿದ್ದು ನಾವು ಬೆಳಗಾವಿಯನ್ನು ತಲುಪಿದಂತಾಗಿದೆ' ಎಂದು ವಿಜಯ ದಾವಣೆ ಹೇಳಿದರು.



ಚಿದಾನಂದ ಸಾಲಿಗೆ ಮುದ್ದಣ ಕಾವ್ಯ ಪ್ರಶಸ್ತಿ

ಕಾಂತಾವರ (ಉಡುಪಿ ಜಿಲ್ಲೆ): ಕಾಂತಾವರ ಕನ್ನಡ ಸಂಘದ ಪರೇಲ್ ಪುನರೂರು ವಾಸುದೇವರಾವ್ ಟ್ರಸ್ಟ್ |ಪ್ರಾಯೋಜಕತ್ವದ 2022ನೇ ಸಾಲಿನ ಮುದ್ದಣ ಕಾವ್ಯ ಪ್ರಶಸ್ತಿಗೆ ರಾಯಚೂರಿನ ಚಿದಾನಂದ ಸಾಲಿ ಅವರ 'ಕನ್ನಡಿಯಲ್ಲಿ ಮನುಷ್ಯ ಮಾತ್ರ' ಎಂಬ ಕವನ ಸಂಕಲನದ ಹಸ್ತಪ್ರತಿಯನ್ನು ಆಯ್ಕೆಮಾಡಲಾಗಿದೆ ಎಂದು ಸಂಘದ ಸ್ಥಾಪಕ ಅಧ್ಯಕ್ಷ ಡಾ.ನಾ.ಮೊಗಸಾಲೆ ಅವರು ತಿಳಿಸಿದ್ದಾರೆ.



ನಂದಳಿಕೆಯ ವರಕವಿ ಮುದ್ದಣನ ಹೆಸರಿನಲ್ಲಿ ಸ್ಥಾಪಿಸಲಾದ ಈ ಪ್ರಶಸ್ತಿಯು ₹10 ಸಾವಿರ ಗೌರವ ಸಂಭಾವನೆ, ತಾಮ್ರಪತ್ರ ಮತ್ತು ಸನ್ಮಾನ ಒಳಗೊಂಡಿದೆ.

ತನಿಖೆಯಿಂದ ಸತ್ಯಾಂಶ ಹೊರಬರಲಿ: ಸಿಎಂ

ಬೆಂಗಳೂರು: ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ವ್ಯಕ್ತಿಯೊಬ್ಬರಿಂದ ಹಣ ಪಡೆದಿರುವ ಕುರಿತು ಲೋಕಾಯುಕ್ತಕ್ಕೆ ದೂರು ನೀಡುವುದಾಗಿ ಬಿಜೆಪಿ ಮುಖಂಡ ಎನ್. ಆರ್. ರಮೇಶ್ ಹೇಳಿದ್ದಾರೆ. ಆ ಬಗ್ಗೆ ತಾವೇನೂ ಹೇಳುವುದಿಲ್ಲ. ತನಿಖೆಯಾಗಿ ಸತ್ಯಾಂಶ ಹೊರಬರಲಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಚಿತ್ರನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರಿಗೆ 'ಕರ್ನಾಟಕ ರತ್ನ' ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ವಿಧಾನಸೌಧದ ಆವರಣದಲ್ಲಿ ನಡೆದಿರುವ ಸಿದ್ಧತೆ ಕುರಿತು ಸೋಮವಾರ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದರು.

'ಸಿದ್ದರಾಮಯ್ಯ ಹಣ ಪಡೆದಿದ್ದಾರೆ ಎಂಬ ಆರೋಪದ ಕುರಿತು ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿಗಳನ್ನು ನೋಡಿದ್ದೇನೆ. ಈ ಬಗ್ಗೆ ನಾನು ಯಾವುದೇ ವ್ಯಾಖ್ಯಾನ ಮಾಡುವುದಿಲ್ಲ. ಆಧಾರರಹಿತವಾಗಿ ಆರೋಪ ಮಾಡುವ ರೂಢಿ ವಿರೋಧ ಪಕ್ಷದವರಿಗೆ ಇದೆ. ನಾನು ಹಾಗೆ ಮಾಡುವುದಿಲ್ಲ' ಎಂದರು.

'ಸೌರಶಕ್ತಿ ಯೋಜನೆಯಲ್ಲಿ ಅಕ್ರಮ ನಡೆದಿರುವ ಆರೋಪದ ಕುರಿತು ತನಿಖೆ ನಡೆಯಲಿದೆಯೆ' ಎಂಬ ಪ್ರಶ್ನೆಗೆ, 'ಕಾದು ನೋಡಿ' ಎಂದು ಬೊಮ್ಮಾಯಿ ಉತ್ತರಿಸಿದರು.

ಜಾನಪದ ತಜ್ಞ ಡಾ.ಕೆ. ಚಿನ್ನಪ್ಪ ಗೌಡರಿಗೆ ಪ್ರಶಸ್ತಿ

ಉಡುಪಿ: ಜಾನಪದ ತಜ್ಞ ಡಾ.ಕೆ.ಚಿನ್ನಪ್ಪ ಗೌಡ ಅವರನ್ನು 2022ನೇ ಸಾಲಿನ ಪೊಳಲಿ ಶೀನಪ್ಪ ಹೆಗ್ಡೆ ಹಾಗೂ ಎಸ್.ಆರ್. ಹೆಗ್ಡೆ ಹೆಸರಿನಲ್ಲಿ ನೀಡುವ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ ಎಂದು ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಆಡಳಿತಾಧಿಕಾರಿ ಡಾ.ಬಿ. ಜಗದೀಶ್ ಶೆಟ್ಟಿ ತಿಳಿಸಿದ್ದಾರೆ.



ಪ್ರಶಸ್ತಿಯು ₹ 20ಸಾವಿರ ನಗದು ಪುರಸ್ಕಾರ ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ. ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಮೂಲಕ ಪ್ರಶಸ್ತಿ ನೀಡಲಾಗುವುದು.

ವಿಜಯಪುರ ಪಾಲಿಕೆ: ಬಿಜೆಪಿ ಪ್ರಾಬಲ್ಯ

ಒಂದನೇ ಪುಟದಿಂದ...

ಪಕ್ಷದ ವಿಪ್ ಉಲ್ಲಂಘಿಸಿದ್ದನ್ನು ಬಿಎಸ್‌ಪಿಯು ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಪ್ರಶ್ನಿಸಿತ್ತು. ನ್ಯಾಯಾಲಯವು ಏಳು ಮಂದಿಯ ಸದಸ್ಯತ್ವ ಅನರ್ಹಗೊಳಿಸಿತ್ತು. ಹೈಕೋರ್ಟ್ ಆ ಆದೇಶವನ್ನು ಎತ್ತಿ ಹಿಡಿದಿತ್ತು.

ಕಲಬುರಗಿಯಲ್ಲಿ 2 ಸ್ಥಾನ ಕಾಂಗ್ರೆಸ್‌ಗೆ: ಜಿಲ್ಲೆಯ ಚಿಂಚೋಳಿ ಮತ್ತು ಚಿತ್ತಾಪುರ ಪುರಸಭೆಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ.

ಬೆಳಗಾವಿ ಜಿಲ್ಲೆ ರಾಮದುರ್ಗದ ಪುರಸಭೆ 9ನೇ ವಾರ್ಡ್ ಹಾಗೂ ಹಾವೇರಿ ಜಿಲ್ಲೆ ಸವಣೂರು ಪುರಸಭೆಯ ಒಂದು ವಾರ್ಡ್‌ಗೆ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಜಯ ಸಾಧಿಸಿದ್ದಾರೆ.

ಧಾರವಾಡ ಜಿಲ್ಲೆ ಕಲಘಟಗಿ ಪಟ್ಟಣ ಪಂಚಾಯಿತಿಯ 14ನೇ ವಾರ್ಡ್‌ಗೆ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ.

'2023ರ ಚುನಾವಣೆಗೆ ಮುನ್ಸೂಚನೆ'

'ಸ್ಥಳೀಯ ಸಂಸ್ಥೆಗಳ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಅಭೂತಪೂರ್ವ ಗೆಲುವು ಸಾಧಿಸಿದ್ದು, ಈ ಫಲಿತಾಂಶ ಮುಂಬರುವ 2023ರ ಚುನಾವಣೆಯಲ್ಲಿ ಕರ್ನಾಟಕದೆಲ್ಲೆಡೆ ಕಮಲ ಅರಳುವ ಮುನ್ಸೂಚನೆಯಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಕ್ರಿಯಿಸಿದ್ದಾರೆ.

ವಿಜಯಪುರ ಪಾಲಿಕೆ	
ಒಟ್ಟು ಸ್ಥಾನ	35
ಬಿಜೆಪಿ	17
ಕಾಂಗ್ರೆಸ್	10
ಜೆಡಿಎಸ್	1
ಎಐಎಂಐಎಂ	2
ಪಕ್ಷೇತರರು	5

ಕೊಳ್ಳೇಗಾಲ ನಗರಸಭೆ (ಉಪಚುನಾವಣೆ)	
ಒಟ್ಟು ಸ್ಥಾನ	7
ಬಿಜೆಪಿ	6
ಕಾಂಗ್ರೆಸ್	1

ಭಗತ್ ಸಿಂಗ್ ಲೇಖನ ಮರುಸೇರ್ಪಡೆಗೆ ರಾಮಕೃಷ್ಣ ವಿರೋಧ

ಬೆಂಗಳೂರು: ಪಠ್ಯಪುಸ್ತಕದಲ್ಲಿ ತಮ್ಮ ಲೇಖನ 'ಭಗತ್ ಸಿಂಗ್' ಪಠ್ಯ ಮರುಸೇರ್ಪಡೆ ಮಾಡಿರುವುದಕ್ಕೆ ಸಾಹಿತಿ ಡಾ.ಜಿ. ರಾಮಕೃಷ್ಣ ವಿರೋಧ ವ್ಯಕ್ತಪಡಿಸಿದ್ದಾರೆ.

'ಲೇಖಕನಾಗಿ ನನಗಿರುವ ಕಾಯ್ದಿರಿಸಿದ ಹಕ್ಕುಗಳಿಗೆ ಚ್ಯುತಿ ಬರುವ ರೀತಿಯಲ್ಲಿ ಸರ್ಕಾರ ನಡೆದುಕೊಂಡಿದೆ ಎನ್ನುವುದು ಶತಃಸಿದ್ಧ. ಈ ನಡೆಯನ್ನು ಉಗ್ರವಾಗಿ ಖಂಡಿಸುತ್ತೇನೆ' ಎಂದು ತಿಳಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಕನ್ನಡ ಭಾಷೆ ಉಳಿಯುವುದು ಕತೆ, ಕಾದಂಬರಿಗಳಿಂದ ಅಲ್ಲ. ಅದು ಉಳಿಯುವುದು ಜನರ ಬಳಕೆಯಿಂದ.

-ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಕನ್ನಡ: ತೋರುಗಾಣಿಕೆ ಮಾತು ಸಾಕು ಸಂಕಲ್ಪಶಕ್ತಿಯ ಪ್ರಯತ್ನಗಳು ಬೇಕು

ಕನ್ನಡ ಸಂಭ್ರಮವನ್ನು ಜನಸಮೂಹಕ್ಕೆ ತಲುಪಿಸುವ ಪ್ರಯತ್ನವಾದ 'ಕೋಟಿ ಕಂಠ ಗಾಯನ' ಕಾರ್ಯಕ್ರಮದ ಮೂಲಕ 67ನೇ ರಾಜ್ಯೋತ್ಸವಕ್ಕೆ ರಾಜ್ಯ ಸರ್ಕಾರ ಅರ್ಥಪೂರ್ಣ ಮುನ್ನುಡಿ ಬರೆದಿದೆ. ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರವಾಗಿ 'ಕರ್ನಾಟಕ ರತ್ನ' ಪ್ರಶಸ್ತಿ ನೀಡಿರುವ ನಿರ್ಧಾರವೂ ಕನ್ನಡ ಹಬ್ಬದ ಸಂಭ್ರಮ ಹೆಚ್ಚಿಸಿದೆ. ನಾಡು-ನುಡಿಯ ಹಿರಿಮೆಯನ್ನು ಸಾರ್ವಜನಿಕ ಸಂಭ್ರಮವಾಗಿಸುವ ಹಾಗೂ ಯುವ ತಲೆಮಾರಿನಲ್ಲಿ ಕನ್ನಡ ಪ್ರೀತಿಯನ್ನು ಮೂಡಿಸುವ ದಿಸೆಯಲ್ಲಿ ಇಂಥ ಕಾರ್ಯಕ್ರಮಗಳು ಅಗತ್ಯ. ಆದರೆ, ಕೋಟಿ ಕಂಠ ಗಾಯನ ಅಥವಾ ಜನಪ್ರಿಯ ನಾಯಕನಟರಿಗೆ ಪ್ರಶಸ್ತಿ ಪ್ರದಾನದಂತಹ ಭಾವುಕ ಕಾರ್ಯಕ್ರಮಗಳಿಂದ ನಾಡುನುಡಿಯ ನಿಜವಾದ ಹಿತಾಸಕ್ತಿ ಸಾಧ್ಯವಾಗುವುದಿಲ್ಲ. ವಾಸ್ತವ ನೆಲೆಗಟ್ಟಿನ ರಚನಾತ್ಮಕ ಕಾರ್ಯಕ್ರಮಗಳಿಂದಷ್ಟೇ ಕನ್ನಡದ ಹಿತಾಸಕ್ತಿ ಸಾಧ್ಯ. ಜನಪ್ರಿಯ ನಿರ್ಧಾರಗಳ ಜೊತೆಗೆ ಕನ್ನಡದ ನಾಳೆಗಳನ್ನು ಬಲಪಡಿಸಲಿಕ್ಕಾಗಿ ವಸ್ತುನಿಷ್ಠವಾಗಿ ಕಾರ್ಯನಿರ್ವಹಿಸುವ ಇಚ್ಛಾಶಕ್ತಿಯನ್ನೂ ಸರ್ಕಾರ ಪ್ರದರ್ಶಿಸಬೇಕಾಗಿದೆ. ಆಡಳಿತ ಭಾಷೆಯನ್ನಾಗಿ, ಜ್ಞಾನದ ಭಾಷೆಯನ್ನಾಗಿ ಹಾಗೂ ಉದ್ಯೋಗದ ಭಾಷೆಯನ್ನಾಗಿ ಕನ್ನಡವನ್ನು ಸಬಲಗೊಳಿಸುವ ದಿಸೆಯಲ್ಲಿ ಸರ್ಕಾರ ಸ್ಪಷ್ಟವಾದ ಕ್ರಿಯಾಯೋಜನೆ ರೂಪಿಸಿಕೊಂಡು ಮುನ್ನಡೆಯಬೇಕಾಗಿದೆ.



ಆಡಳಿತ ಹಾಗೂ ಉದ್ಯೋಗದ ಭಾಷೆಯನ್ನಾಗಿ ಕನ್ನಡವನ್ನು ಸಶಕ್ತವಾಗಿ ರೂಪಿಸುವ ದಿಸೆಯಲ್ಲಿ ರಾಜ್ಯ ಸರ್ಕಾರ ಇನ್ನಾದರೂ ಇಚ್ಛಾಶಕ್ತಿ ತೋರಬೇಕು

ಕನ್ನಡವನ್ನು ಅಧಿಕೃತ ಭಾಷೆಯಾಗಿ ಎಲ್ಲಾ ಹಂತಗಳಲ್ಲಿ ಅನುಷ್ಠಾನಗೊಳಿಸಲು ಶಾಸನಾತ್ಮಕ ಬಲ ತುಂಬುವ 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ'ಯನ್ನು ಕಳೆದ ವಿಧಾನಮಂಡಲ ಅಧಿವೇಶನದ ಸಂದರ್ಭದಲ್ಲಿ ರಾಜ್ಯ ಸರ್ಕಾರ ವಿಧಾನಸಭೆಯಲ್ಲಿ ಮಂಡಿಸಿದೆ. ಮಸೂದೆಯು ಉನ್ನತ ಶಿಕ್ಷಣ ಮತ್ತು ವೃತ್ತಿಪರ ಕೋರ್ಸ್‌ಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ಒದಗಿಸಿಕೊಡುವುದು ಸೇರಿದಂತೆ, ಕನ್ನಡದ ಸಮಗ್ರ ಅಭಿವೃದ್ಧಿಗೆ ವಿವಿಧ ಹಂತಗಳಲ್ಲಿ ಅನುವು ಮಾಡಿಕೊಡುವ ಉದ್ದೇಶ ಹೊಂದಿದೆ. ಸ್ಥಳೀಯರಿಗೆ ಉದ್ಯೋಗ ನೀಡುವ ಕೈಗಾರಿಕೆಗಳ ಉತ್ತೇಜನಕ್ಕೂ ಅವಕಾಶ ದೊರಕಿಸಿಕೊಡಲಿದೆ. ರಾಜ್ಯ ಮತ್ತು ಸ್ಥಳೀಯ ಪ್ರಾಧಿಕಾರಗಳು ತಮ್ಮ ಎಲ್ಲ ಅಧಿಕೃತ ಹಾಗೂ ಆಡಳಿತಾತ್ಮಕ ಪತ್ರ ವ್ಯವಹಾರಗಳಲ್ಲಿ ಕನ್ನಡವನ್ನು ಬಳಸುವುದನ್ನು ಕಡ್ಡಾಯಗೊಳಿಸಲಿದೆ. ಆದರೆ, ವಿಧಾನಸಭೆಯ ಮುಂದೆ ಮಂಡನೆಯಾಗಿರುವ ಮಸೂದೆಯ ಪರಿಪೂರ್ಣತೆಯ ಬಗ್ಗೆ ಸರ್ಕಾರದ ಜೊತೆಗೂಡಿ ಕೆಲಸ ಮಾಡುವ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೇ ಅನುಮಾನ ವ್ಯಕ್ತಪಡಿಸಿದ್ದಾರೆ. ಮಸೂದೆಯನ್ನು ಕೆಲವು ಬದಲಾವಣೆಗಳೊಂದಿಗೆ ವಿಧಾನಮಂಡಲದ ಮುಂದೆ ಮತ್ತೆ ತರಬೇಕೆಂದು ಅವರು ಆಗ್ರಹಿಸಿದ್ದಾರೆ. ಉದ್ದೇಶಿತ ಮಸೂದೆಯನ್ನು ಸಶಕ್ತಗೊಳಿಸುವ ದಿಸೆಯಲ್ಲಿ ಸರ್ಕಾರ ಮುಕ್ತ ಮನಸ್ಸಿನಿಂದ ವರ್ತಿಸಬೇಕಾಗಿದೆ, ವ್ಯಾಪಕ ಚರ್ಚೆಗೆ ಅವಕಾಶ ಕಲ್ಪಿಸಬೇಕಾಗಿದೆ. ಕನ್ನಡ ಸಾಂಸ್ಕೃತಿಕ ಲೋಕವನ್ನು ಕ್ರಿಯಾಶೀಲಗೊಳಿಸುವ ಉದ್ದೇಶದಿಂದ ರೂಪಿಸಲಾಗಿರುವ ಪ್ರಾಧಿಕಾರಗಳು ಮತ್ತು ಅಕಾಡೆಮಿಗಳ ಕುರಿತಂತೆಯೂ ಸರ್ಕಾರ ತನ್ನ ಗೊಂದಲದ ಕಾರ್ಯವೈಖರಿಯಿಂದ ಹೊರಬರಬೇಕಾಗಿದೆ. ಪ್ರಾಧಿಕಾರಗಳು ಮತ್ತು ಅಕಾಡೆಮಿಗಳ ಅಧ್ಯಕ್ಷರನ್ನು ಅಧಿಕಾರಾವಧಿ ಮುಗಿದ ಕಾರಣಕ್ಕಾಗಿ ಕರ್ತವ್ಯದಿಂದ ತೆರವುಗೊಳಿಸಲಾಗಿದ್ದು, ಆ ಹುದ್ದೆಗಳನ್ನು ತುಂಬುವ ಬದಲು ಆಡಳಿತಾಧಿಕಾರಿಗಳನ್ನು ನೇಮಿಸಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧೀನದ ಟ್ರಸ್ಟ್ ಮತ್ತು ಪ್ರತಿಷ್ಠಾನಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಿಸಿ ಕಳೆದ ಆಗಸ್ಟ್‌ನಲ್ಲಿ ಆದೇಶ ಹೊರಡಿಸಿದ್ದ ಸರ್ಕಾರ, ಇದ್ದಕ್ಕಿದ್ದಂತೆ ಆ ಪಟ್ಟಿಯನ್ನು ಹಿಂದಕ್ಕೆ ತೆಗೆದುಕೊಂಡಿತು. ಅಕಾಡೆಮಿ ಮತ್ತು ಪ್ರಾಧಿಕಾರಗಳಿಗೆ ನೀಡುವ ಅನುದಾನ ಕೂಡ ಕಳೆದ ಕೆಲವು ವರ್ಷಗಳಿಂದ ಕಡಿಮೆಯಾಗುತ್ತಿದೆ. ಈ ನೇಮಕ ಮತ್ತು ವಾಪಸಾತಿಗಳು ಹಾಗೂ ಅನುದಾನದ ಕೊರತೆ, ಸರ್ಕಾರಕ್ಕೆ ಸ್ಪಷ್ಟವಾದ ಸಾಂಸ್ಕೃತಿಕ ನೀತಿ ಇಲ್ಲದಿರುವುದನ್ನು ಸೂಚಿಸುವಂತಿವೆ.

ರಾಷ್ಟ್ರಮಟ್ಟದ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆಯಲು ಅವಕಾಶ ಕಲ್ಪಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವುದರಲ್ಲಿ ವಿಫಲವಾಗಿರುವ ಸರ್ಕಾರ, ಹಿಂದಿ ಹೇರಿಕೆಯ ವಿಷಯ ಪ್ರಸ್ತಾಪವಾದಾಗಲೆಲ್ಲ ತನ್ನ ಕನ್ನಡಪ್ರೀತಿಯನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವಲ್ಲಿ ಸೋತಿದೆ. ಪಕ್ಷದ ನಿಲುವು ಏನೇ ಇದ್ದರೂ, ನಾಡುನುಡಿಯ ಪ್ರಶ್ನೆ ಬಂದಾಗ ರಾಜಕೀಯದ ಒಲವು- ನಿಲುವುಗಳು ಗೌಣವಾಗಿ ಕನ್ನಡದ ಹಿತಾಸಕ್ತಿಯಷ್ಟೇ ಮುಖ್ಯವಾಗಬೇಕು. ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಸಂಬಂಧಿಸಿದಂತೆಯೂ ಸರ್ಕಾರ ಇಚ್ಛಾಶಕ್ತಿ ಪ್ರದರ್ಶಿಸಬೇಕಾಗಿದೆ. ವರ್ಷದಿಂದ ವರ್ಷಕ್ಕೆ ಮುಚ್ಚುತ್ತಿರುವ ಕನ್ನಡ ಶಾಲೆಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಸರ್ಕಾರಿ ಶಾಲೆಗಳ ಮಕ್ಕಳ ಪೋಷಕರಿಂದ ಪ್ರತೀ ತಿಂಗಳು ನೂರು ರೂಪಾಯಿ ದೇಣಿಗೆ ಪಡೆಯುವ ಸುತ್ತೋಲೆಯನ್ನು ಶಿಕ್ಷಣ ಇಲಾಖೆ ಹೊರಡಿಸಿ, ಸಾರ್ವಜನಿಕರ ವಿರೋಧದ ನಂತರ ಹಿಂಪಡೆದಿತ್ತು. ಈ ಗೊಂದಲವು ಪ್ರಾಥಮಿಕ ಶಿಕ್ಷಣದ ಬಗ್ಗೆ ಸರ್ಕಾರ ಎಷ್ಟು ಗಂಭೀರವಾಗಿದೆ ಎನ್ನುವ ಪ್ರಶ್ನೆಗೆ ಆಸ್ಪದ ಕಲ್ಪಿಸುವಂತಿದೆ. ಆಡಳಿತ ಹಾಗೂ ಉದ್ಯೋಗದ ಭಾಷೆಯನ್ನಾಗಿ ಕನ್ನಡವನ್ನು ಸಶಕ್ತವಾಗಿ ರೂಪಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಇನ್ನಾದರೂ ತನ್ನ ಜಡ ಮನೋಭಾವದಿಂದ ಹೊರಬರಬೇಕು. ಹೊಸ ಕಾಲ ಹಾಗೂ ತಂತ್ರಜ್ಞಾನಕ್ಕೆ ತಕ್ಕಂತೆ ಕನ್ನಡ ಭಾಷೆಯನ್ನು ಸಜ್ಜುಗೊಳಿಸುವ ದಿಸೆಯಲ್ಲಿ ಸರ್ಕಾರ ತನ್ನ ಮಾತುಗಳನ್ನು ಕೃತಿರೂಪಕ್ಕೆ ತರಲು ಪ್ರಾಮಾಣಿಕ ಪ್ರಯತ್ನ ನಡೆಸಬೇಕು.

ದಿನದ ಟ್ವೀಟ್

ತುರ್ತಾಗಿ ಪರಿಶೀಲಿಸಿ



ಕರ್ನಾಟಕದಲ್ಲಿರುವ ಎಲ್ಲಾ ಉಕ್ಕಿನ ತೂಗು ಸೇತುವೆಗಳನ್ನೂ ಸುರಕ್ಷತೆಯ ದೃಷ್ಟಿಯಿಂದ ತುರ್ತಾಗಿ ಪರಿಶೀಲನೆ ನಡೆಸಬೇಕು ಮತ್ತು ಅವುಗಳ ಅಗತ್ಯ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತೇನೆ. ಈ ಕಾರ್ಯ ರಾಜ್ಯದಾದ್ಯಂತ, ಅದರಲ್ಲೂ ವಿಶೇಷವಾಗಿ ಅತಿ ಹೆಚ್ಚು ಮಳೆ ಬೀಳುವ ಕರಾವಳಿ ಪ್ರದೇಶಗಳಲ್ಲಿ ನಡೆಯಬೇಕಿದೆ.

ನಿವೇದಿತ್ ಆಳ್ವ, ಕಾಂಗ್ರೆಸ್ ಮುಖಂಡ

ಕಿಡಿನುಡಿ



ಭಾರತದಲ್ಲಿ ಒಬ್ಬ ಶ್ರೀಮಂತ ಮೃತಪಟ್ಟಾಗ ಪರಿಣಾಮಗಳು ಗೋಚರಿಸುತ್ತವೆ. ಹಿಂಬದಿ ಆಸನಗಳ ಸೀಟ್ ಬೆಲ್ಟ್ ಧರಿಸುವಿಕೆ ಇದ್ದಕ್ಕಿದ್ದಂತೆ ಕಡ್ಡಾಯವಾಗುತ್ತದೆ. ಸುರಕ್ಷತೆಯ ಬಗ್ಗೆ ನಮಗೆ ಕಾಳಜಿ ಇದೆ ಎಂದು ಬಿಂಬಿಸಲಾಗುತ್ತದೆ. ಬಡವರು ಮತ್ತು ಮಧ್ಯಮ ವರ್ಗದವರನ್ನು ಆ ಬಗೆಯ ಘನತೆಯಿಂದ ನಡೆಸಿಕೊಳ್ಳುವುದಿಲ್ಲ.
7 ತಿಂಗಳವರೆಗೆ ದುರಸ್ತಿ ಕಾರ್ಯ. ಅದಾದ 5 ದಿನಗಳ ಬಳಿಕ ಅದು ಕುಸಿದು ಬೀಳುತ್ತದೆ. 140ಕ್ಕೂ ಹೆಚ್ಚು ಜನ ಸಾಯುತ್ತಾರೆ. ಪ್ರಸಿದ್ಧ ಗುಜರಾತ್ ಮಾದರಿ.

(ಗುಜರಾತ್‌ನ ಸೇತುವೆ ಕುಸಿತ ಪ್ರಕರಣಕ್ಕೆ ಪ್ರತಿಕ್ರಿಯೆ)

ಅಭಿಜಿತ್ ಗಂಗೂಲಿ

25 ವರ್ಷಗಳ ಹಿಂದೆ

ಶನಿವಾರ, 1-11-1997

- **ಪ್ರಸಾರ ಭಾರತಿ ನಿಗಮಕ್ಕೆ ಅಧಿಕ ಸ್ವಾತಂತ್ರ್ಯ: ವ್ಯಾಪಕ ತಿದ್ದುಪಡಿ**

ನವದೆಹಲಿ, ಅ. 31- ಆಕಾಶವಾಣಿ ಹಾಗೂ ದೂರದರ್ಶನಕ್ಕೆ ಸಂಪೂರ್ಣ ಸ್ವಾಯತ್ತತೆ ನೀಡುವ ಪ್ರಸಾರ ಭಾರತಿ ಮಸೂದೆಯ ಕಾರ್ಯಗಳ ಬಗ್ಗೆ ನಿಗಾವಹಿಸಲು 22 ಸದಸ್ಯರ ಸಮಿತಿ ರಚಿಸುವ ಯೋಜನೆಯನ್ನು ಕೈಬಿಟ್ಟು ಮಸೂದೆಗೆ ಸೂಕ್ತ ತಿದ್ದುಪಡಿ ತರುವ ಮೂಲಕ ಎಲೆಕ್ಟ್ರಾನಿಕ್ ಮಾಧ್ಯಮಗಳಿಗೆ ಸಂಪೂರ್ಣ ಸ್ವಾಯತ್ತತೆ ಕಲ್ಪಿಸಲಾಗಿದೆ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಜೈಪಾಲ್ ರೆಡ್ಡಿ ಅವರು ಇಂದು ಹೇಳಿದರು.

1990ರ ಪ್ರಸಾರ ಭಾರತಿ ಕಾಯ್ದೆಯನ್ನು ತಿದ್ದುಪಡಿ ಮಾಡುವ ಸುಗ್ರೀವಾಜ್ಞೆಯನ್ನು ಬುಧವಾರ ರಾತ್ರಿ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಹೊರಡಿಸಿದರು.

- **ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಇಂದು ಅಸ್ತಿತ್ವಕ್ಕೆ**

ಹುಬ್ಬಳ್ಳಿ, ಅ. 31- ವಿವಿಧ ಕಾರ್ಮಿಕ ಸಂಘಟನೆಗಳ ಪರ ಮತ್ತು ವಿರೋಧದ ಮಧ್ಯೆ ದೀರ್ಘಕಾಲದಿಂದ ನನೆಗುದಿಯಲ್ಲಿದ್ದ ನೂತನ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ನಾಳೆ ಇಲ್ಲಿ ಅಸ್ತಿತ್ವಕ್ಕೆ ಬರಲಿದೆ. ಕೇಂದ್ರ ಮಾನವ ಸಂಪನ್ಮೂಲ ಸಚಿವ ಎಸ್.ಆರ್.ಬೊಮ್ಮಾಯಿ ಅವರು ವಾಯವ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ವಿಧ್ಯುಕ್ತವಾಗಿ ಉದ್ಘಾಟಿಸಲಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 1-11-1972

- **ರಾಜ್ಯ ಪ್ರಶಸ್ತಿ ವಿಜೇತರು**

ಬೆಂಗಳೂರು, ಅ.31- ನಾನಾ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆಗಾಗಿ ಈ ಬಾರಿ ಒಟ್ಟು 14 ಮಂದಿಗೆ ರಾಜ್ಯ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು.

ಪ್ರಶಸ್ತಿ ವಿಜೇತರಲ್ಲಿ ಹೆಸರಾಂತ ಸಂಗೀತ ಕಲಾವಿದ ಶ್ರೀ ತಿಟ್ಟೆ ಕೃಷ್ಣಯ್ಯಂಗಾರ್, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಜಿ.ನಾರಾಯಣ ಮತ್ತು ಕವಿ ಕೆ.ಎಸ್.ನರಸಿಂಹಸ್ವಾಮಿ ಅವರೂ ಸೇರಿದ್ದಾರೆ.

- **ಜನತೆಯ ಸಹಕಾರ ಯಾಚನೆ**

'ಈಗ ದೇಶದ ಪರಿಸ್ಥಿತಿ ಹೆಚ್ಚು ಕಷ್ಟಕರವಾಗಿದೆ. ಈ ಪರಿಸ್ಥಿತಿಯನ್ನು ಎದುರಿಸಲು ನಿಮ್ಮ ಸಹಕಾರ-ಸಹಾನುಭೂತಿ ಕೊಡಿ'.
-ಇದೇ ರಾಜ್ಯದ ಮುಖ್ಯಮಂತ್ರಿ ದೇವರಾಜ ಅರಸು ಜನತೆಗೆ ನೀಡಿದ ಕನ್ನಡ ರಾಜ್ಯೋತ್ಸವ ಸಂದೇಶ. ಸಂದರ್ಭ: ಪ್ರಜಾವಾಣಿಗೆ ನೀಡಿದ ವಿಶೇಷ ಸಂದರ್ಶನ.

ವೈದ್ಯಶಿಕ್ಷಣವನ್ನು ಕನ್ನಡದಲ್ಲೇ ಕೊಡುತ್ತೇವೆ ಎನ್ನುವ ಧೈರ್ಯ ನಮಗೇಕಿಲ್ಲ?

ಕನ್ನಡದಲ್ಲಿ ವೈದ್ಯ ಶಿಕ್ಷಣದ ಸವಾಲು



ವಿಶ್ಲೇಷಣೆ

ಟಿ.ಆರ್.ಅನಂತರಾಮು

ಎಂ.ಬಿ.ಬಿ.ಎಸ್. ವಿದ್ಯಾರ್ಥಿಗಳು ಹಿಂದಿಯಲ್ಲಿ ಅಧ್ಯಯನ ಮಾಡಲು ರಚಿಸಿದ ವೈದ್ಯಕೀಯ ಪಠ್ಯಪುಸ್ತಕಗಳನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹಿಂದಿನ ತಿಂಗಳಷ್ಟೇ ಭೋಪಾಲ್‌ನಲ್ಲಿ ಬಿಡುಗಡೆ ಮಾಡಿದರು. ದೇಶದಲ್ಲಿ, ಮಧ್ಯಪ್ರದೇಶವೇ ಈ ದಿಸೆಯಲ್ಲಿ ಮೊದಲ ಹೆಜ್ಜೆ ಇಟ್ಟ ರಾಜ್ಯ ಎಂದಾಗ, ಆ ಮಾತಿನ ಧ್ವನಿ 'ಉಳಿದ ರಾಜ್ಯಗಳು ಏನು ಮಾಡುತ್ತಿವೆ' ಎಂದು ಕೇಳುವಂತಿತ್ತು. ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್, ಈ ವರ್ಷದಿಂದಲೇ ಮಧ್ಯಪ್ರದೇಶದ ಆರು ಪಾಲಿಟೆಕ್ನಿಕ್ ಮತ್ತು ಆರು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಹಿಂದಿಯಲ್ಲೇ ಶಿಕ್ಷಣ ಕೊಡುವುದಾಗಿ ಘೋಷಿಸಿದರು.


ಇದರ ಬೆನ್ನಲ್ಲೇ ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯ ಲೆಫ್ಟಿನೆಂಟ್ ಗವರ್ನರ್, ಅಲ್ಲಿ ಎಂ.ಬಿ.ಬಿ.ಎಸ್. ಕೋರ್ಸನ್ನು ತಮಿಳು ಮಾಧ್ಯಮದಲ್ಲಿ ಬೋಧಿಸುವ ಸಂಬಂಧವಾಗಿ ಪಠ್ಯಪುಸ್ತಕ ಸಮಿತಿ ರಚಿಸಿರುವುದಾಗಿ ಹೇಳಿದ್ದಾರೆ. ಹಿಂದಿಯಲ್ಲಿ ಎಂ.ಬಿ.ಬಿ.ಎಸ್. ಬೋಧಿಸುವಂತಹ ಪಠ್ಯಗಳು ಪ್ರಕಟವಾಗಿವೆ, ಮಾರುಕಟ್ಟೆಯಲ್ಲೂ ಲಭ್ಯವಿವೆ. ಆ ದಿಸೆಯಲ್ಲಿ ದೊಡ್ಡ ವೈದ್ಯ ತಂಡವೇ ಕೆಲಸ ಮಾಡುತ್ತಿದೆ. ವೈದ್ಯಕೀಯ ನಿಘಂಟುಗಳಿವೆ, ಪರಾಮರ್ಶನ ಗ್ರಂಥಗಳಿವೆ. ಇಡೀ ಹಿಂದಿ ಬೆಲ್ಟ್ ಎಂದರೆ ಬಿಹಾರ, ಛತ್ತೀಸಗಡ, ಹರಿಯಾಣ, ಜಾರ್ಖಂಡ್, ಮಧ್ಯಪ್ರದೇಶ, ರಾಜಸ್ಥಾನ, ಉತ್ತರಪ್ರದೇಶ, ಉತ್ತರಾಖಂಡ, ಹಿಮಾಚಲ ಪ್ರದೇಶ, ಚಂಡೀಗಡ ಇಲ್ಲೆಲ್ಲ ಆಡಳಿತ ಭಾಷೆ ಹಿಂದಿ.

ಕೇಂದ್ರ ಸರ್ಕಾರವು 1961ರಲ್ಲೇ ವೈಜ್ಞಾನಿಕ ಮತ್ತು ತಾಂತ್ರಿಕ ಪದಗಳ ಬಳಕೆಗೆಂದು ಸಮಿತಿಯೊಂದನ್ನು ರಚಿಸಿತ್ತು. ಅದಕ್ಕೆ ಕಾನೂನಿನ ಬೆಂಬಲವೂ ಇತ್ತು. ಇದು ಹಿಂದಿಗೆ ಮಾತ್ರ ಸೀಮಿತವಾಗದೆ, ಬೇರೆ ಬೇರೆ ರಾಜ್ಯ ಭಾಷೆಗಳಿಗೂ ಅನ್ವಯಿಸುವಂಥದ್ದು. ರಾಷ್ಟ್ರವ್ಯಾಪಿ ತಾಂತ್ರಿಕ ಪದಗಳಿಗೆ ಶಿಷ್ಟತೆ ಇರಬೇಕು ಎನ್ನುವುದು ಸಮಿತಿಯ ಗುರಿ. ಆದರೆ ಈ ದಿಸೆಯಲ್ಲಿ ಪ್ರಗತಿಯಾದದ್ದು ಹಿಂದಿಯಲ್ಲಿ ಮಾತ್ರ. ಇದರಡಿಯಲ್ಲಿ ನಿಘಂಟು, ವಿವರಣಕೋಶ, ಪರಾಮರ್ಶನ ಗ್ರಂಥ, ಪಠ್ಯಪುಸ್ತಕಗಳು ಏನೆಲ್ಲ ಹಿಂದಿ ಭಾಷೆಯಲ್ಲಿ ಬಂದವು. ಶಿಕ್ಷಣದ ದೃಷ್ಟಿಯಿಂದ ಇಷ್ಟೆಲ್ಲ ತಯಾರಿ ಹಿಂದಿಯೇತರ ರಾಜ್ಯಗಳಲ್ಲಿ ಆಗಿದೆಯೇ, ಆಗಿದ್ದರೆ ಉಳಿದ ರಾಜ್ಯಗಳೂ ಏಕೆ 'ನಾವೂ ನಮ್ಮ ಪ್ರಾದೇಶಿಕ ಭಾಷೆಯಲ್ಲಿಯೇ ವೈದ್ಯಶಿಕ್ಷಣ ಕೊಡುತ್ತೇವೆ' ಎಂದು ಹೇಳುವ ಧೈರ್ಯ ತೋರಲಿಲ್ಲ?

ನಮ್ಮ ರಾಜ್ಯದ ಪರಿಸ್ಥಿತಿಯನ್ನೇ ಗಮನಿಸಿದರೆ, ಮೊದಲಿಗೆ ಕನ್ನಡ ಮಾಧ್ಯಮದಲ್ಲಿ ಓದಿದ ವಿದ್ಯಾರ್ಥಿಗಳು ಪಿ.ಯು.ಗೆ ಬಂದಾಗ, ಅದರಲ್ಲೂ ವಿಜ್ಞಾನವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡಾಗ ಬೋಧನೆ ಇಂಗ್ಲಿಷ್ ಮಾಧ್ಯಮದಲ್ಲಿರುತ್ತದೆ. ಶೇ 90ರಷ್ಟು ವಿದ್ಯಾರ್ಥಿಗಳು ಕಕ್ಕಾಬಿಕ್ಕಿಯಾಗುತ್ತಾರೆ. ನಿಧಾನವಾಗಿ ಹೊಂದಿಕೊಳ್ಳುತ್ತಾರೆ. ಏಕೆಂದರೆ ಕನ್ನಡ ಮಾಧ್ಯಮದಲ್ಲಿ ಪಿ.ಯು. ಹಂತದಲ್ಲಿ ವಿಜ್ಞಾನವನ್ನು ಬೋಧಿಸುವ ಶಿಕ್ಷಣ ಪದ್ಧತಿ ನಮ್ಮಲ್ಲಿ ಇಲ್ಲ. ವೈದ್ಯಕೀಯಕ್ಕೆ ಸೇರಿದ ಮೇಲೆ ಕನ್ನಡ ಸಂಪೂರ್ಣವಾಗಿ ಪಕ್ಕಕ್ಕೆ ಸರಿಯುತ್ತದೆ. ಇಂಥ ಪರಿಸ್ಥಿತಿಯಲ್ಲಿ ಏಕಾಏಕಿ ವೈದ್ಯಕೀಯ ಶಿಕ್ಷಣವನ್ನು ಕನ್ನಡದಲ್ಲಿ ಹೇಳಬೇಕೆಂದರೆ ನಮ್ಮಲ್ಲಿ ಆ ಪ್ರಮಾಣದ ಗ್ರಂಥಗಳು ಕನ್ನಡದಲ್ಲಿ ಇವೆಯೇ ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ.

1960- 70ರ ದಶಕಗಳಲ್ಲಿ ಕೇಂದ್ರ ಸರ್ಕಾರವು ಉದಾರ ನೀತಿ ತಳೆದು ಪ್ರಾದೇಶಿಕ ಭಾಷೆಗಳಿಗೆ ದೊಡ್ಡ ಮೊತ್ತದ ಅನುದಾನ ನೀಡಿದಾಗ, ಅದನ್ನು ಒಡನೆಯೇ ವಿಜ್ಞಾನ ಪಠ್ಯಗಳ ರಚನೆಗೆ ಬಳಸಿಕೊಂಡದ್ದು ಮೈಸೂರು ವಿಶ್ವವಿದ್ಯಾಲಯ. ಅಲ್ಲಿ ಪಿ.ಯು.ನಿಂದ ತೊಡಗಿ ಪದವಿ ಮತ್ತು ಸ್ನಾತಕೋತ್ತರ ಪದವಿಯವರೆಗಿನ ಶುದ್ಧ ವಿಜ್ಞಾನದ ಪಠ್ಯಪುಸ್ತಕಗಳು ರಚನೆಯಾದವು. ಕೆಲವು ಅನುವಾದವಾದವು. ಆದರೆ ವೈದ್ಯಕೀಯ ಶಿಕ್ಷಣಕ್ಕೆ ಬೇಕಾಗುವ ಕೃತಿಗಳ ಕಡೆಗೆ ಯಾವ ವಿಶ್ವವಿದ್ಯಾಲಯವೂ ಗಮನ ಕೊಡಲಿಲ್ಲ; ಸರ್ಕಾರಕ್ಕೂ ಆಸಕ್ತಿ ಇರಲಿಲ್ಲ. ಕನ್ನಡಪರ ಹೋರಾಟಗಾರರು ಎಲ್ಲೂ ಇದರ ಪ್ರಸ್ತಾಪ ಮಾಡಲಿಲ್ಲ.

ವಾಸ್ತವ ನೆಲೆಯಲ್ಲಿ ನೋಡಿದರೆ ಕನ್ನಡದಲ್ಲಿ ವೈದ್ಯಸಾಹಿತ್ಯವು ಲೇಖನ ಮತ್ತು ಕೃತಿಗಳ ರೂಪದಲ್ಲಿ ಈಗಲೂ ದೊಡ್ಡ ಪ್ರಮಾಣದಲ್ಲೇ ಹೊರಬರುತ್ತಿದೆ. ಬರೆಯುವವರ ಸಂಖ್ಯೆಯೂ ದೊಡ್ಡದು. ಇಲ್ಲಿ ಎದ್ದುಕಾಣುವುದು ಶಿಕ್ಷಣ ಕ್ಷೇತ್ರದಲ್ಲಿನ ಅವಜ್ಞೆ. ವೈದ್ಯಕೀಯ ಬೋಧನೆಯಲ್ಲಿ ಮತ್ತು ವೈದ್ಯಸಾಹಿತ್ಯ ರಚನೆಯಲ್ಲಿ ಪ್ರಸಿದ್ಧರಾದ ಪ್ರೊ. ಪಿ.ಎಸ್. ಶಂಕರ್ ಈ ಕುರಿತು ವಿಷಾದದಿಂದಲೇ ಹೇಳುತ್ತಾರೆ: '1846- 48ರವರೆಗೆ ಆಗಿನ ಹೈದರಾಬಾದ್ ರಾಜ್ಯದಲ್ಲಿ ಉರ್ದು ಮಾಧ್ಯಮದಲ್ಲಿ ವೈದ್ಯಕೀಯ ಶಿಕ್ಷಣವನ್ನು ನೀಡಲಾಗುತ್ತಿತ್ತು. ಅಂದರೆ ಉನ್ನತ ವ್ಯಾಸಂಗಕ್ಕೂ ಅಲ್ಲಿ ಭಾಷೆ ಅಡ್ಡ ಬರಲಿಲ್ಲ. ನಮ್ಮಲ್ಲೇಕೆ ಇಂಥ ಪ್ರಯೋಗಗಳಾಗಲಿಲ್ಲ? ಅದು, ನಮ್ಮಲ್ಲಿ ಪಠ್ಯಗಳಿಲ್ಲವೆಂದಲ್ಲ. ಇಚ್ಛಾಶಕ್ತಿಯ ಕೊರತೆ. ಕನ್ನಡವು ವೈದ್ಯಕೀಯವೂ ಸೇರಿದಂತೆ ತಾಂತ್ರಿಕ ಪದಗಳಲ್ಲಿ ಶ್ರೀಮಂತವಾಗಿದೆ' ಎನ್ನುತ್ತಾರೆ. 80ರ ದಶಕದಲ್ಲೇ ಇವರು ಮಾನವ ಶರೀರ ಕ್ರಿಯಾಶಾಸ್ತ್ರ, ಶರೀರ ರಚನಾಶಾಸ್ತ್ರ, ಹೃದಯ ಕುರಿತು ಆಕರ ಗ್ರಂಥಗಳನ್ನೇ ಹೊರತಂದಿದ್ದಾರೆ. ಅವರು ಆಗಾಗ ಸಭೆ, ಸಮಾರಂಭಗಳಲ್ಲಿ ಹೇಳುವ ಮಾತು: 'ಹಳೆಯ ವೈದ್ಯ ಲ್ಯಾಟಿನ್‌ನಲ್ಲಿ ಮಾತನಾಡಿದ, ಹೊಸ ವೈದ್ಯ ಇಂಗ್ಲಿಷ್‌ನಲ್ಲಿ ಮಾತನಾಡಿದ. ಒಳ್ಳೆಯ ವೈದ್ಯ ರೋಗಿಯೊಂದಿಗೆ ಮಾತನಾಡಿದ'. ಇದನ್ನು ಸಮರ್ಥಿಸಲೋ ಎಂಬಂತೆ ಶಂಕರ್ ಅವರು ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದಲ್ಲಿ ಒಂದು ಪ್ರಯೋಗ ಮಾಡಿದ್ದಾರೆ. 'ಬಳಕೆ ಕನ್ನಡ' ಮತ್ತು 'ಸಾಂಸ್ಕೃತಿಕ ಕನ್ನಡ' ಎಂಬ ಪ್ರಕಟಣೆ ತಂದಿದ್ದಾರೆ. ವೈದ್ಯರು ರೋಗಿಗಳೊಂದಿಗೆ ಮಾತನಾಡಲು 'ಬಳಕೆ ಕನ್ನಡ' ಬಳಸಬಹುದು. ಕನ್ನಡ ಬಲ್ಲ ವೈದ್ಯರು, ವಿದ್ಯಾರ್ಥಿಗಳು 'ಸಾಂಸ್ಕೃತಿಕ ಕನ್ನಡ'ವನ್ನೇ ಬಳಸಿ, ವೈದ್ಯವಿಜ್ಞಾನದ ಗ್ರಹಿಕೆಯನ್ನು ಇನ್ನಷ್ಟು ವಿಸ್ತರಿಸಬಹುದು.




ಮನೋವೈದ್ಯ ಪ್ರೊ. ಸಿ.ಆರ್.ಚಂದ್ರಶೇಖರ್, 80ರ ದಶಕದಲ್ಲೇ ಡಾ. ಡಿ.ಶಿವಪ್ಪ ಅವರು ಹೊರತಂದ 40,000 ವೈದ್ಯ ಪದಗಳಿಗೆ ಅರ್ಥವಿರುವ 'ಇಂಗ್ಲಿಷ್-ಕನ್ನಡ ವೈದ್ಯ ಪದಕೋಶ'ದತ್ತ ಕೈಮಾಡಿ ತೋರಿಸುತ್ತಾರೆ. ಅತಿಯಾಗಿ ಕನ್ನಡ ಸಮಾನಪದಗಳನ್ನು ಟಂಕಿಸುವ ಬದಲು ಕೆಲವು ಪದಗಳನ್ನು, ಉದಾಹರಣೆಗೆ ಅಲರ್ಜಿ, ಲಿವರ್ ಮುಂತಾದವನ್ನು ನೇರವಾಗಿಯೇ ಬಳಸಿಕೊಳ್ಳಬಹುದು, ಆಗ ಗ್ರಹಿಕೆ ಸುಲಭವಾಗುತ್ತದೆ ಎನ್ನುತ್ತಾರೆ. ಹೌದು, ಯಾವುದೇ ರಾಜ್ಯದ ವೈದ್ಯಕೀಯ ಕಾಲೇಜಿನಲ್ಲಿ ಸರಿಸುಮಾರು ಶೇ 25ರಷ್ಟು ವಿದ್ಯಾರ್ಥಿಗಳು ಹೊರಗಿನವರಿರುತ್ತಾರೆ. ಖಾಸಗಿ ಕಾಲೇಜುಗಳಲ್ಲಿ ಈ ಪ್ರಮಾಣವು ಶೇ 50ಕ್ಕೂ ಏರಬಹುದು. ಅಂತಹವರಿಗೆ ಸುಲಭವಾಗಿ ಸಂವಹನ ಸಾಧ್ಯವಾಗುವ ಕನ್ನಡ ಭಾಷೆಯನ್ನು ಬಳಸಬೇಕಾಗುತ್ತದೆ ಎನ್ನುವುದು ಇಂದಿನ ವಾಸ್ತವವನ್ನು ಆಧರಿಸಿದ ಸಲಹೆ.

ಕರ್ನಾಟಕದಲ್ಲಿ ನಿಜವಾದ ಸಮಸ್ಯೆ ಬೇರೆಯದೇ ಇದೆ. ಕನ್ನಡ ಮಾತೃಭಾಷೆಯ ವಿದ್ಯಾರ್ಥಿಗಳು ಇಂಗ್ಲಿಷ್ ಮಾಧ್ಯಮದಲ್ಲಿ ಓದಿ, ವೈದ್ಯಕೀಯ ಕಾಲೇಜು ಸೇರಿದಾಗ ಹೆಚ್ಚು ಕಡಿಮೆ ಕನ್ನಡ ಓದಲು, ಬರೆಯಲು ಮರೆತೇ ಬಿಟ್ಟಿರುತ್ತಾರೆ. ವೈದ್ಯವಿಜ್ಞಾನವನ್ನು ಇವರಿಗೆ ಕನ್ನಡದಲ್ಲಿ ಬೋಧಿಸುವುದೆಂತು? ಇದೇ ಮಾತನ್ನು ಕನ್ನಡ ಬಲ್ಲ ವೈದ್ಯಕೀಯ ಶಿಕ್ಷಕರಿಗೂ ಅನ್ವಯಿಸಬಹುದು. ಅವರೆಲ್ಲರೂ ಇಂಗ್ಲಿಷ್ ಮೂಲಕ ಬೋಧಿಸುವುದಕ್ಕೇ ಹೆಚ್ಚು ಒಲವು ತೋರುತ್ತಾರೆ. ಇದು ಕನ್ನಡದ ಬಗ್ಗೆ ಪ್ರೀತಿ ಇರುವ ಮತ್ತು ಕನ್ನಡದಲ್ಲಿ ಬರೆಯುತ್ತಿರುವ ಅನೇಕ ವೈದ್ಯರು ವ್ಯಕ್ತಪಡಿಸಿರುವ ಅಭಿಪ್ರಾಯ. ಇಲ್ಲಿ ಕನ್ನಡ ಸೇರಿದಂತೆ ಭಾರತೀಯ ಬೇರೆ ಬೇರೆ ಭಾಷೆಗಳಲ್ಲಿ ವೈದ್ಯಕೀಯ ಶಿಕ್ಷಣ ಕೊಡಲು ಹೊರಟರೆ ಇನ್ನೊಂದು ಬಗೆಯ ಗೊಂದಲವೂ ಎದುರಾಗುತ್ತದೆ. ಇಂಗ್ಲಿಷ್‌ನಲ್ಲಿ ಬೋಧಿಸುವವರಿಗೆ ವಾರ ವಾರವೂ 'ದಿ ಬ್ರಿಟಿಷ್ ಮೆಡಿಕಲ್ ಜರ್ನಲ್', 'ನ್ಯೂ ಇಂಗ್ಲೆಂಡ್ ಜರ್ನಲ್ ಆಫ್ ಮೆಡಿಸಿನ್' ಮುಂತಾದ ಅಂತರರಾಷ್ಟ್ರೀಯ ಪತ್ರಿಕೆಗಳು ಸುಲಭ ಲಭ್ಯ. ಹೊಸ ಹೊಸ ವೈದ್ಯಕೀಯ ಸಂಶೋಧನೆಗಳನ್ನು ಇವು ಪ್ರಕಟಿಸುತ್ತಿರುತ್ತವೆ. ಇಂಥ ಸಂಶೋಧನೆಗಳನ್ನು ಆಯಾ ಭಾಷೆಗಳಲ್ಲೇ ಸಂಗ್ರಹಿಸಿ ಹೇಳಲು ಅಧ್ಯಾಪಕರು ಅಷ್ಟು ಸಮಯ ಮುಡಿಪಿಟ್ಟಿರುತ್ತಾರೆಯೇ ಎಂಬುದು ಗಮನಿಸಬೇಕಾದ್ದೇ.

ಈಗ ಹಿಂದಿಯನ್ನು ಆಡಳಿತ ಭಾಷೆಯನ್ನಾಗಿ ಹೊಂದಿರುವ ರಾಜ್ಯಗಳಲ್ಲಿ ವೈದ್ಯಕೀಯ ಶಿಕ್ಷಣವನ್ನು ಹಿಂದಿಯಲ್ಲೇ ಕೊಡುವ ಯೋಜನೆಯನ್ನು ಕೂಡ ಒಂದು ಪ್ರಯೋಗ ಎಂದು ಪರಿಗಣಿಸಬೇಕಾಗುತ್ತದೆ.

ಚುರುಮುರಿ



ಯಾರಿಟ್ಟರೀ ಗುಂಡಿ?!

• ಲಿಂಗರಾಜು ಡಿ.ಎಸ್.

'ಕರ್ನಾಟಕದ ರಸ್ತೆಗುಂಡಿಗಳ ಬಗ್ಗೆ ಮಹಾಪ್ರಬಂಧ ಬರೆದು ಡಾಕ್ಟರೇಟ್ ತಕ್ಕಬೇಕು ಅಂತ ಇವ್ನಿ ಕಲಾ' ತುರೇಮಣೆ ಸುದ್ದಿ ಸ್ಫೋಟಿಸಿದರು.

'ಚೆನ್ನಾಗಿ ಮಕ್ಕುಗಿದು ಬರೀರಿ ಸಾ. ಜನ ಕೈ, ಕಾಲು ಮುರುಕಂಡು ಪ್ರಾಣ ಬುಡ್ತಿದ್ರೂ ರೋಡು ರಿಪೇರಿ ಮಾಡ್ತಿಲ್ಲ' ಅಂತಂದೆ.

'ರಾತ್ರಿ ವೊತ್ತು ಇದಿಯಮ್ಮ ಬಂದು ಇಂತಾ ಗುಂಡೀಲಿ ಇಂಥೋರ ಸಾವು ಅಂತ ಬರೆದೋಯ್ತಳಂತೆ ಕನೋ. ಅದುಕೇ ರೋಡು ತನ್ನಷ್ಟಕ್ಕೆ ತಾನೇ ಗುಂಡಿ ಬಿದ್ದೋಯ್ತದಂತೆ' ಅಂದ್ರು.

'ಗುಂಡಿಗಳಿಂದ ಇನ್ನೇನುಪಕಾರವೋ?' ವಿಚಾರಿಸಿದೆ.

'ರೋಡು ರಿಪೇರಿಗೆ ಅಂತ ಸ್ಯಾಂಡು, ಟಾರು ಖರೀದಿ ಮಾಡಲಾಗಿ 40 ಪರ್ಸೆಂಟು ಕಮಾಯಿ ಬರಕುಲ್ವೇ? ಗುಂಡಿಗಳಿರೋ ರೋಡಲ್ಲಿ ಬಿಮ್ಮನಸೇರನ್ನ ಆಟೊದಲ್ಲಿ ಕರಕೋದ್ರೆ ಸುಲಭಕ್ಕೆ ಹೆರಿಗೆ ಆಯ್ತದೆ. ಆಗಾಗ ರಸ್ತೆಗಳಲ್ಲಿ ಕಾಣಿಸಿಕೊಳ್ಳೋ ಭಾರೀ ಗುಂಡಿ-ಗೊಟರುಗಳ ಬಗ್ಗೆ ಇತಿಹಾಸಕಾರರು ಅಧ್ಯಯನ ಮಾಡಬೌದು' ಅಂತಂದ್ರು.

'ಯಪ್ಪಾ ಎಂತಾ ಯೇಚ್ನೆ ಸಾ ನಿಮ್ಮದು' ಅಂತ ವ್ಯಂಗ್ಯವಾಡಿದೆ.

'ಗುಂಡಿಗಳನ್ನ ಬಳಸಿಕೊಂಡು 'ಕ್ರಾಕ್ ಅಂಡ್ ಹೋಲ್, ಮೆರೆ ಸಂಗ್ ಹೋಲ್, ದುನಿಯ ಹೈ ಹೋಲ್' ಅಂತ ರಾಕ್ ಅಂಡ್ ರೋಲ್ ಡ್ಯಾನ್ಸ್ ಮಾಡಿ ಜಗತ್ತಿನ ಗಮನ ಸೆಳೀಬೈದು. ಇದು ಬ್ಯಾಡವಾ ಗುಂಡಿಗಳನ್ನ ಬಳಸ್ಗ್ಯಂಡು ಅಟ್ಟುಗುಳಿ ಮಣೆ ಥರ ಜಾನಪದ ಆಟ ಆಡಕ್ಕೆ ಅವಕಾಸ ಅದೆ' ಅಂದ್ರು.

'ಈ ಥರದ ಕಂತ್ರಿಕಾರಕ ವಿಚಾರಕ್ಕೆ ತಮಗೆ ಸ್ಫೂರ್ತಿ ಯಾರು ಸಾ?' ಅಂತ ಕೇಳಿದೆ.

'ರೋಡು ರಿಪೇರಿ ಮಾಡೋ ಯೇಗ್ತೆ ಇಲ್ಲದಿರೋ ಸರ್ಕಾರಕ್ಕೆ ಈ ಗ್ರಂಥ ಅರ್ಪಣೆ ಮಾಡ್ತೀನಿ!' ಅಂದ್ರು ಖುಷೀಲಿ.

'ಗುಂಡಿಗೆ ಬಿದ್ದು ಕೈಕಾಲು ಮುರಕಂಡೋರ ಪರವಾಗಿ ಕೇಸು ಹಾಕಿ ಕೋರ್ಟಿಗೆ, ಲಾಯರಿಗೆ ಕೆಲಸಾ ಕೊಡೋ ಹೋಲ್‌ಕಾಲ್ ಏಜೆಂಟು ವಿಚಾರಾನೂ ಸೇರಿಸ್ಕೋ ಬೊಡ್ಡಿಹೈದ್ನೆ' ಅನ್ನುತ್ತ ಕೈಗೆ ಬಡಿಗೆ ತಗೊಂಡ ಯಂಟಪ್ಪಣ್ಣನ ಕೋಪ ಎದುರಿಸಲಾಗದೆ ತುರೇಮಣೆ ಮೆಲ್ಲಗೆ ಅರುಗಾದರು.

ಸಂಗತ

ಬದಲಾಗುತ್ತಿವೆ ನಿರೀಕ್ಷೆಗಳು...

ಪರರ ಬಳಿ ಉದ್ಯೋಗ ಮಾಡುವ ಹಂಗಿಲ್ಲದೆ ಸ್ವತಂತ್ರವಾಗಿ ಬದುಕು ಕಟ್ಟಿಕೊಳ್ಳಲು ಹೊರಡುವ ಯುವಕರನ್ನು ಮದುವೆಯಾಗಲು ಹೆಣ್ಣು ಮಕ್ಕಳು ಮುಂದೆ ಬರುತ್ತಿಲ್ಲವೇಕೆ?

• ನಿರಂಜನ್

ಆ ಯುವಕನನ್ನು ಅನೇಕ ವರ್ಷಗಳಿಂದ ಬಲ್ಲೆ. ದಿನನಿತ್ಯ ತಳ್ಳುಗಾಡಿಯಲ್ಲಿ ನಮ್ಮ ಬಡಾವಣೆಯಲ್ಲಿ ಸೊಪ್ಪು ಮಾರುತ್ತಾನೆ. 'ಸೊಪ್ಪೂ' ಎಂಬ ಅವನ ಕೂಗು ಮಾಮೂಲಿಯಾಗಿದ್ದು, ಒಂದು ದಿನ ಅವನು ಬಾರದಿದ್ದರೆ ಗೊತ್ತಾಗುತ್ತದೆ.

ಈಚೆಗೆ ಮನೆ ಮುಂದೆ ನಿಂತ ಅವನು, 'ನನಗೆ ಸರ್ಕಾರಿ ಕಚೇರಿಯಲ್ಲಿ ಎಲ್ಲಿಯಾದರೂ ಒಂದು ಟೆಂಪರರಿ ಕೆಲಸ ಕೊಡಿಸಿ ಸಾರ್' ಎಂದ. ಅವನ ಈ ಬೇಡಿಕೆ ನನಗೆ ಅನಿರೀಕ್ಷಿತವಾಗಿತ್ತು. 'ಇಷ್ಟು ಚೆನ್ನಾಗಿ ಸೊಪ್ಪು ಮಾರುತ್ತೀಯ. ಇದೊಂದು ಸ್ವತಂತ್ರ ಉದ್ಯೋಗ. ಪ್ರತಿದಿನ ಮನೆಗೆ ಹೋಗುವಾಗ ಕೈಯಲ್ಲಿ ಖರ್ಚಿಗೆ ಕಾಸಿರುತ್ತದೆ. ನಿನಗೆ ಬೇಕಾದಷ್ಟು ದುಡಿಯಬಹುದು. ಇದನ್ನು ಬಿಟ್ಟು ಸರ್ಕಾರಿ ಜೀತಕ್ಕೆ ಅದರಲ್ಲೂ ಟೆಂಪರರಿ ಕೆಲಸಕ್ಕೆ ಬರ್ತೀನೆ ಅಂತೀಯಲ್ಲ, ಅಲ್ಲಿ ನಿನಗೆ ಸ್ವಾತಂತ್ರ್ಯ ಇರುತ್ತಾ, ನಾಳೆಯ ಬಗ್ಗೆ ವಿಶ್ವಾಸ ಇರುತ್ತಾ, ನೆಮ್ಮದಿಯಿಂದ ಜೀವನ ಕಟ್ಟಿಕೊಳ್ಳಲು ಸಾಧ್ಯವಾ' ಎಂದು ದೀರ್ಘ ಉಪನ್ಯಾಸ ನೀಡಿದೆ. ಅದನ್ನು ತುಂಡರಿಸುವ ಹಾಗೆ ಅವನು ಹೇಳಿದ. 'ಅದೆಲ್ಲ ಸರಿ ಸಾರ್, ಆದರೆ ಸೊಪ್ಪು ಮಾರುವವನಿಗೆ ಹೆಣ್ಣು ಕೊಡೋರು ಯಾರೂ ಇಲ್ವಲ್ಲಾ ಸಾರ್, ಎಲ್ಲ ಹೆಣ್ಣುಮಕ್ಕಳೂ ಸರ್ಕಾರಿ ಉದ್ಯೋಗಿಯನ್ನೇ ಬಯಸುತ್ತಾರೆ. ತಾತ್ಕಾಲಿಕವೋ ಕಾಯಂ ಕೆಲಸವೋ ಅಂತೂ ಸರ್ಕಾರಿ ನೌಕರಿ ಇಲ್ಲದವರಿಗೆ ಈಗ ಹೆಣ್ಣು ಸಿಗ್ತಿಲ್ಲ ಸಾರ್' ಎಂದು ಅಲವತ್ತುಕೊಂಡ.

ಇಂಥದ್ದೇ ಇನ್ನೊಂದು ಪ್ರಸಂಗವನ್ನು ಎದುರಿಸಿದ್ದೇನೆ. ವಿಶ್ವವಿದ್ಯಾಲಯವೊಂದರಲ್ಲಿ ತಾತ್ಕಾಲಿಕ ನೌಕರಿಗೆ ಕಷ್ಟಪಟ್ಟು ಒಬ್ಬ ಸೇರಿಕೊಂಡಿದ್ದ. ಅದಕ್ಕೆ ಯಾರಿಗೋ ಲಕ್ಷಾಂತರ ರೂಪಾಯಿ ಕೈಬಿಸಿ ಮಾಡಿದ್ದಾಗಿಯೂ ಹೇಳಿಕೊಂಡಿದ್ದ. ಇಲ್ಲಿಗೆ ಸೇರುವ ಮೊದಲು ಆತ ಖಾಸಗಿ ಷೋರೂಂ ಒಂದರಲ್ಲಿ ಒಳ್ಳೆಯ ಕೆಲಸದಲ್ಲಿ ಇದ್ದ. 'ಯಾಕಪ್ಪಾ ಅದನ್ನು ಬಿಟ್ಟು ಈ ಕಾರಕೂನಿಕೆಗೆ ಸೇರಿಕೊಂಡೆ? ಇಲ್ಲಿ ಕಾಯಂ ಆಗುವುದು ಇನ್ನು ಎಷ್ಟು ವರ್ಷಕ್ಕೋ! ಅದೂ ಗ್ಯಾರಂಟಿ ಯೇನಿಲ್ಲ. ಅಲ್ಲಿಯವರೆಗೂ ಭವಿಷ್ಯದ ನಂಬಿಕೆಯೇ ಇಲ್ಲದೆ ಜೀತದಾಳುಗಳಂತೆ ಕೆಲಸ ಮಾಡಬೇಕಲ್ಲಾ' ಅಂದೆ. 'ನಿಜ ಸಾರ್, ನನಗೆ ಇಲ್ಲಿಗಿಂತ ಹೆಚ್ಚು ಸಂಬಳ-ಸಾರಿಗೆ ಅಲ್ಲಿತ್ತು. ಆದರೂ ಪಾಲಕರ ಒತ್ತಾಯದ ಮೇಲೆ ಸರ್ಕಾರಿ ವ್ಯವಸ್ಥೆಗೆ ಬರಬೇಕಾಯ್ತು. ಯಾಕೆಂದರೆ ನನಗೆ ಮೂವತ್ತರ ಮೇಲಾದರೂ ಇನ್ನೂ ಮದುವೆಯಿಲ್ಲ. ನಮ್ಮಲ್ಲಿ ಯಾವ ಹುಡುಗಿಯೂ ಖಾಸಗಿ ಕಂಪನಿ ಎಂದರೆ ಒಪ್ಪುತ್ತಿಲ್ಲ. ತಾತ್ಕಾಲಿಕವಾದರೂ ಸರಿ ಸರ್ಕಾರಿ ಸೇವೆಗೆ ಸೇರು ಅಂತ ಪಾಲಕರು ಗಂಟು ಬಿದ್ದರು. ಇಲ್ಲಿಯ ತಾತ್ಕಾಲಿಕ ಸಂಬಳ ನನಗೆ ಯಾತಕ್ಕೂ ಸಾಲುತ್ತಿಲ್ಲ. ಮದುವೆಯೊಂದು ಆದರೆ ಮತ್ತೆ ನಾನು ಕಂಪನಿಗೇ ಹೋಗುತ್ತೇನೆ' ಎಂದ. 'ಹಾಗೆ ಮಾಡಿದರೆ ಹುಡುಗಿಗೆ ಮೋಸ ಮಾಡಿದಂತೆ ಅಲ್ವಾ' ಎಂಬ ನನ್ನ ಪ್ರಶ್ನೆಗೆ ಅವನ ಬಳಿ ಉತ್ತರವಿರಲಿಲ್ಲ.

ಸರ್ಕಾರಿ ಸೇವೆಯಲ್ಲಿರುವ ಇನ್ನೊಬ್ಬ ತಾತ್ಕಾಲಿಕ ನೌಕರ ಇತ್ತೀಚೆಗೆ ಮನವಿ ಹಿಡಿದು ಬಂದ. ಅವನ ಒತ್ತಾಯ- 'ಸರ್ ನನಗೆ ವಯಸ್ಸಾಗುತ್ತಿದೆ. ಹುಡುಗಿಯನ್ನು ನೋಡಲು ಹೋದರೆ ನೌಕರಿ ಕಾಯಂ ಆಗಿದೆಯಾ ಅಂತ ಕೇಳುತ್ತಾರೆ. ತಾತ್ಕಾಲಿಕ ಎಂದರೆ ಮುಖ ತಿರುಗಿಸಿ ನಡೆಯುತ್ತಾರೆ. ನನಗೆ ಒಂದು ಮದುವೆ ಆಗಬೇಕಾದರೆ ಕಾಯಂ ಮಾಡಿಸಲು ಸಹಾಯ ಮಾಡಿ ಪುಣ್ಯ ಕಟ್ಟಿಕೊಳ್ಳಿ'.

ನನಗೆ ಗೊತ್ತಿರುವಂತೆ ಬೆಂಗಳೂರು, ಮೈಸೂರು ಸೇರಿದಂತೆ ಕರ್ನಾಟಕದ ಅನೇಕ ನಗರಗಳಲ್ಲಿ ದೇವಸ್ಥಾನಗಳಲ್ಲಿ ಪೂಜೆ ಮಾಡುವ ಮಲೆನಾಡಿನ ಸಹಸ್ರಾರು ಹುಡುಗರಿದ್ದಾರೆ. ಅವರು ವೇದ-ಮಂತ್ರ ಕಲಿತು ಬಂದವರು. ವಿದ್ಯಾವಂತರು ಹೆಚ್ಚಿದಷ್ಟೂ ಸಮಾಜದಲ್ಲಿ ಅವರ ಅಗತ್ಯ ಹೆಚ್ಚುತ್ತಿರುವುದರಿಂದ ವೈದಿಕ ಕಾರ್ಯಗಳನ್ನು ಸಾಗಿಸಲು ಅವರಿಗೆ ದಿನಂಪ್ರತಿ ಕೆಲಸವಿರುತ್ತದೆ. ಒಂದು ದಿನವೂ ಖಾಲಿ ಕೂರಬೇಕಾದ ಪ್ರಮೇಯವಿಲ್ಲ. ಜುಯ್ ಅಂತ ಕಾರು-ಬೈಕುಗಳಲ್ಲಿ ಬರುತ್ತಾರೆ. ನೀವು ಹೇಳಿದ ದೇವರ ಕಾರ್ಯ ಮಾಡಿಸುತ್ತಾರೆ, ನಿಗದಿತ ದಕ್ಷಿಣೆ ಪಡೆದು ತೆರಳುತ್ತಾರೆ. ಯಾರ ಹಂಗೂ ಇಲ್ಲ. ಯಾರಿಗೂ ಜೀಯಾ ಎನ್ನಬೇಕಿಲ್ಲ. ದೊಡ್ಡ ನಗರದಲ್ಲಿ ಗೌರವದ ಸಂಪಾದನೆ ಅವರದಾಗಿದೆ. ಅವರಿಗೆ ಜೀವನಕ್ಕೆ ಯಾವುದೇ ಕೊರತೆಯಿಲ್ಲ. ಆದರೆ ಬಹಳಷ್ಟು ಯುವಕರಿಗೆ ಮದುವೆಯಿಲ್ಲ! ಯಾಕೆಂದರೆ ಪುರೋಹಿತರಿಗೆ ಹುಡುಗಿ ಸಿಗುತ್ತಿಲ್ಲ!



ಇನ್ನು ಹಳ್ಳಿಗಳಿಗೆ ಹೋದರೆ ಪರಂಪರಾಗತ ಕೃಷಿಯನ್ನು ನಂಬಿ ಬದುಕು ಮಾಡುವ ಸಹಸ್ರಾರು ಯುವಕರು ಇದ್ದಾರೆ. ಇವರಿಗೆ ನಗರದ ಜಂಜಾಟ ಬೇಡ. 'ಕಷ್ಟವೋ ನಷ್ಟವೋ ಕೃಷಿಯನ್ನೇ ನಂಬಿ ಜೀವನ ಮಾಡುತ್ತೇನೆ, ಸ್ವತಂತ್ರವಾಗಿ ಬದುಕು ಮಾಡುತ್ತೇನೆ' ಎಂಬ ಹಟ ಅವರಿಗಿದೆ. ಕೋವಿಡ್ ಬಳಿಕವಂತೂ ಅನೇಕ ವಿದ್ಯಾವಂತರಿಗೆ ಹಳ್ಳಿಯ ಬದುಕಿನ ಮೌಲ್ಯ ಅರ್ಥವಾಗಿದೆ. ಸಾಫ್ಟ್‌ವೇರ್ ಕೆಲಸವನ್ನು ತೊರೆದು ಹಳ್ಳಿಗಳಿಗೆ ಮರಳಿ ಬದುಕು ಕಟ್ಟಿಕೊಳ್ಳಲು ಶ್ರಮಿಸುತ್ತಿರುವ ಅನೇಕ ಯುವಕರು ಇದ್ದಾರೆ. ಆದರೆ ಕೃಷಿಯನ್ನೇ ನಂಬಿ ಹಳ್ಳಿಯಲ್ಲಿ ಉಳಿದ ಹುಡುಗರ ಸಮಸ್ಯೆಯೆಂದರೆ ಅವರಿಗೆ ಹೆಣ್ಣು ಕೊಡುವವರಿಲ್ಲ! ಹುಡುಗಿಯರಿಗೆ ಹಳ್ಳಿಗಳಲ್ಲಿ ಇರುವವರು ಬೇಡವಂತೆ!

ಅಂತೂ ಸಮಕಾಲೀನ ಸಮಾಜದಲ್ಲಿ ಹೆಣ್ಣುಮಕ್ಕಳ ನಿರೀಕ್ಷೆಗಳು ಬದಲಾಗುತ್ತಿವೆ. ಮುಂದೇನು ದಾರಿ?

ವಾಚಕರ ವಾಣಿ

ದುರ್ಬಲ ಸೇತುವೆಗಳ ದುರಸ್ತಿಯಾಗಲಿ

ಗುಜರಾತ್‌ನಲ್ಲಿ ಸೇತುವೆ ಕುಸಿದು ಹಲವಾರು ಮಂದಿ ಸಾವಿಗೀಡಾಗಿರುವುದು ಅತೀವ ದುಃಖದ ಸಂಗತಿ. ಇಂತಹದ್ದೊಂದು ದುರಂತಕ್ಕೆ ಕಾರಣವಾದ ಆ ಸೇತುವೆ ಹಾಳಾಗಿದ್ದನ್ನು ಅರಿಯಲಾಗದ ಅಧಿಕಾರಸ್ಥರು ಬೇರೆ ಏನನ್ನು ಸಾಧಿಸುತ್ತಾರೆ? ಇದು ಬೇರೆ ರಾಜ್ಯಗಳಿಗೂ ಪಾಠ ಆಗಬೇಕು. ಹಳೆಯ ಸೇತುವೆಗಳನ್ನು ಹುಡುಕಿ, ಅವುಗಳ ಸ್ಥಿತಿ ಅರಿಯಬೇಕು. ಅಗತ್ಯವಿದ್ದರೆ ದುರಸ್ತಿ ಮಾಡಿಸಬೇಕು. ಇಂದು, ನಾಳೆ ಮುರಿದುಬೀಳಬಹುದು ಎಂಬುದನ್ನು ಗಮನಿಸಿಯೂ ದುರಸ್ತಿ ಕಾರ್ಯಕ್ಕೆ ವಿಳಂಬ ಮಾಡಿದರೆ ಇದೇ ರೀತಿ ಸಾವುನೋವುಗಳಾಗುವುದು ಖಚಿತ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಕನ್ನಡ ಪುಸ್ತಕಕ್ಕೆ ಬೇಕು ರಿಯಾಯಿತಿ

ಕರ್ನಾಟಕ ರಾಜ್ಯೋತ್ಸವ ಆಚರಣೆಯ ಈ ಸಂದರ್ಭದಲ್ಲಿ ಪುಸ್ತಕಗಳು ರಿಯಾಯಿತಿ ದರದಲ್ಲಿ ದೊರೆಯುವಂತೆ ಆಗಬೇಕು. ಅನೇಕ ವಿಶ್ವವಿದ್ಯಾಲಯಗಳು ಪ್ರಕಟಿಸಿರುವ ಪುಸ್ತಕಗಳು, ಪುಸ್ತಕಗಳನ್ನು ಮಾರಾಟ ಮಾಡುವವರು, ಪ್ರಕಾಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಸಂಘ- ಸಂಸ್ಥೆಗಳ ಪ್ರಕಟಣೆಯ ಪುಸ್ತಕಗಳನ್ನು ಒಂದು ತಿಂಗಳು ವಿಶೇಷ ರಿಯಾಯಿತಿ ದರದಲ್ಲಿ ಮಾರಾಟ ಮಾಡಬೇಕು ಅಥವಾ ಓದುಗರಿಗೆ ಬೇಕಾದ ಪುಸ್ತಕಗಳನ್ನು ಅಂಚೆ ಇಲಾಖೆಯು ಅಂಚೆ ವೆಚ್ಚವಿಲ್ಲದೆ ಮನೆಗೆ ತಲುಪಿಸುವಂತೆ ಆಗಬೇಕು.

ಎಚ್.ಮಲ್ಲಿಕಾರ್ಜುನ, ಹರಪನಹಳ್ಳಿ

ಜಾತ್ಯತೀತ ಮೌಲ್ಯವಿಲ್ಲದ 'ಜಾತ್ಯತೀತ' ಪಕ್ಷ!

ಮುಂಬರುವ ವಿಧಾನಸಭಾ ಚುನಾವಣೆಯ ಟಿಕೆಟ್ ಹಂಚಿಕೆಯಲ್ಲಿ ವೀರಶೈವ- ಲಿಂಗಾಯತ ಸಮುದಾಯದವರಿಗೆ ಹೆಚ್ಚಿನ ಆದ್ಯತೆ ನೀಡುವುದಾಗಿ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ (ಪ್ರ.ವಾ., ಅ. 31). ಜೆಡಿಎಸ್ ಪಕ್ಷದ ಹೆಸರಿನಲ್ಲಿಯೇ ಜಾತ್ಯತೀತ ಮೌಲ್ಯದ ಬದ್ಧತೆ ಇದೆ. ಜಾತ್ಯತೀತ ಮೌಲ್ಯ ನಮ್ಮ ಸಂವಿಧಾನದ ಬಹುದೊಡ್ಡ ಮೌಲ್ಯವೂ ಹೌದು. ಜೆಡಿಎಸ್ ಪಕ್ಷ ಹುಟ್ಟಿದಾಗ ಅಂಥದ್ದೊಂದು ಮೌಲ್ಯವನ್ನು ಉಳಿಸಿ ಬೆಳೆಸುವ ಸಂಕಲ್ಪವನ್ನು ಹೊಂದಲಾಗಿತ್ತು. ಆದರೆ ಈಗ ಅದೇ ಪಕ್ಷವು ಜಾತ್ಯತೀತ ಮೌಲ್ಯಕ್ಕೆ ಅಪಚಾರವಾಗುವಂತೆ ಜಾತಿ ಆಧಾರದ ಮೇಲೆ ಟಿಕೆಟ್ ಹಂಚುವುದು ಸರಿಯಲ್ಲ.

ಬೇರೆ ಯಾವುದೇ ಪಕ್ಷ ಈ ರೀತಿ ಮಾಡಿದರೆ ಅದೂ ದೇಶದ ಸಂವಿಧಾನಕ್ಕೆ ಮಾಡುವ ಅಪಚಾರವಾಗುತ್ತದೆ. ದೇಶದ ಮತದಾರರು ಜಾತೀಯತೆಯಿಂದ ರೋಸಿ ಹೋಗಿದ್ದಾರೆ. ಜೆಡಿಎಸ್ ಆದರೂ ಜಾತ್ಯತೀತ ಮೌಲ್ಯಕ್ಕೆ ಬದ್ಧವಾಗಿ ನಿಂತರೆ ಅದಕ್ಕೆ ಒಳ್ಳೆಯ ಭವಿಷ್ಯ ಇರುತ್ತದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ನಾಡಿನ ಘನ ಪರಂಪರೆ ಸ್ಮರಿಸೋಣ

ಎರಡು ಸಾವಿರಕ್ಕೂ ಅಧಿಕ ವರ್ಷಗಳ ಇತಿಹಾಸವುಳ್ಳ, ಶಾಸ್ತ್ರೀಯ ಸ್ಥಾನಮಾನ ಪಡೆದ ನಮ್ಮ ಹೆಮ್ಮೆಯ 'ಕನ್ನಡ ಭಾಷೆ' ಕೇವಲ ನಮಗೆ ಭಾಷೆಯಲ್ಲ, ನಮ್ಮ ಸ್ವಾಭಿಮಾನದ ಪ್ರತೀಕ, ನಮ್ಮ ಭಾವನೆಗಳ ಪಾರಮಾರ್ಥಿಕ ಸಂಕೇತವೂ ಹೌದು. ಚೆನ್ನಮ್ಮಾಜಿಯ ಸಾಹಸಗಾಥೆ, ರಾಯಣ್ಣನ ಶೌರ್ಯ, ಪರಾಕ್ರಮ ಹಾಗೂ ಗುರು ಬಸವಣ್ಣನವರ ವಚನಸುಧೆ, ಕದಂಬರ ಕನ್ನಡ ಪ್ರೇಮ, ಶ್ರೀಕೃಷ್ಣದೇವರಾಯನ ಶ್ರೀಮಂತ ಸಾಮ್ರಾಜ್ಯ, ದಕ್ಷಿಣಾಧಿಪತಿಯಾಗಿ ಅಫ್ಘಾನಿಸ್ತಾನದವರೆಗೂ ಆಳಿದ ಕನ್ನಡ ದೊರೆ ಇಮ್ಮಡಿ ಪುಲಿಕೇಶಿ, ಕವಿ ಕಾಳಿದಾಸ, ರನ್ನ, ಪಂಪನ ಆದಿಯಾಗಿ ಕುವೆಂಪು, ಕಂಬಾರರವರೆಗೂ ಛಾಪು ಮೂಡಿಸಿರುವ ಕನ್ನಡದ ಹಿರಿಮೆ ಅನಂತವಾದುದು.

ರಾಜ್ಯೋತ್ಸವದ ಈ ಸುಸಂದರ್ಭದಲ್ಲಿ ನಮ್ಮ ನಾಡಿನ ಭವ್ಯ ಪರಂಪರೆಯನ್ನು ಸ್ಮರಿಸುವ ಕೆಲಸವಾಗಬೇಕು. ನಾಡಿಗಾಗಿ ಹೋರಾಡಿದ ಮಹನೀಯರ ವಿಚಾರಗಳನ್ನು ಯುವಜನತೆ ಮೈಗೂಡಿಸಿಕೊಳ್ಳಬೇಕು. ಗಡಿ ಭಾಗಗಳಲ್ಲಿ, ಕನ್ನಡವನ್ನು ಕಡೆಗಣಿಸಲಾಗುತ್ತಿರುವ ಪ್ರದೇಶಗಳಲ್ಲಿಯೂ ಕನ್ನಡ ಡಿಂಡಿಮ ಮೊಳಗಲು ನಾವೆಲ್ಲ ಇಂದು ಶ್ರಮಿಸಬೇಕಾಗಿದೆ. ಕೇಂದ್ರ ಸರ್ಕಾರಿ ಹುದ್ದೆಗಳಿಗೆ ಕನ್ನಡ ಭಾಷೆಯಲ್ಲಿ ಪರೀಕ್ಷೆ ನಡೆಸಲು ನಾವೆಲ್ಲ ಹೋರಾಡಬೇಕಿದೆ. ಕನ್ನಡದ ಕಂಪು ಜಗದಗಲ ಸುವಾಸನೆ ಬೀರಲಿ, ರಾಜ್ಯೋತ್ಸವವು ನಾಡಿನ ನಿತ್ಯೋತ್ಸವವಾಗಿ ಬದಲಾಗಲಿ.

ಲೋಹಿತ ರಾಮಣ್ಣಾ ಹಸೂರೆ, ಹೊನ್ನಿಹಳ್ಳಿ, ಹುಕ್ಕೇರಿ

ಕುಲಾಂತರಿ ಸಾಸಿವೆ: ಅಧ್ಯಯನ ನಡೆಯಲಿ

ಕುಲಾಂತರಿ ಸಾಸಿವೆಗೆ ಅನುಮತಿ ನೀಡಿರುವ ಸುದ್ದಿಯನ್ನು (ಪ್ರ.ವಾ., ಅ. 28) ಕರ್ನಾಟಕದ ರೈತರು, ಬಳಕೆದಾರರು ಅಷ್ಟು ಗಂಭೀರವಾಗಿ ಪರಿಗಣಿಸಿರಲಿಕ್ಕಿಲ್ಲ. ಇಲ್ಲಿ ಸಾಸಿವೆಯನ್ನು ಅಡುಗೆ ಎಣ್ಣೆಯಾಗಿ ಬಳಸುವುದು ಅಪರೂಪ, ಒಗ್ಗರಣೆಗೆ ಅದರ ಬೀಜ ಬಳಸುತ್ತಾರೆ ಅಷ್ಟೆ. ಎಣ್ಣೆಬೀಜದ ಬೆಳೆಗಳಲ್ಲಿ ಅದು ಮುಖ್ಯವಲ್ಲ, ಅಕ್ಕಡಿ ಬೆಳೆಯಾಗಿ ಕೆಲವೆಡೆ ಕಾಣುತ್ತದೆ. ಆವಕಾಯ (ಸಾಸಿವೆ ಉಪ್ಪಿನಕಾಯಿ) ನೆರೆ ರಾಜ್ಯದ ವಿಶೇಷ.

ಬಿ.ಟಿ ಬದನೆಯ ವಿವಾದವನ್ನು ಹಾಗೇ ಇಟ್ಟು ಸಾಸಿವೆಗೆ ಅನುಮತಿ ನೀಡಿರುವುದು ಗಮನಾರ್ಹ. ಇಳುವರಿ ಹೆಚ್ಚು ಎಂಬ ಕಾರಣ ಉಲ್ಲೇಖಿಸಲಾಗಿದೆ. ಸಂಶೋಧಕರು ರೋಗನಿರೋಧ ಗುಣ ಸೇರಿಸುವ ಮಾತಾಡಿದ್ದಾರೆ. ಸಾವಿಲ್ಲದ ಮನೆಯ ಸಾಸಿವೆ ಸಿಗದಿರುವಂತೆ ಕೀಟ, ರೋಗ ಇರದ ಆಹಾರ ಬೆಳೆಯೂ ಸಿಗದು. ಉತ್ತರ, ಪೂರ್ವ ಭಾರತದ ರಾಜ್ಯಗಳಲ್ಲಿ ಬೇಡಿಕೆ ಇದೆ. ಆದರೆ ಉಕ್ರೇನ್, ನೇಪಾಳ, ಕೆನಡಾದಿಂದ ಸಾಸಿವೆ ಎಣ್ಣೆಯನ್ನು ಆಮದು ಮಾಡಿಕೊಳ್ಳಬೇಕಾಗಿದೆ. ಒಂದು ಸರ್ವೆ ಪ್ರಕಾರ, ಶೇ 25ರಷ್ಟು ಭಾರತೀಯ ಕುಟುಂಬಗಳು ಸೂರ್ಯಕಾಂತಿ ಎಣ್ಣೆ ಬಳಸುತ್ತಿವೆ. ಆದರೆ ಪಂಜಾಬ್, ರಾಜಸ್ಥಾನ, ಉತ್ತರಪ್ರದೇಶದಂತಹ ರಾಜ್ಯಗಳಲ್ಲಿ ಸಾಸಿವೆಗೆ ಪರ್ಯಾಯ ಎಣ್ಣೆಗಳು ಹೆಚ್ಚಿನ ಜನಾದರಣೆ ಪಡೆದಿಲ್ಲ. ಒಟ್ಟಾರೆ ಈ ವಿಷಯವನ್ನು ಪ್ರಾದೇಶಿಕ ಹಾಗೂ ಸೈದ್ಧಾಂತಿಕಗೊಳಿಸದೆ, ಬೇರೆ ಬೆಳೆಗಳ ಮೇಲೆ ಹಾಗೂ ಖಾದ್ಯ ಎಣ್ಣೆಯ ಬಳಕೆಯಿಂದ ಆರೋಗ್ಯದ ಮೇಲೆ ಏನು ಪರಿಣಾಮ ಎಂಬುದನ್ನು ಎರಡು ವರ್ಷಗಳಲ್ಲಿ ಅಧ್ಯಯನ ಮಾಡಬೇಕು. ಇದರಲ್ಲಿ ಸಂಬಂಧಿಸಿದವರನ್ನೆಲ್ಲ ಸೇರಿಸಿಕೊಂಡರೆ ವಿಶ್ವಾಸಾರ್ಹತೆ ಮೂಡುತ್ತದೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನಾಡು ನುಡಿಯ ಮುಕುಟ ಮಣಿ

ಅಮೃತ ಸಂಭ್ರಮದಲ್ಲಿ ರಾಜ್ಯೋತ್ಸವ ಸಡಗರ

1957ರಲ್ಲಿ ರಾಜ್ಯೋತ್ಸವದ ಮೊದಲ ವಾರ್ಷಿಕೋತ್ಸವವನ್ನು ಕಚೇರಿಯಲ್ಲಿ ಸಡಗರದಿಂದ ಆಚರಿಸಿದ್ದ ಪ್ರಜಾವಾಣಿಗೆ ಈಗ ಅಮೃತ ಮಹೋತ್ಸವದ ಸಂಭ್ರಮ. ಈ ಇಷ್ಟೂ ವರ್ಷಗಳಲ್ಲಿ ಪತ್ರಿಕೆಯು ಕನ್ನಡದ ಧ್ವನಿಯಾಗಿ ಕೆಲಸ ಮಾಡಿದ ಹೆಮ್ಮೆ ಹೊಂದಿದೆ. ರಾಜ್ಯೋತ್ಸವ ಮತ್ತೆ ಬಂದಿದೆ. ಕನ್ನಡಕ್ಕಾಗಿ ಪತ್ರಿಕೆ ಎತ್ತಿದ ಧ್ವನಿಯನ್ನು ನೆನಪಿಸಿಕೊಳ್ಳುವ ಒಂದು ಪ್ರಯತ್ನ ಇಲ್ಲಿದೆ












ಚಳವಳಿ ಸಂದರ್ಭದಲ್ಲಿ ಪ್ರಕಟವಾದ ಪತ್ರಿಕೆಯ ಕೆಲವು ಮುಖಪುಟಗಳು   ಚಿತ್ರಗಳು: ಪ್ರಜಾವಾಣಿ ಆರ್ಕೈವ್ಸ್

● ಹಮೀದ್ ಕೆ.

ದೇಶವು ಸ್ವಾತಂತ್ರ್ಯಗೊಂಡ ಕೆಲವೇ ತಿಂಗಳಲ್ಲಿ ಹುಟ್ಟಿಕೊಂಡ ಪ್ರಜಾವಾಣಿ ಪತ್ರಿಕೆಯು, ಕರ್ನಾಟಕ ಏಕೀಕರಣ ಹೋರಾಟದ ಸಂದರ್ಭದಲ್ಲಿ ಅಂಬೆಗಾಲಿಕ್ಕಿ ಮುಂದಕ್ಕೆ ಸಾಗುತ್ತಿತ್ತು. ಏಕೀಕರಣ ಚಳವಳಿಯ ಸಂದರ್ಭದಲ್ಲಿ ಹೋರಾಟದ ಬಗೆಗಿನ ಸುದ್ದಿಯನ್ನು ಹೆಚ್ಚು ಮಹತ್ವ ಕೊಟ್ಟು ಪತ್ರಿಕೆಯು ಪ್ರಕಟಿಸಿದೆ. ಸುತ್ತಲಿನ ರಾಜ್ಯಗಳಲ್ಲಿ ಚದುರಿ ಹೋಗಿದ್ದ, ಕನ್ನಡ ಭಾಷೆ ಮಾತನಾಡುವ ಪ್ರದೇಶಗಳು ಒಂದಾಗಬೇಕಾದ ಕುರಿತು ಜನಜಾಗೃತಿ ಮೂಡಿಸುವ ಕೆಲಸವನ್ನು ಪತ್ರಿಕೆಯು ಆ ದಿನಗಳಲ್ಲಿ ಮಾಡಿತ್ತು. ಹೋರಾಟ ಆರಂಭಗೊಂಡ ಕೆಲವೇ ತಿಂಗಳಲ್ಲಿ ಹೋರಾಟಕ್ಕೆ ಯಶಸ್ಸು ದೊರೆಯಲು ಜನರಲ್ಲಿ ಮೂಡಿದ್ದ ಜಾಗೃತಿಯೂ ಒಂದು ಕಾರಣ. 1956ರ ನವೆಂಬರ್ 1ರಂದು 'ಚೆಲುವ ಕನ್ನಡ ನಾಡಿನ ಉದಯ'ವಾಯಿತು. 'ಚೆಲುವ ಕನ್ನಡ ನಾಡಿನ ಉದಯವಾಯಿತು' ಎಂಬುದೇ ಅಂದಿನ ಪತ್ರಿಕೆಯ ಮುಖಪುಟದ ಸುದ್ದಿಯ ಶೀರ್ಷಿಕೆಯಾಗಿತ್ತು.

ಕನ್ನಡ ರಾಜ್ಯೋತ್ಸವದ ಮೊದಲ ವಾರ್ಷಿಕೋತ್ಸವವನ್ನು 1957ರಲ್ಲಿ ಪ್ರಜಾವಾಣಿ ಕಚೇರಿಯಲ್ಲಿ ಸಡಗರದಿಂದಲೇ ಆಚರಿಸಿದ್ದು ಕನ್ನಡದ ಕುರಿತು ಪತ್ರಿಕೆಯು ಇರಿಸಿದ್ದ ಕಕ್ಕುಲಾತಿಯ ಪ್ರತೀಕವಷ್ಟೇ ಅಲ್ಲ, ಸರ್ಕಾರವು ಅದನ್ನು ಆಚರಿಸಿಲ್ಲ ಎಂಬುದರ ವಿರುದ್ಧದ ಪ್ರತಿಭಟನೆಯೂ ಆಗಿತ್ತು. 'ಕನ್ನಡ ರಾಜ್ಯೋದಯ ವಾರ್ಷಿಕೋತ್ಸವ ರಾಜ್ಯದ ಎಲ್ಲೆಲ್ಲೂ ಭಾರಿ ಉತ್ಸಾಹದಿಂದ ಮತ್ತು ಅಧಿಕೃತವಾಗಿ ನಡೆಯಬೇಕಿತ್ತೆಂದೂ, ಆದರೆ ಆ ರೀತಿ ಉತ್ಸವ ನಡೆಯುತ್ತಿಲ್ಲ' ಎಂದೂ ಆಗ ಸಂಪಾದಕರಾಗಿದ್ದ ಟಿ.ಎಸ್. ರಾಮಚಂದ್ರರಾವ್ ಅವರು ಸಮಾರಂಭದಲ್ಲಿ ಬೇಸರ ವ್ಯಕ್ತಪಡಿಸಿದ್ದು ಪತ್ರಿಕೆಯಲ್ಲಿ ವರದಿಯಾಗಿತ್ತು.



ರಾಜ್ಯೋತ್ಸವದ ಮೊದಲ ವಾರ್ಷಿಕೋತ್ಸವವು ಪ್ರಜಾವಾಣಿ ಕಚೇರಿಯಲ್ಲಿ ನಡೆದ ಸಂದರ್ಭ. ಎಂಪಿಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಎಫ್. ಪಾಟೀಲ್, ಸಚಿವರಾದ ಎಚ್.ಎಸ್. ರುದ್ರಪ್ಪ, ಕೆ.ಎಚ್. ವೀರಣ್ಣ ಗೌಡ, ಪತ್ರಕರ್ತ ವೀರಕೇಸರಿ ಸೀತಾರಾಮ ಶಾಸ್ತ್ರಿ ಉಪಸ್ಥಿತರಿದ್ದರು

ನಾಡು ನುಡಿಯ ಪರವಾದ ಚಳವಳಿ, ಹೋರಾಟಗಳಿಗೆ ನಾಡಿನ ಪತ್ರಿಕೆಗಳು ಧ್ವನಿಯಾಗಲೇಬೇಕು. ಈ ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ ಪ್ರಜಾವಾಣಿಯು ಎಂದೂ ಹಿಂಜರಿದದ್ದೇ ಇಲ್ಲ. ಅತೀವ ಎಚ್ಚರದಲ್ಲಿಯೇ ಹೋರಾಟ ಮತ್ತು ಚಳವಳಿಗಳನ್ನು ಮುಖಾಮುಖಿಯಾಗಿದೆ. ಎಚ್ಚರಿಕೆಯ ಮಾತುಗಳ ಮೂಲಕ ಚಳವಳಿಯ ಬೌದ್ಧಿಕ ಎಚ್ಚರವು ಸದಾ ಎತ್ತರದಲ್ಲಿಯೇ ಇರಲು ನೆರವಾಗಿದೆ. ಕನ್ನಡದ ಇತಿಹಾಸದಲ್ಲಿ ಗೋಕಾಕ ಚಳವಳಿಯದ್ದು ಅಚ್ಚಳಿಯದ ಪಾತ್ರ. ಶಾಲಾ ಶಿಕ್ಷಣದಲ್ಲಿ ಸಂಸ್ಕೃತ ಹೇರಿಕೆಯ ವಿರುದ್ಧ ಮತ್ತು ಕನ್ನಡಕ್ಕೆ ಮೊದಲ ಸ್ಥಾನ ನೀಡುವುದಕ್ಕಾಗಿ 1982ರ ಏಪ್ರಿಲ್ 2ರಂದು ಚಳವಳಿ ಆರಂಭಗೊಂಡಿತು. ಚಳವಳಿ ಆರಂಭದ ಮುನ್ನಾದಿನವಾದ ಏಪ್ರಿಲ್ 1ರ ಪ್ರಜಾವಾಣಿಯಲ್ಲಿ ಚಳವಳಿ ಕುರಿತು ಮೂರು ಸುದ್ದಿಗಳು ಪ್ರಕಟವಾಗಿದ್ದವು.

ಗೋಕಾಕ ಚಳವಳಿಯ ಸಂದರ್ಭದಲ್ಲಿ, ಕೆ.ಎನ್. ಹರಿಕುಮಾರ್ ಅವರು 'ಭಾಷೆ ಮತ್ತು ಪ್ರಜಾಪ್ರಭುತ್ವ' ಎಂಬ ಶೀರ್ಷಿಕೆಯ ಲೇಖನವನ್ನು ಬರೆದು ಮೂರು ಕಂತುಗಳಲ್ಲಿ ಪ್ರಕಟಿಸಿದ್ದರು. ಭಾಷೆಗೆ ಸಂಬಂಧಿಸಿದ ಚಳವಳಿಯು ಭಾಷಾ ದುರಭಿಮಾನ ಆಗಬಾರದು ಎಂಬ ಎಚ್ಚರದ ಧ್ವನಿಯು ಈ ಲೇಖನದಲ್ಲಿ ಇತ್ತು. ಭಾಷೆಯ ಕುರಿತು ಸುದೀರ್ಘ ಚರ್ಚೆಗೆ ಈ ಲೇಖನವು ಕಾರಣವಾಯಿತು. ಆಗ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷರಾಗಿದ್ದ ಹಂಪ ನಾಗರಾಜಯ್ಯ ಅವರು ಬರೆದ 'ಸಮಂಜಸವಲ್ಲದ ಸಂದೇಹಗಳು' ಎಂಬ ದೀರ್ಘ ಪತ್ರವು ಪ್ರಜಾವಾಣಿಯಲ್ಲಿ ಪ್ರಕಟವಾಗಿತ್ತು. ಹರಿಕುಮಾರ್ ಅವರ ಲೇಖನದಲ್ಲಿ ಇದ್ದ ಸಂದೇಹಗಳಿಗೆ ನಾಗರಾಜಯ್ಯ ಅವರು ಸ್ಪಷ್ಟೀಕರಣಗಳನ್ನು ನೀಡಿದ್ದರು.

ಆದರೆ, ಹರಿಕುಮಾರ್ ವ್ಯಕ್ತಪಡಿಸಿದ್ದ ಅಭಿಪ್ರಾಯಗಳಿಗೆ ದೊಡ್ಡಮಟ್ಟದ ಬೆಂಬಲವೂ ವ್ಯಕ್ತವಾಗಿತ್ತು.

ಸಾಹಿತಿ ಯು.ಆರ್. ಅನಂತಮೂರ್ತಿ ಅವರು ಬರೆದ 'ಭಾಷೆ ಮತ್ತು ಸಂಸ್ಕೃತಿ' ಎಂಬ ಲೇಖನವು ಸಂಪಾದಕೀಯ ಪುಟದಲ್ಲಿ ಏಪ್ರಿಲ್ 10ರಂದು ಪ್ರಕಟವಾಗಿ ಹರಿಕುಮಾರ್ ಅವರು ಎತ್ತಿದ್ದ ಕಳವಳಗಳ ಕುರಿತ ಚರ್ಚೆಯು ಎಷ್ಟು ಅಗತ್ಯವಾಗಿದೆ ಎಂಬುದರತ್ತ ಬೆಳಕು ಚೆಲ್ಲಿತು. 'ಗೋಕಾಕ ವರದಿಯಿಂದ ವಿವಾದ ಎದ್ದಿರುವುದಕ್ಕೆ ಮುಖ್ಯ ಕಾರಣವೆಂದರೆ ಭಾಷಾ ಅಲ್ಪಸಂಖ್ಯಾತರಿಗೆ ತಾವು ಇಂಗ್ಲಿಷ್ ಕಲಿಕೆಯಿಂದ ವಂಚಿತರಾಗಿಬಿಡಬಹುದೆಂಬ ಆತಂಕ. ಇದು ಸಹಜವಾದ ಆತಂಕವೇ' ಎಂದು ಅನಂತಮೂರ್ತಿ ಬರೆದಿದ್ದರು.

'ಗೋಕಾಕ ಸಮಿತಿಯ ವರದಿಯನ್ನು ಬೆಂಬಲಿಸುತ್ತಿರುವ ಸಾಹಿತಿ ಮಿತ್ರರು ನಾಡಿನ ಸಾಂಸ್ಕೃತಿಕ ಸಮಸ್ಯೆಗಳನ್ನು ಕಡೆಗಣಿಸಿದ್ದಾರೆ. ಚಳವಳಿ ಮೇಲುನೋಟಕ್ಕೆ ಆಕರ್ಷಕವಾಗಿ ತೋರುತ್ತಿದ್ದರೂ ಆಂತರ್ಯದಲ್ಲಿ ಭಾಷಾ ವಿದ್ವೇಷಕ್ಕೂ ಅಲ್ಪಸಂಖ್ಯಾತರ ಹಿತಾಸಕ್ತಿಗಳಿಗೆ ವಿರೋಧವಾಗಿರುವುದನ್ನು ಸಂವೇದನಾಶೀಲರೆಲ್ಲರೂ ಆಲೋಚಿಸುವುದಕ್ಕೆ ತಕ್ಕುದಾಗಿದೆ' ಎಂಬ ವಾದವನ್ನು ಮುಂದಿಟ್ಟ ಸುದೀರ್ಘ ಪತ್ರವನ್ನು ಕನ್ನಡ ಲೇಖಕರ ಗುಂಪೊಂದು ಬರೆದಿತ್ತು. ಈ ಪತ್ರವು 1982ರ ಏಪ್ರಿಲ್ 18ರ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ರಾಮಚಂದ್ರ ದೇವ, ಬಸವರಾಜ ಕಲ್ಗುಡಿ, ಡಿ.ಆರ್.ನಾಗರಾಜ್, ಕಿ.ರಂ. ನಾಗರಾಜ್, ಕೆ. ಸತ್ಯನಾರಾಯಣ ಮತ್ತು ಶೂದ್ರ ಶ್ರೀನಿವಾಸ ಅವರು ಈ ಪತ್ರಕ್ಕೆ ಸಹಿ ಹಾಕಿದ್ದರು. ಗೋಕಾಕ ವರದಿಯ ಜಾರಿಯು ಸಂವಿಧಾನದ ಉಲ್ಲಂಘನೆ ಅಲ್ಲ ಎಂದು ಸಿ.ಎಸ್. ಶ್ರೀಧರಮೂರ್ತಿ ಅವರು ಬರೆದ ಲೇಖನವೂ ಅದೇ ಸಂಚಿಕೆಯಲ್ಲಿ ಪ್ರಕಟವಾಗಿತ್ತು. 'ಗೋಕಾಕ ವರದಿ ವಿಚಾರ ವೇದಿಕೆ' ಎಂಬ ಶೀರ್ಷಿಕೆಯಲ್ಲಿ ಸುಮಾರು ಮುಕ್ಕಾಲು ಪುಟದ ಪ್ಯಾಕೇಜ್‌ನಲ್ಲಿ ವಿವಿಧ ರೀತಿಯ ಚಿಂತನೆಗಳೆಲ್ಲವೂ ಇದ್ದವು.


ಗೋಕಾಕ ಚಳವಳಿ ನಡೆಯುತ್ತಿದ್ದ ಬಹುಪಾಲು ದಿನಗಳಲ್ಲಿ ಚಳವಳಿಯ ಸುದ್ದಿಯನ್ನು ಮುಖಪುಟದ ಮುಖ್ಯ ಸುದ್ದಿಯಾಗಿಯೇ ಪತ್ರಿಕೆ ಪ್ರಕಟಿಸಿದೆ. ಏಪ್ರಿಲ್ 17ರಂದು ಚಿತ್ರದುರ್ಗದಲ್ಲಿ ಹೋರಾಟಗಾರರ ಮೇಲೆ ಗೋಲಿಬಾರ್ ಮಾಡಿ, ಮೂವರ ಹತ್ಯೆ ಆಗಿತ್ತು. 18ರ ಸಂಚಿಕೆಯ ಮುಖಪುಟದಲ್ಲಿ 'ಚಿತ್ರದುರ್ಗ ಗೋಲಿಬಾರ್: ಮೂರು ಸಾವು' ಎಂಬ ಎಂಟು ಕಾಲಂ ಬ್ಯಾನರ್ ಹೆಡ್‌ಲೈನ್‌ನಲ್ಲಿ ಸುದ್ದಿ ಪ್ರಕಟವಾಗಿತ್ತು. ಹೀಗೆ ಎಲ್ಲ ಕನ್ನಡ ಹೋರಾಟಗಳಿಗೆ ಪ್ರಜಾವಾಣಿ ಸದಾ ಒತ್ತಾಸೆಯಾಗಿ ನಿಂತಿದೆ.

ಇಗೋ ಕನ್ನಡ: ಜಿ.ವೆಂಕಟಸುಬ್ಬಯ್ಯ

ಯಾವುದೇ ಭಾಷೆಯಲ್ಲಿನ ಓದು ವಿಸ್ತಾರವಾದಂತೆ ಹೊಸ ಹೊಸ ಪ್ರಯೋಗಗಳು, ನುಡಿಕಟ್ಟುಗಳು, ಪದಗಳು ಎದುರಾಗುತ್ತವೆ. ಭಾಷಾ ಬಳಕೆಯ ಕುರಿತಂತೆ, ಅರ್ಥವ್ಯಾಪ್ತಿಯ ಕುರಿತಂತೆ ಅನುಮಾನಗಳು ಮೂಡುತ್ತವೆ. ಇಂತಹ ಎಲ್ಲ ಅನುಮಾನಗಳಿಗೂ ಪದಕೋಶದಲ್ಲಿ ಪರಿಹಾರ ದೊರೆಯಬಹುದು ಎಂದು ಹೇಳಲಾಗದು. ಇಂತಹ ಅನುಮಾನಗಳನ್ನು ಪರಿಹರಿಸುವುದಕ್ಕಾಗಿಯೇ 'ಇಗೋ ಕನ್ನಡ' ಎಂಬ ಅಂಕಣವನ್ನು ಪ್ರಜಾವಾಣಿಯು ಆರಂಭಿಸಿತು.

'ಇಗೋ ಕನ್ನಡ' ಎಂಬುದು ನಿಘಂಟು ತಜ್ಞ ಮತ್ತು ವಿದ್ವಾಂಸ ಪ್ರೊ. ಜಿ. ವೆಂಕಟಸುಬ್ಬಯ್ಯನವರು 'ಪ್ರಜಾವಾಣಿ'ಗಾಗಿ ಬರೆದ ಅಂಕಣ. 1991ರ ಮೇ 12ರಂದು ಆರಂಭವಾದ ಈ ಅಂಕಣವು 18 ವರ್ಷಕ್ಕೂ ಹೆಚ್ಚು ಕಾಲ ಪ್ರತಿ ಭಾನುವಾರ ಪ್ರಕಟವಾಗಿದೆ.

ಈ ಅಂಕಣವು ಇತರ ಅಂಕಣಗಳಂತೆ ಇರಲಿಲ್ಲ. ಇದು ಓದುಗರ ಕೇಳಿದ ಪ್ರಶ್ನೆಗಳಿಗೆ ಉತ್ತರದ ರೂಪದಲ್ಲಿತ್ತು. ಪ್ರೌಢಶಾಲೆಯ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳನ್ನು ಗುರಿಯಾಗಿಸಿ ಈ ಅಂಕಣವನ್ನು ಆರಂಭಿಸಲಾಗಿತ್ತು. ಅಂಕಣ ಪ್ರಾರಂಭವಾದ ಕೆಲವೇ ವಾರಗಳಲ್ಲಿ ಅದರ ಪಾಡಿಗೆ ಅದು ತನ್ನ ವ್ಯಾಪ್ತಿಯನ್ನು ಅಪಾರವಾಗಿ ವಿಸ್ತರಿಸಿಕೊಂಡಿತು.



'ಅಂಕಣವು ಬಹುಬೇಗ ಜನಪ್ರಿಯವಾಯಿತು. ಓದುಗರೇ ತಮಗೆ ತೋರುವ ಸಂದೇಹಗಳನ್ನು ಕುರಿತು ಪ್ರಶ್ನೆಗಳನ್ನು ಕಳುಹಿಸಲು ಮೊದಲು ಮಾಡಿದರು. ನಾನು ನೀಡಿದ ಉತ್ತರದಿಂದ ಸಂದೇಹಗಳು ನಿವಾರಣೆಯಾದ ಬಗ್ಗೆ ಕೃತಜ್ಞತೆಯ ಪತ್ರಗಳೂ ಬಂದವು. ಕೆಲವು ವಿವರಗಳ ಬಗ್ಗೆ ಸ್ಪಷ್ಟತೆಯನ್ನು ನಿರೀಕ್ಷಿಸಿ ವೈಯಕ್ತಿಕ ಪತ್ರಗಳನ್ನೂ ನನ್ನ ವಿದ್ವಾಂಸ ಮಿತ್ರರು ಬರೆದರು. ಕನ್ನಡ ನಾಡಿನ ಎಲ್ಲ ಜಿಲ್ಲೆಗಳಿಂದಲೂ, ಹೊರನಾಡಿನ ಬೊಂಬಾಯಿ, ದೆಹಲಿ, ಮದರಾಸುಗಳಿಂದಲೂ ಪ್ರಶ್ನೆಗಳು ಬಂದವು' ಎಂದು ಅಂಕಣದ ಕುರಿತು ವೆಂಕಟಸುಬ್ಬಯ್ಯನವರು ಬರೆದುಕೊಂಡಿದ್ದಾರೆ.

ವೆಂಕಟಸುಬ್ಬಯ್ಯನವರ ವಿದ್ವತ್ತು ಮತ್ತು ಪ್ರಶ್ನೆಗಳಿಗೆ ಅವರು ನೀಡುತ್ತಿದ್ದ ವಿಶಿಷ್ಟ ಉತ್ತರಗಳೇ ಅಂಕಣವು ಪಡೆದುಕೊಂಡ ಅಪಾರ ಜನಪ್ರಿಯತೆಗೆ ಕಾರಣ. ಅವರು ಹೇಗೆ ಉತ್ತರಗಳನ್ನು ನೀಡುತ್ತಿದ್ದರು ಎಂಬುದನ್ನು ಒಂದು ಉದಾಹರಣೆಯೊಂದಿಗೆ ನೋಡೋಣ: 'ಧಾರಾವಾಹಿ ಎಂಬುದು ಸಂಸ್ಕೃತದ ಧಾರಾವಾಹಿನ್ ಶಬ್ದದ ತದ್ಭವ. ಎಡೆಬಿಡದೆ ಮುಂದುವರಿಯುವುದು ಎಂದರ್ಥ. 'ಧಾರಾಕಾರವಾಗಿ ಮಳೆ ಸುರಿಯುತ್ತಿದೆ' ಎಂಬ ವಾಕ್ಯವನ್ನು ನೋಡಿ. ಧಾರಾವರ್ಷ ಅಂದರೆ ಎಡೆಬಿಡದೆ ನೀರು ಸುರಿಯುವುದು ಎಂದರ್ಥ. ಧಾರಾವಾಹಿ ಎನ್ನುವುದು ಈ ಎರಡು ಅರ್ಥಗಳನ್ನೂ ಒಳಗೊಂಡಿದೆ. ಇದನ್ನು ಅನುಸರಿಸಿ ಯಾವ ಭಾನುವಾರವನ್ನೂ ಬಿಡದೆ ವಾರಪತ್ರಿಕೆಗಳಲ್ಲಿ ಧಾರಾವಾಹಿ ಕಾದಂಬರಿಗಳು ಪ್ರಕಟವಾಗುತ್ತಿವೆ. ದಿನಪತ್ರಿಕೆಗಳಲ್ಲಿ ಬರುವ ಧಾರಾವಾಹಿಗಳೂ ಉಂಟು. ಎರಡನ್ನೂ ಬಿಡದೆ ಓದುವ ಜನ ಒಂದು ಕಥೆಯ ನಾಯಕನನ್ನು ಇನ್ನೊಂದು ಕಥೆಯ ನಾಯಕಿಯೊಡನೆ ಬೆಸೆದು ಬೇಸ್ತು ಬೀಳುವುದೂ ಉಂಟು. ಧಾರಾವಾಹಿ ಎಂಬುದು ತಪ್ಪು ಶಬ್ದ. ಅದನ್ನು ಉಪಯೋಗಿಸಬಾರದು'.

ಈ ವಿಶಿಷ್ಟ ಶೈಲಿಯೇ ಜನರನ್ನು ಸೆಳೆದ ಅಂಶ. ಪ್ರತಿ ಪದದ ಅರ್ಥ, ಮೂಲ, ಪ್ರಯೋಗ, ತಪ್ಪು ಪ್ರಯೋಗ ಎಲ್ಲವನ್ನು ಲವಲವಿಕೆಯಿಂದಲೇ ವಿವರಿಸಲಾಗಿದೆ.

ಈ ನಿಘಂಟು ಮೂರು ಸಂಪುಟಗಳಲ್ಲಿ ಮುದ್ರಣಗೊಂಡು, ಅವು ಮೂರು ಮುದ್ರಣ ಕಂಡಿವೆ. ಬಳಿಕ, ಮೂರೂ ಸಂಪುಟಗಳನ್ನು ಒಟ್ಟು ಸೇರಿಸಿ ಒಂದು ಸಂಪುಟದಲ್ಲಿಯೂ ಮುದ್ರಿಸಲಾಗಿದೆ. ಕನ್ನಡದ ಸರಿಯಾದ ಬಳಕೆಗೆ 'ಇಗೋ ಕನ್ನಡ' ಕೊಟ್ಟ ಕೊಡುಗೆ ದೊಡ್ಡದು.

ಪದಸಂಪದ: ಕೆ.ವಿ. ನಾರಾಯಣ

ಇಗೋ ಕನ್ನಡ ಅಂಕಣ ನಿಂತ ಮೇಲೆ ಅದೇ ಸ್ವರೂಪದ ಅಂಕಣವನ್ನು ಭಾಷಾ ವಿದ್ವಾಂಸ ಕೆ.ವಿ. ನಾರಾಯಣ ಆರಂಭಿಸಿದರು. 2007ರಿಂದ ಮೂರು ವರ್ಷಕ್ಕೂ ಹೆಚ್ಚು ಕಾಲ ಈ ಅಂಕಣ ಪ್ರಕಟವಾಯಿತು. 'ಮುಖ್ಯವಾಗಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಸಂದೇಹ ಪರಿಹಾರ ಈ ಅಂಕಣದ ಉದ್ದೇಶವಾಗಿತ್ತು' ಎಂಬುದನ್ನು ಕೆ.ವಿ.ನಾರಾಯಣ ಅವರು ನೆನಪಿಸಿಕೊಳ್ಳುತ್ತಾರೆ. 'ನನ್ನದೇ ಇ-ಮೇಲ್ ವಿಳಾಸವನ್ನು ಕೊಟ್ಟಿದ್ದರು. ಹಾಗಾಗಿ ಪ್ರಶ್ನೆಗಳು ನೇರವಾಗಿ ನನಗೇ ಬರುತ್ತಿದ್ದವು. ಎಲ್ಲ ಪ್ರಶ್ನೆಗಳಿಗೆ ಉತ್ತರ ಕೊಡಲು ಸಾಧ್ಯವಾಗುತ್ತಿರಲಿಲ್ಲ. ಹೆಚ್ಚು ಪ್ರಸ್ತುತ ಎನಿಸುವ ಪ್ರಶ್ನೆಗಳನ್ನು ಆಯ್ದುಕೊಳ್ಳುತ್ತಿದ್ದೆ. ವ್ಯಾಕರಣದ ಸಂದೇಹಕ್ಕಿಂತ ಪದ, ನುಡಿಗಟ್ಟು ಬಳಕೆ, ಸರಿಯಾದ ಕಾಗುಣಿತ ಹೇಗೆ ಎಂಬ ಪ್ರಶ್ನೆಗಳೇ ಹೆಚ್ಚು ಬರುತ್ತಿದ್ದವು' ಎಂದು ಕೆ.ವಿ. ನಾರಾಯಣ ಹೇಳುತ್ತಾರೆ.

ನುಡಿಯೊಳಗಾಗಿ: ಓ.ಎಲ್. ನಾಗಭೂಷಣ ಸ್ವಾಮಿ



'ಇಗೋ ಕನ್ನಡ' ಮತ್ತು 'ಪದಸಂಪದ'ಕ್ಕಿಂತ ಭಿನ್ನವಾದ ಅಂಕಣ ಓ.ಎಲ್. ನಾಗಭೂಷಣ ಸ್ವಾಮಿ ಅವರ 'ನುಡಿಯೊಳಗಾಗಿ'. ಇದು 2012 ಜನವರಿಯಿಂದ 2013 ಜನವರಿವರೆಗೆ ಪ್ರಕಟವಾಗಿದೆ. ಇದು ಪ್ರಶ್ನೋತ್ತರ ರೂಪದ ಅಂಕಣ ಆಗಿರಲಿಲ್ಲ, ಬದಲಿಗೆ 'ಭಾಷಾ ಚಿಂತನೆ'ಯ ಬರಹಗಳು. ಈ ಕೃತಿಯನ್ನು ಅಭಿನವ ಪ್ರಕಾಶನವು ಪುಸ್ತಕವಾಗಿ ಪ್ರಕಟಿಸಿದೆ. 'ನನಗೆ ತಿಳಿದ ಮಟ್ಟಿಗೆ ದಿನಪತ್ರಿಕೆಯೊಂದರಲ್ಲಿ ಮನುಕುಲದ ನುಡಿಯನ್ನು ಈ ಬಗೆಯಲ್ಲಿ ಧೇನಿಸುವ ಬರಹಗಳ ಸರಣಿಯೊಂದು ಇಷ್ಟೊಂದು ವಾರಗಳ ಕಾಲ, ಇಷ್ಟೊಂದು ಸರಸವಾಗಿ ಬಂದದ್ದು ಇದೇ ಮೊದಲು' ಎಂದು ಕೃತಿಯ ಕುರಿತು ರಘುನಂದನ ಅವರು ವ್ಯಕ್ತಪಡಿಸಿರುವ ಅಭಿಪ್ರಾಯವು ಕೃತಿಯಲ್ಲಿ ಇದೆ.

ಆಧಾರ: ಪ್ರಜಾವಾಣಿ ಸಂಚಿಕೆಗಳು, ಇಗೋ ಕನ್ನಡ, ನುಡಿಯೊಳಗಾಗಿ

ಓದು ಕಲಿಸಿದ ಪತ್ರಿಕೆ


75ನೇ ವರ್ಷಕ್ಕೆ ಕಾಲಿಟ್ಟ ಪ್ರಜಾವಾಣಿಯ ಕುರಿತು ಜನರು ವ್ಯಕ್ತಪಡಿಸಿದ ಅಭಿಪ್ರಾಯಗಳು ಹಲವು ವಿಚಾರಗಳತ್ತ ಬೆಳಕು ಚೆಲ್ಲಿವೆ. ಅವುಗಳಲ್ಲಿ ಮುಖ್ಯವೆಂದು ಅನಿಸಿದ್ದು ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಪತ್ರಿಕೆಯು ವಹಿಸಿದ ಪಾತ್ರ. ಪತ್ರಿಕೆ ಆರಂಭವಾದಾಗಿನಿಂದ ಇಂದಿಗೂ ಪತ್ರಿಕೆ ಓದುತ್ತಿರುವವರು, 30 ವರ್ಷ, 40 ವರ್ಷ, 50 ವರ್ಷ, 60 ವರ್ಷಗಳಿಂದ ಪತ್ರಿಕೆ ಓದುತ್ತಿರುವವರು, ಇತ್ತೀಚಿನ ವರ್ಷಗಳಲ್ಲಿ ಪತ್ರಿಕೆ ಓದಲು ಆರಂಭಿಸಿದವರು... ಹೀಗೆ ವಿವಿಧ ರೀತಿಯಲ್ಲಿ ಪತ್ರಿಕೆಯೊಂದಿಗೆ ಒಡನಾಟ ಇಟ್ಟುಕೊಂಡವರು ಪತ್ರ ಬರೆದು ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ.

'ನಾನು ಪ್ರಜಾವಾಣಿ ನೋಡಿದ್ದು 1968ರಲ್ಲಿ. ಅಂದೊಂದು ದಿನ ನಮ್ಮ ಹೆಡ್‌ಮಾಸ್ಟರ್ ವೈ.ಜಿ.ಸತ್ಯನಾರಾಯಣ ಅವರು ಪತ್ರಿಕೆ ತೋರಿಸಿ ಅದರ ಮುಖ್ಯ ವಿಷಯಗಳನ್ನು ಪ್ರಾರ್ಥನೆ ಮಾಡುವ ಮುನ್ನ ಓದಿಸಿ ನಂತರ ಸ್ಕೂಲ್ ಜಗುಲಿಯ ಟೇಬಲ್ ಮೇಲೆ ಹಾಸಿ ಓದಲು ಹೇಳಿದ್ದರು. ಕ್ಲಾಸಿನಲ್ಲಿ 'ಛೂ ಬಾಣ' ಓದಲು ಹೇಳಿದ್ದರು. ಅಂದಿನಿಂದ ಪ್ರಜಾವಾಣಿ ಬದುಕಿನ ಭಾಗವಾಗಿದೆ' ಎಂದು ಪತ್ರಿಕೆಯ ಕುರಿತು ಹೇಳಿದವರು ಲೇಖಕ ಬಿ.ಚಂದ್ರೇಗೌಡ.



'ಪ್ರಜಾವಾಣಿ ಓದು' ಎಂಬುದು ಕನ್ನಡ ಕಲಿಯುವ ವಿದ್ಯಾರ್ಥಿಗಳಿಗೆ ಶಿಕ್ಷಕರು ಸಾಮಾನ್ಯವಾಗಿ ಹೇಳುತ್ತಿದ್ದ ಮಾತು. ಶಾಲೆಯಲ್ಲಿ ಬೆಳಗ್ಗಿನ ಪ್ರಾರ್ಥನೆಯ ಬಳಿಕ ಪತ್ರಿಕೆಯಲ್ಲಿರುವ ಸುದ್ದಿಗಳ ಶೀರ್ಷಿಕೆ ಓದುವುದು ಹಲವು ಶಾಲೆಗಳಲ್ಲಿ ಇದ್ದ ಮತ್ತು ಈಗಲೂ ಇರುವ ಪರಿಪಾಟ. ಅಸಂಖ್ಯ ಮನೆಗಳಲ್ಲಿ ಹೆತ್ತವರು ಕೂಡ ಮಕ್ಕಳಿಗೆ ಪ್ರಜಾವಾಣಿ ಓದುವ ಹವ್ಯಾಸವನ್ನು ಚಿಕ್ಕಂದಿನಿಂದಲೇ ಬೆಳೆಸಿದ್ದಾರೆ. ಹಾಗಾಗಿಯೇ ಪತ್ರಿಕೆಯು ತಮಗೆ ಕನ್ನಡ ಕಲಿಸಿದೆ, ಕನ್ನಡದ ಓದು ಕಲಿಸಿದೆ ಮತ್ತು ಬರೆಯುವುದನ್ನೂ ಕಲಿಸಿದೆ ಎಂಬ ಅಭಿಪ್ರಾಯವನ್ನು ನೂರಾರು ಜನರು ಹಂಚಿಕೊಂಡಿದ್ದಾರೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ವೃಕ್ಷರಕ್ಷಣೆ - ಪರಮಧರ್ಮ

ನೆರಳನಿನಿತನು ಕೊಡುವ, ದಣಿವನಿನಿತನು ಕಳೆವ |
ತಿರೆಯ ಪಯಣದ ಹೊರೆಯನಿನಿತು ಸುಳುವೆನಿಪಾ ||
ತರುವಾಗಿ ಮನೆಯೊಳಗೊ ಹೊರಗೊ ನೀಂ ಬೆಳೆಯುತಿರೆ |
ಪರಮ ಧರ್ಮವದೆಲವೊ - ಮಂಕುತಿಮ್ಮ || 746 ||

ಪದ-ಅರ್ಥ: ನೆರಳನಿನಿತನು = ನೆರಳನು + ಇನಿತನು (ಸ್ವಲ್ಪವನ್ನು), ದಣಿವನಿನಿತನು = ದಣಿವನು + ಇನಿತನು, ತಿರೆಯ = ಭೂಮಿಯ, ಹೊರೆಯನಿನಿತು + ಹೊರೆಯನು + ಇನಿತು, ಸುಳುವೆನಿಪಾ = ಸುಳುವು (ಸುಲಭ) + ಎನಿಪ + ಆ, ತರುವಾಗಿ = ಮರವಾಗಿ, ಪರಮಧರ್ಮವದೆಲವೊ = ಪರಮಧರ್ಮವು + ಅದೆ + ಎಲವೊ

ವಾಚ್ಯಾರ್ಥ: ಕೊಂಚ ನೆರಳನ್ನು ನೀಡುವ, ಸ್ವಲ್ಪ ದಣಿವನ್ನು ಕಳೆವ, ಪ್ರಯಾಣದ ಆಯಾಸವನ್ನು ಸ್ವಲ್ಪ ಕಡಿಮೆ ಮಾಡುವ ಮರದಂತೆ ನೀನು ಮನೆಯಲ್ಲೋ, ಹೊರಗೋ ಬೆಳೆಯುತ್ತಿದ್ದರೆ, ಅದೇ ಪರಮಧರ್ಮ.

ವಿವರಣೆ: ಪ್ರಕೃತಿ ನಮಗೆ ಅನೇಕ ಉಡುಗೊರೆಗಳನ್ನು ನೀಡಿದೆ. ಅವುಗಳಲ್ಲಿ ಮರಗಳು ಮತ್ತು ಸಸ್ಯಗಳು ಅತ್ಯಂತ ಮುಖ್ಯವಾದವುಗಳು. ಅವುಗಳಿಲ್ಲದೆ ಅಸ್ತಿತ್ವವಿಲ್ಲ. ಈ ಕಗ್ಗ ಹೇಳುತ್ತದೆ, ಮರ ನಮಗೆ ನೆರಳು ನೀಡುತ್ತದೆ. ದಣಿವನ್ನು ಹೋಗಲಾಡಿಸುತ್ತದೆ, ಪ್ರಯಾಣದ ಆಯಾಸವನ್ನು ಇಳಿಸುತ್ತದೆ. ಅದಷ್ಟೇ ಅಲ್ಲ, ಇತ್ತೀಚಿನ ವೈಜ್ಞಾನಿಕ ವರದಿಗಳಂತೆ ಅವು ಮನುಷ್ಯನಿಗೆ ಆಮ್ಲಜನಕದ ಸಿಲಿಂಡರ್ಗಳಿದ್ದಂತೆ. ಒಂದು ಅರಳಿಮರ ದಿನಕ್ಕೆ ಇಪ್ಪತ್ನಾಲ್ಕು ಗಂಟೆಗಳ ಕಾಲ ಆಮ್ಲಜನಕ ನೀಡುತ್ತದೆ. ಆಲದ ಮರ ಇಪ್ಪತ್ತು ತಾಸು, ಬೇವಿನ ಮರ ಹದಿನೆಂಟು ತಾಸು ಸತತವಾಗಿ ಆಮ್ಲಜನಕವನ್ನು ಸೂಸುತ್ತ ನಮ್ಮ ಪ್ರಪಂಚ ಸೃಷ್ಟಿಸುವ ಇಂಗಾಲದ ಡೈ ಆಕ್ಸೈಡ್ ಪ್ರಮಾಣವನ್ನು ಕಡಿಮೆ ಮಾಡಿ ಕಾಪಾಡುತ್ತವೆ.

ಅದಕ್ಕೇ ಹಿಂದೂ ಧರ್ಮದಲ್ಲಿ ಪ್ರತಿಯೊಂದು ಮರವನ್ನು ಒಂದು ದೇವತೆ ಎಂದೂ ಪೂಜಿಸಲಾಗುತ್ತದೆ. 'ಮೂಲತೋ ಬ್ರಹ್ಮರೂಪಾಯ ಮಧ್ಯತೋ ವಿಷ್ಣುರೂಪಿಣೇ| ಅಗ್ರತಃ ಶಿವರೂಪಾಯ ವೃಕ್ಷರಾಜಾಯತೇ ನಮಃ||'. ಮೂಲದಲ್ಲಿ ಬ್ರಹ್ಮ, ಮಧ್ಯದಲ್ಲಿ ವಿಷ್ಣು ಮತ್ತು ತುದಿಯಲ್ಲಿ ಶಿವರೂಪವಾಗಿರುವ ವೃಕ್ಷರಾಜನಿಗೆ ನಮಸ್ಕಾರ ಎಂದು ಮರಗಳ ಶ್ರೇಷ್ಠತೆಯನ್ನು ತಿಳಿಸುತ್ತದೆ. ನಮ್ಮ ಬದುಕು ಕೂಡ ಮರಗಳಂತೆ ಪ್ರಯೋಜನಕಾರಿಯಾಗಲಿ ಎಂದು ಅಪೇಕ್ಷೆಪಡಬೇಕು. ಡಿ.ವಿ.ಜಿ ಯವರೇ ತಮ್ಮ ಅತ್ಯಂತ ಪ್ರಖ್ಯಾತವಾದ 'ವನಸುಮ' ಎಂಬ ಪದ್ಯದಲ್ಲಿ ಹೇಳುತ್ತಾರೆ,

ಉಪಕಾರಿ ನಾನು, ಎನ್ಉಪಕೃತಿಯು ಜಗಕೆಂಬ
ವಿಪರೀತ ಮತಿಯನುಳಿದು ವಿಪುಲಾಶ್ರಯವನೀವ
ಸುಫಲ ಸುಮಭರಿತ ಪಾದಪದಂತೆ,
ನೈಜಮಾದೊಲ್ಪಿನಿಂ ಬಾಳ್ವವೊಲು ಮನವನನು-ಗೊಳಿಸು
ಗುರುವೇ, ಹೇ ದೇವ.

ತಾನು ಉಪಕಾರಿ, ಜಗತ್ತಿಗೆ ನನ್ನ ಉಪಕೃತಿ ಇದೆಯೆಂಬ ಭಾವನೆ ಒಂದು ಚೂರೂ ಇಲ್ಲದೆ ಜನರಿಗೆ ಆಶ್ರಯವನ್ನಿತ್ತು, ಹಣ್ಣು, ಹೂವುಗಳನ್ನು ಮತ್ತು ಕೊನೆಗೆ ತನ್ನನ್ನೇ ನೀಡುವ ಮರದಂತೆ ನಮ್ಮ ಜೀವನವನ್ನು ಅನುಗೊಳಿಸು ಎಂದು ಬೇಡುತ್ತಾರೆ. ಆ ಮರಗಳ ಹಾಗೆ ಒಳಗೆ ನಮ್ಮ ಸಂಸಾರದಲ್ಲಿ ಮತ್ತು ಹೊರಗೆ ಪ್ರಪಂಚದಲ್ಲಿ ನಾವು ಉಳಿದವರಿಗೆ ಆಶ್ರಯವನ್ನೋ, ಸಹಕಾರವನ್ನೋ, ನೆಮ್ಮದಿಯನ್ನೋ ನೀಡುವುದಾದರೆ, ಅದೇ ಪರಮ ಧರ್ಮ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ   ಮಂಗಳವಾರ ನವೆಂಬರ್ 1, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಅಷ್ಟಮಿ ಗಂ. 23-05 ನಕ್ಷತ್ರ: ಶ್ರವಣ ಗಂ. 26-53 ಯೋಗ: ಶೂಲ ಗಂ. 13-15, ಕರಣ: ವಿಷ್ಟಿ ಗಂ. 12-07, ತುಲಾ ಮಾಸದ 14 ನೇ ದಿನ.
ರಾಹುಕಾಲ: ಮಧ್ಯಾಹ್ನ 03-00 – 04-30
ಸೂರ್ಯೋದಯ: 06-28 ಸೂರ್ಯಾಸ್ತ : 06-00
ಮುಸ್ಲಿಂ ದಿನಾಂಕ: 05 ರಬಿಯುಸ್ಸಾನಿ **ದಿನ ವಿಶೇಷ:** ತ್ರಿವೆಂಡ್ರಮ್ ಆರತ್ (ಕೇರಳ), ಭಗತ್ ಕನ್ವರ್ ರಾಮ್‌ರವರ ಹುತಾತ್ಮ ದಿನ (ಸಿಂಧಿ) **ಅದೃಷ್ಟ ಸಂಖ್ಯೆ:** 5, 8

ಮೇಷ: ವೈಯಕ್ತಿಕ ಜೀವನದ ಸಮಸ್ಯೆ ಬಗೆಹರಿದು ನೆಮ್ಮದಿ ಮೂಡಲಿದೆ. ಲೇವಾ ದೇವಿ ವ್ಯವಹಾರಗಳಲ್ಲಿ ಎಚ್ಚರಿಕೆಯಿಂದ ಇರುವುದು ಸೂಕ್ತ. ಉಳಿತಾಯದ ಹಣ ಕೈ ಸೇರುವುದು.

ವೃಷಭ: ನಿಮ್ಮ ಸಮಸ್ಯೆಗೆ ನಿಮ್ಮ ಧೈರ್ಯವೇ ಪರಿಹಾರ. ರಾಜಕೀಯದಲ್ಲಿ ತಮ್ಮವರಿಂದಲೇ ತೋರಿ ಬರುವ ವಿರೋಧಗಳನ್ನು ಜಾಣ್ಮೆಯಿಂದ ನಿವಾರಿಸಿಕೊಳ್ಳುವ ತಂತ್ರಗಾರಿಕೆ ಅಳವಡಿಸಿಕೊಳ್ಳಿರಿ.

ಮಿಥುನ: ಹೆಚ್ಚಿನ ವಿಚಾರವಂತಿಕೆಯಿಂದ ವ್ಯವಹರಿಸಿ. ಒಂದು ಬಾರಿ ನಿರ್ಧರಿಸಿದ ನಿಲುವಿನಿಂದ ಹಿಂದೆ ಸರಿಯುವ ಯೋಚನೆಯನ್ನು ಮಾಡಬೇಡಿ. ಎಲ್ಲರನ್ನೂ ಗೌರವಯುತವಾಗಿ ನೋಡಿ.

ಕರ್ಕಾಟಕ: ಅನಾವಶ್ಯಕವಾದ ಪ್ರಯಾಣ ನಾನಾ ರೀತಿಯ ಅನಾವಶ್ಯಕ ಖರ್ಚು-ವೆಚ್ಚಗಳನ್ನು ಹೆಚ್ಚು ಮಾಡಲಿದ್ದೂ, ಆರ್ಥಿಕ ಬಿಕ್ಕಟ್ಟಿನ ಕಡೆಗೆ ಕಂಡೊಯ್ಯುವಂತಾಗಲಿದೆ.

ಸಿಂಹ: ಯಾವುದಕ್ಕೂ ಆತುರ ಪಡದೆ ಸ್ಥಿತಪ್ರಜ್ಞರಾಗಿ ಕಾರ್ಯನಿರ್ವಹಿಸಿ. ನೀವಂದುಕೊಂಡ ಕೆಲಸ ನಿಮ್ಮಂತೆಯೇ ನಡೆಯುತ್ತದೆ. ನಿಮಗೆ ನಿರ್ವಹಿಸಿದ ಹಣಕಾಸಿನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿ.

ಕನ್ಯಾ: ವಿದ್ಯಾರ್ಥಿಗಳಿಗೆ ಓದಿನೆಡೆ ಹೆಚ್ಚಿನ ಆಸಕ್ತಿ ಮೂಡುವುದು. ಆಲಸ್ಯ ಮನೋಭಾವ ದೂರವಾಗಿ ಚಟುವಟಿಕೆಯಿಂದಿರುತ್ತೀರಿ. ಆರೋಗ್ಯದಲ್ಲಿ ಗಮನಾರ್ಹ ಸುಧಾರಣೆ ಕಾಣುವಿರಿ.

ತುಲಾ: ಸೂಕ್ಷ್ಮ ಮನಸ್ಸಿನ ನಿಮಗೆ ಹೆಚ್ಚಿನ ಜವಾಬ್ದಾರಿ ಜೊತೆಗೆ ರಹಸ್ಯ ಭೇದಿಸುವ ಹುದ್ದೆಗೆ ವರ್ಗವಾಗಲಿದೆ. ಕೆಲಸದಲ್ಲಿ ಸಣ್ಣ-ಪುಟ್ಟ ಸಮಸ್ಯೆ ಎದುರಾಗಬಹುದು.

ವೃಶ್ಚಿಕ: ಸಣ್ಣ ಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಸಹಾಯ ಹಸ್ತ. ಬಹಳ ಪ್ರಯತ್ನದಿಂದ ಗುತ್ತಿಗೆ ಕೆಲಸದ ಬಾಕಿ ಹಣ ಸಂದಾಯವಾಗುವುದು. ವೈದ್ಯರ ಸಲಹೆಯಂತೆ ಧ್ಯಾನ ಮತ್ತು ಯೋಗದ ಅಭ್ಯಾಸ ಮಾಡಿಕೊಳ್ಳಿ.

ಧನು: ಸ್ನೇಹಿತರೊಂದಿಗೆ ಪ್ರವಾಸ ಮಾಡಬೇಕೆನಿಸಿದ್ದರೂ ಮುಂದೂಡುವುದು ಉತ್ತಮವೆನಿಸಲಿದೆ. ಮನೋರಂಜನೆಗಿಂತ ಕೆಲಸದ ಬಗ್ಗೆ ಗಮನವಿರಲಿ. ನಿಮ್ಮ ಅವಶ್ಯಕತೆಗಳು ಆಶ್ಚರ್ಯಕರ ರೀತಿಯಲ್ಲಿ ಲಭಿಸಲಿದೆ.

ಮಕರ: ವಸ್ತುಗಳ ರಫ್ತು ವ್ಯವಹಾರವನ್ನು ಮಾಡುವವರಿಗೆ ರಫ್ತು ಕಾರ್ಯದಲ್ಲಿ ತಾಪತ್ರಯಗಳು ಕಾಣಿಸಿಕೊಳ್ಳಲಿದೆ. ಕಾರ್ಯ ನಿಮಿತ್ತವಾಗಿ ಅತ್ತೆ-ಸೊಸೆಯಲ್ಲಿ ಭಿನ್ನಾಭಿಪ್ರಾಯ ತೋರಿಬಂದರೂ ತಾಳ್ಮೆ, ಸಮಾಧಾನ ಇರಲಿ.

ಕುಂಭ: ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸುವಿಕೆಯಿಂದ ಮಾನಸಿಕ ಶಾಂತಿ ಹೆಚ್ಚಾಗಲಿದೆ. ವಿದ್ಯಾರ್ಥಿ ಸಮೂಹಕ್ಕೆ ಉತ್ತಮ ಅವಕಾಶಗಳು ಲಭಿಸಲಿವೆ. ಶತ್ರು ಬಾಧೆ ನಿವಾರಣೆ ಆಗಲಿದೆ. ಹಂತ ಹಂತವಾಗಿ ಪ್ರಗತಿ ಪ್ರಾಪ್ತಿ.


ಮೀನ: ಸ್ನೇಹಿತರಲ್ಲಿ ಅಥವಾ ಸಂಬಂಧಿಕರಲ್ಲಿ ಅವರ ವೈಯಕ್ತಿಕ ವಿಚಾರವನ್ನು ಅನಗತ್ಯವಾಗಿ ಮಾತನಾಡುವುದಕ್ಕಿಂತ ಮೌನವಾಗಿ ಇರುವುದು ಲೇಸು. ಸಂಗೀತಗಾರರಿಗೆ ಮತ್ತು ಕ್ರೀಡಾಪಟುಗಳಿಗೆ ಉತ್ತಮ ಅವಕಾಶ.

ಪದಬಂಧ 5125

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹೊಂದಾಣಿಕೆ ಇಲ್ಲದ ವಸ್ತುಗಳ ಬೆರಕೆ (5)
4.ಮಂಚದ ಕೊನೆಗಿರುವ ಸುವಾಸನೆಯ ಬೇರು (3)
5.ಅತ್ಯಂತ ಹಿಂಸೆಯಿಲ್ಲಿ ಉಲ್ಟಾ ಆಗಿಬಿಟ್ಟದೆ (5)
8.ಆಕಾಶ ಮಾರ್ಗದಲ್ಲಿ ಸಂಚರಿಸುವವನು (5)
11.ಬಾಣ ಹಿಡಿದಿರುವವ ಆಶ್ರಯವನ್ನುಬೇಡುವವನು (5)
14.ಪರೋಕ್ಷವಲ್ಲ! ಕಣ್ಣಿಗೆ ಕಾಣುವುದು (3)
15.ಈತ ಅಡುಗೆಯಲ್ಲಿ ನುರಿತವನು (5)

ಮೇಲಿಂದ ಕೆಳಕ್ಕೆ
1.ಕಟ ಕಟ ಶಬ್ದಮಾಡುವ ಬಾಗಿಲು (3)
2.ಜೂಜಿನಲ್ಲಿ ಒಡ್ಡುವ ಪಣ (3)
3.ನಗಿಸುವುದಕ್ಕಾಗಿ ಕಂಕುಳಲ್ಲಿ ಗುಳುಗುಳುಬೆರಳಾಡಿಸುವುದು (4)
4.ಕಾವ್ಯ ಲಕ್ಷಣಗಳನ್ನು ಬಲ್ಲವನು (4)
6.ಗ್ರಹ ಹಾಗೂ ಉಪಗ್ರಹಗಳು ಸುತ್ತುವ ಮಾರ್ಗ (2)
7.ಉಪವಾಸದಿಂದ ಮರಣಹೊಂದುವ ವ್ರತ (5)
8.ಎಡಭಾಗದಲ್ಲಿದೆ! ಆಡಳಿತದ ಎದುರು ಪಕ್ಷ! (4)
9.ನಾಲ್ಕು ಆಶ್ರಮದಲ್ಲಿ ಮೂರನೆಯದು (4)
10.ಜಾಗರೂಕತೆಯಿಂದ ನೋಡಿ! ಸ್ಥಳ ಕಂಡೀತು! (2)
12.ರಸ ಸ್ವಾದನೆಯನ್ನು ಬಲ್ಲವನು (3)
13.ಚಲ್ಲಣ ನೋಡಿದ್ದಕ್ಕೆ ಈ ಹೆದರಿಕೆ! (3)



5124ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಪಕಾರ 3.ಉದುರು
5.ಕರತಾಡನ 7.ನಟನೆ
9.ಕದಪು 11.ಪ್ರವಾಹ
13.ಜನಾನುರಾಗಿ
15.ಕುರುಳು 16.ಕುರುಚಲು

ಮೇಲಿಂದ ಕೆಳಕ್ಕೆ:
1.ಉದಾಸೀನ 2.ರಸಿಕ
4.ದುಮ್ಮಾನ 6.ತಾರೀಪು
8.ಟಕ್ಕ 9.ಕಮಾನು
10.ಗ್ಮಿವಾ 12.ಹರಿಗೋಲು
13.ಜರೂರು 14.ಗಿಟುಕು

ಸುಡೊಕು 5511

3		2	1		4		6	7
				8				
7	9		6		2	5		4
2					3			5
				4		2	9	
			9					1
	4	1	2				8	
9				7	8			
	6			5		4		9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5510 ಸುಡೊಕು

5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

ಮೀಸಲಾತಿ: ಇಂದಿನಿಂದ ಜಾರಿ

ಒಂದನೇ ಪುಟದಿಂದ...

ಕಂಪನಿಗಳಲ್ಲಿ ಹಾಗೂ ಸಾರ್ವಜನಿಕ ಸಂಸ್ಥೆಗಳಲ್ಲಿ (ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯಡಿ ನೋಂದಣಿಯಾದ ಸಹಕಾರ ಸಂಘಗಳು, ಸರ್ಕಾರಿ ಅಥವಾ ಅನುದಾನಿತ ಶೈಕ್ಷಣಿಕ ಸಂಸ್ಥೆಗಳು, ಕಂಪನಿ ಕಾಯ್ದೆಗಳಡಿ ಬರುವ ಸರ್ಕಾರಿ ಕಂಪನಿ, ಸ್ಥಳೀಯ ಪ್ರಾಧಿಕಾರ, ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಸ್ವಾಯತ್ತ ಸಂಸ್ಥೆಗಳು) ನೇಮಕಾತಿ ಮತ್ತು ಹುದ್ದೆಗಳಿಗೂ ಮೀಸಲಾತಿ ಹೆಚ್ಚಳ ಅನ್ವಯ ಆಗಲಿದೆ.

'ಸುಗ್ರೀವಾಜ್ಞೆಯಲ್ಲಿರುವ ಎಲ್ಲ ಉಪಬಂಧಗಳು ನ. 1ರಿಂದಲೇ ಜಾರಿಗೆ ಬರತಕ್ಕದ್ದೆಂದು ಸರ್ಕಾರ ಗೊತ್ತುಪಡಿಸುತ್ತದೆ ಎಂದಷ್ಟೆ ಅಧಿಸೂಚನೆಯಲ್ಲಿದೆ. ಈ ಅಧಿಸೂಚನೆಯ ಜಾರಿಯಿಂದ ರಾಜ್ಯದಲ್ಲಿ ಒಟ್ಟು ಮೀಸಲಾತಿ ಪ್ರಮಾಣ ಶೇ 56 ಆಗುತ್ತದೆ. ಹೆಚ್ಚಳಗೊಳಿಸಿದ ಮೀಸಲಾತಿಯನ್ನು ಅನ್ವಯ ಮಾಡಲು ರೋಸ್ಟರ್ ಅನ್ನು (ಹುದ್ದೆಯ ಮೀಸಲಾತಿ ನಿಗದಿಪಡಿಸಿದ ಪಟ್ಟಿ) ಮರುನಿಗದಿಪಡಿಸಬೇಕಿದೆ. ಕಾನೂನು ವ್ಯಾಪ್ತಿಯ ಅಡಿಯಲ್ಲಿಯೂ ಮೀಸಲಾತಿ ಹೆಚ್ಚಳದ ಅನುಷ್ಠಾನ ಅಷ್ಟು ಸುಲಭವಲ್ಲ' ಎಂದೂ ಅಧಿಕಾರಿ ವಿವರಿಸಿದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಅವರಿಗೆ ಕರೆ ಮಾಡಿದರೂ ಅವರು ಸಂಪರ್ಕಕ್ಕೆ ಸಿಗಲಿಲ್ಲ.

'ಎರಡು ವಾರಗಳಲ್ಲಿ ಟೆಂಡರ್ ಅಂತಿಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 302 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ- ನಾಲ್ಕನೇ ಹಂತದ ಅಡಿಯಲ್ಲಿ ಕೈಗೆತ್ತಿಕೊಳ್ಳಲಿರುವ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯನ್ನು ಎರಡು ವಾರಗಳ ಒಳಗೆ ಅಂತಿಮಗೊಳಿಸಲಾಗುವುದು ಎಂದು ಪೌರಾಡಳಿತ ಸಚಿವ ಎಂ.ಟಿ.ಬಿ. ನಾಗರಾಜ್ ಸೋಮವಾರ ತಿಳಿಸಿದ್ದಾರೆ.

ನಾಳೆಯಿಂದ ಜಾಗತಿಕ ಹೂಡಿಕೆದಾರರ ಸಮಾವೇಶ: ಪ್ರಧಾನಿ ವರ್ಚುವಲ್ ಭಾಷಣ

ಶೇ 75 ಯೋಜನೆಗಳ ಅನುಷ್ಠಾನ: ನಿರಾಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮ ವಲಯಕ್ಕೆ ಹೊಸ ಚೈತನ್ಯ ತುಂಬುವ ನಿಟ್ಟಿನಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶ ನ.2ರಿಂದ 4ರವರೆಗೆ ಮೂರು ದಿನಗಳ ಕಾಲ ನಗರದ ಅರಮನೆ ಮೈದಾನದಲ್ಲಿ ನಡೆಯಲಿದೆ. ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ವ್ಯವಸ್ಥೆ ಮೂಲಕ ಸಮಾವೇಶದಲ್ಲಿ ಭಾಷಣ ಮಾಡಲಿದ್ದಾರೆ.

'ಬಿಲ್ಡ್ ಫಾರ್ ದ ವರ್ಲ್ಡ್' ಪರಿಕಲ್ಪನೆಯೊಂದಿಗೆ ಸಮಾವೇಶ ನಡೆಯಲಿದ್ದು, ₹ 5 ಲಕ್ಷ ಕೋಟಿ ಹೂಡಿಕೆಯಾಗುವ ನಿರೀಕ್ಷೆ ಇದೆ.

'2012ರಲ್ಲಿ ನಡೆದ ಹೂಡಿಕೆದಾರರ ಸಮಾವೇಶದಲ್ಲಿ ಮಾಡಿಕೊಳ್ಳಲಾದ ಒಪ್ಪಂದಗಳಲ್ಲಿ ಶೇ 27ರಷ್ಟು ಯೋಜನೆಗಳು ಮಾತ್ರ ಅನುಷ್ಠಾನಗೊಂಡಿದ್ದವು. ಆದರೆ, ಈ ಬಾರಿ ಶೇ 75ಕ್ಕೂ ಹೆಚ್ಚು ಯೋಜನೆಗಳು ಅನುಷ್ಠಾನಗೊಳ್ಳಲಿವೆ. ಕೇವಲ ಒಪ್ಪಂದಕ್ಕೆ ಮಾತ್ರ ಯೋಜನೆಗಳು ಸೀಮಿತವಾಗಿರುವುದಿಲ್ಲ' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಮುರುಗೇಶ ನಿರಾಣಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.



ಸಚಿವ ಮುರುಗೇಶ ನಿರಾಣಿ ಮಾತನಾಡಿದರು. ಇಲಾಖೆಯ ಆಯುಕ್ತೆ ಗುಂಜನ್ ಕೃಷ್ಣ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ. ರಮಣ ರೆಡ್ಡಿ ಇದ್ದರು

'ಈ ಬಾರಿಯ ಸಮಾವೇಶದಲ್ಲಿ ಹಸಿರು ಇಂಧನಕ್ಕೆ ಆದ್ಯತೆ ನೀಡಲಾಗಿದೆ. ಸೌರಶಕ್ತಿ, ಪವನ ವಿದ್ಯುತ್ ಮತ್ತು ಹೈಡ್ರೋಜನ್ ಇಂಧನದ ವಲಯಗಳಲ್ಲಿ ಹೆಚ್ಚಿನ ಹೂಡಿಕೆಯಾಗುವ ನಿರೀಕ್ಷೆ ಇದೆ. ಈ ವಲಯಗಳಲ್ಲೇ ₹2 ಲಕ್ಷ ಕೋಟಿಯಷ್ಟು ಹೂಡಿಕೆಯಾಗಲಿದೆ. ಉದ್ಯಮಿ ಸಜ್ಜನ್ ಜಿಂದಾಲ್ ಅವರು ತಮ್ಮ ಜೆಎಸ್‌ಡಬ್ಲ್ಯು ಕಂಪನಿಗೆ ಸೇರಿದ ಜಮೀನಿನಲ್ಲೇ ₹42 ಸಾವಿರ ಕೋಟಿ ಹೂಡಿಕೆ ಮಾಡಲಿದ್ದಾರೆ' ಎಂದು ವಿವರಿಸಿದರು. 'ನೂತನ ಕೈಗಾರಿಕಾ ನೀತಿಯಿಂದಾಗಿ ರಾಜ್ಯ ಉದ್ಯಮ ಸ್ನೇಹಿ ರಾಜ್ಯಗಳ ಪಟ್ಟಿಯಲ್ಲಿ ಅತ್ಯಂತ ಪ್ರಮುಖ ಸ್ಥಾನ ಪಡೆದುಕೊಂಡಿದೆ. 2021ರ ಏಪ್ರಿಲ್ 21ರಿಂದ 2022ರ ಮಾರ್ಚ್ ಅವಧಿಯಲ್ಲಿ ₹1.76 ಲಕ್ಷ ಕೋಟಿ ವಿದೇಶಿ ನೇರ ಹೂಡಿಕೆ ಆಕರ್ಷಿಸುವಲ್ಲಿ ಸಫಲವಾಗಿದೆ' ಎಂದರು.

'ಬೆಳಿಗ್ಗೆ 10.30ಕ್ಕೆ ಪ್ರಧಾನಿ ಮೋದಿ ವರ್ಚುವಲ್ ಮೂಲಕ ಭಾಷಣ ಮಾಡಲಿದ್ದಾರೆ. ಇದೇ 4ರಂದು ಸಂಜೆ 4 ಗಂಟೆಗೆ ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ಕೇಂದ್ರ ಹೆದ್ದಾರಿ ಮತ್ತು ಭೂಸಾರಿಗೆ ಸಚಿವ ಸಚಿವ ನಿತಿನ್ ಗಡ್ಕರಿ ಪಾಲ್ಗೊಳ್ಳಲಿದ್ದಾರೆ.

'ಸಮಾವೇಶದಲ್ಲಿ ಸಜ್ಜನ್ ಜಿಂದಾಲ್, ಕುಮಾರಮಂಗಳಂ ಬಿರ್ಲಾ ಸೇರಿದಂತೆ ಹಲವು ಖ್ಯಾತ ಉದ್ಯಮಿಗಳು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ' ಎಂದು ತಿಳಿಸಿದರು.

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಗುಜರಾತ್‌ನ ಮೊರ್ಬಿ ಜಿಲ್ಲೆಯ ಮಚ್ಚು ನದಿಗೆ ನಿರ್ಮಿಸಲಾಗಿದ್ದ ತೂಗು ಸೇತುವೆ ಕುಸಿತದ ದುರಂತಕ್ಕೆ ಸರ್ಕಾರದ ನಿರ್ಲಕ್ಷ್ಯ ಕಾರಣವೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ





ಮೇನಾದೇವಿಗೆ ಪಾಠ ಕಲಿಸಿದ ಶಿವ

ನಾರದ ಅಜ್ಞಾನಿಯಾದ ಮೇನಾದೇವಿಗೆ ಶಿವನನ್ನು ತೋರಿಸಲು ಅವಳನ್ನು ಚಂದ್ರಶಾಲೆಗೆ ಕರೆತರುತ್ತಾನೆ. ಅಷ್ಟರಲ್ಲಿ ಶಿವನಿಗೆ ಮೇನಾದೇವಿ ಮನದಲ್ಲಿ ಅಹಂಕಾರ ತುಂಬಿರುವುದನ್ನು ತನ್ನ ದಿವ್ಯದೃಷ್ಟಿಯಿಂದ ತಿಳಿಯುತ್ತಾನೆ. ಮೇನಾದೇವಿಗೆ ಸರಿಯಾದ ಪಾಠ ಕಲಿಸಬೇಕೆಂದು ನಿರ್ಧರಿಸಿದ ಶಿವ ತನ್ನೊಂದಿಗಿದ್ದ ಹರಿ, ಬ್ರಹ್ಮ, ಇಂದ್ರ ಮತ್ತಿತರ ದೇವತೆಗಳನ್ನು ಹಿಮವಂತನ ಅರಮನೆಯೊಳಗೆ ಕಳುಹಿಸಿ, ತಾನೊಬ್ಬನೇ ಚಂದ್ರಶಾಲೆಯಲ್ಲಿ ಉಳಿಯುತ್ತಾನೆ.

ನಾರದನೊಂದಿಗೆ ಚಂದ್ರಶಾಲೆಗೆ ಬಂದ ಮೇನಾದೇವಿಯು ಭ್ರಾಂತಿಗೊಳ್ಳುವಂತೆ ಶಿವ ನಾನಾ ವಿಧದ ಪ್ರದರ್ಶನ ಮಾಡುತ್ತಾನೆ. ಶಿವನ ಮಾಯಾಮೋಡಿಗೆ ಸಿಲುಕಿದ ಮೇನಾದೇವಿಗೆ ಮೊದಲು ಅದ್ಭುತವಾದ ಸೇನೆಯೊಂದು ಕಾಣಿಸಿದಂತಾಯಿತು. ಸೇನೆಯ ಮುಂಚೂಣಿಯಲ್ಲಿ ಸುಂದರರಾದ ಗಂಧರ್ವರು, ಅಪ್ಸರೆಯರು ಇದ್ದರು. ಗಣಗಳ ಸಮೂಹದಲ್ಲಿ ಅಷ್ಟವಸುಗಳು ಬರುತ್ತಿದ್ದವು. ಮಹಾತೇಜಸ್ವಿಯಾದ ವಸುನಾಯಕನನ್ನು ನೋಡಿ ಮೇನಾದೇವಿ ಹರ್ಷದಿಂದ ಇವನೇ ಶಿವನಿರಬಹುದು ಎಂದುಕೊಳ್ಳುತ್ತಾಳೆ.

ಆಗ ನಾರದ ಇವರೆಲ್ಲರೂ ಮಹದೇವನ ಗಣಗಳು. ಭವಾನೀಪತಿಯಾದ ಶಿವನು ಇವನಲ್ಲ. ಮುಂದೆ ಬರುವನು ಎನ್ನುತ್ತಾನೆ. ನಾರದನ ಮಾತನ್ನು ಕೇಳಿ ಮೇನಾದೇವಿಗೆ ವಸುನಾಯಕನಿಗಿಂತಲೂ ಶಿವ ಶ್ರೇಷ್ಠನಾಗಿರುವುದಾದರೆ ಅವನು ಇನ್ನೆಷ್ಟು ಚೆನ್ನಾಗಿರಬಹುದು? ಅದಕ್ಕಾಗಿಯೇ ತನ್ನ ಮಗಳು ಘೋರ ತಪಸ್ಸು ಮಾಡಿ ಅವನ ಮನ ಗೆದ್ದು ಮದುವೆಯಾಗುತ್ತಿದ್ದಾಳೆ ಎಂದು ಭಾವಿಸುತ್ತಾಳೆ.

ವಸುನಾಯಕರ ನಂತರ ಮಣಿಗ್ರೀವ ಮೊದಲಾದ ಯಕ್ಷರು ಬಂದರು. ಯಕ್ಷರ ಒಡೆಯನಾದ ಮಣಿಗ್ರೀವ ತುಂಬಾ ತೇಜಸ್ವಿಯಾಗಿದ್ದ. ಅವನನ್ನು ನೋಡಿ ಮೇನಾದೇವಿ ಹರ್ಷದಿಂದ ಇವನೇ ಗಿರಿಜಾಪತಿಯಾದ ರುದ್ರನೇ – ಎಂದು ಕೇಳುತ್ತಾಳೆ. ಆಗ ನಾರದ, ಇವನು ಸಹ ಶಿವನ ಸೇವಕ ಎನ್ನುತ್ತಾನೆ. ಅಷ್ಟರಲ್ಲಿ ಅಲ್ಲಿಗೆ ಅಗ್ನಿಪುರುಷ ಬರುತ್ತಾನೆ. ಮೇನಾದೇವಿ ಇವನೇನಾ ರುದ್ರ ಎಂದು ಕೇಳುತ್ತಾಳೆ. ನಾರದ ಇವನೂ ಅಲ್ಲವೆನ್ನುತ್ತಾನೆ. ಅಗ್ನಿಗಿಂತಲೂ ತೇಜಸ್ವಿಯಾದ ಯಮ ಬರುತ್ತಾನೆ. ಅವನನ್ನೂ ನಾರದ ರುದ್ರ ಅಲ್ಲವೆನ್ನುತ್ತಾನೆ. ಯಮನ ನಂತರ ದಾನವಾಧಿಪತಿ ನಿರ್‌ಋತಿ ಬಂದ. ಯಮನಿಗಿಂತಲೂ ತೇಜಸ್ವಿಯಾಗಿದ್ದ ನಿರ್‌ಋತಿಯನ್ನು ನೋಡಿ ಮೇನಾದೇವಿ ಇವನೇ ರುದ್ರನೆಂದು ಭಾವಿಸುತ್ತಾಳೆ. ನಾರದ ಅವನೂ ಅಲ್ಲ ಅನ್ನುವಷ್ಟರಲ್ಲಿ ವರುಣ ಬರುತ್ತಾನೆ.

ನಿರ್‌ಋತಿಗಿಂತಲೂ ತೇಜಸ್ವಿಯಾದ ವರುಣನನ್ನು ನೋಡಿ ಮೇನಾದೇವಿ 'ಇವನೇ ರುದ್ರನಿರಬೇಕು' ಎನ್ನುತ್ತಾಳೆ. ಆಗ ನಾರದ ಇವನು ರುದ್ರನಲ್ಲವೆಂದು ಹೇಳುತ್ತಾನೆ. ನಂತರ ವರುಣನಿಗಿಂತಲೂ ಇಮ್ಮಡಿ ಕಾಂತಿಶಾಲಿಯಾದ ವಾಯುದೇವ ತನ್ನ ಪರಿವಾರದೊಡನೆ ಬಂದ. ಅವನನ್ನು ನೋಡಿ ಮೇನಾದೇವಿ ಇವನೇ ರುದ್ರನಾಗಿರಬೇಕು ಎನ್ನುತ್ತಾಳೆ. ಇವನೂ ರುದ್ರನಲ್ಲವೆಂದು ನಾರದ ಹೇಳುತ್ತಿರುವಂತೆಯೇ ಅಲ್ಲಿಗೆ ಕುಬೇರ ಬರುತ್ತಾನೆ. ವಾಯುವಿಗಿಂತಲೂ ಎರಡರಷ್ಟು ತೇಜಸ್ವಿಯಾಗಿದ್ದ ಕುಬೇರನನ್ನು ನೋಡಿ ಮೇನಾದೇವಿ, ಇವನೇ ರುದ್ರನೆಂದು ಹೇಳುತ್ತಾಳೆ. ಆಗ ನಾರದ ಇವನು ರುದ್ರನಲ್ಲವೆಂದು ಹೇಳುವಷ್ಟರಲ್ಲಿ ಈಶಾನ ಬಂದ. ಕುಬೇರನಗಿಂತಲೂ ಇಮ್ಮಡಿ ತೇಜಸ್ವಿಯಾದ ಈಶಾನನ್ನು ನೋಡಿ ಮೇನಾದೇವಿ ಇವನೇ ರುದ್ರನೆನ್ನುತ್ತಾಳೆ. ಅವನಲ್ಲ ಎನ್ನುತ್ತಾನೆ, ನಾರದ. ಈಶಾನನಿಗಿಂತಲೂ ಸುಂದರನಾದ ದೇವರಾಜ ಇಂದ್ರ ಅಲ್ಲಿಗೆ ಬರುತ್ತಾನೆ. ಅವನನ್ನು ನೋಡಿ ಮೇನಾದೇವಿ ಇವನು ಶಂಕರನೇ – ಎಂದು ಕೇಳುತ್ತಾಳೆ. ಆಗ ನಾರದ ಇವನು ದೇವೇಶ್ವರನಾದ ಇಂದ್ರ ಎನ್ನುತ್ತಾನೆ.

ಮಾಧ್ಯಮ ಮಿತ್ರರೊಡನೆ ದಲಿತ ಉದ್ದಿಮೆದಾರರ ಸಮಾಲೋಚನೆ

ದಲಿತ ಉದ್ಯಮಿಗಳಿಗೆ ವ್ಯಾಜ್ಯದ ನಿವೇಶನ: ಅಳಲು

ಬೆಂಗಳೂರು: 'ದಲಿತ ಉದ್ದಿಮೆದಾರರಿಗೆ ಹಂಚಿಕೆಯಾಗಿರುವ ನಿವೇಶನಗಳಿಗೆ ಹೋಗಲು ದಾರಿಯೇ ಇಲ್ಲ. ಕೆಲ ನಿವೇಶನಗಳಲ್ಲಿ ಹಿಂದಿನ ಭೂ ಮಾಲೀಕರು ಮನೆ ಕಟ್ಟುತ್ತಿದ್ದಾರೆ, ಜೋಳ ಬಿತ್ತನೆ ಮಾಡಿದ್ದಾರೆ. ಕೆಐಎಡಿಬಿ ಮಾಡಿರುವ ಯಡವಟ್ಟಿನಿಂದ ಉದ್ದಿಮೆ ತೆರೆಯುವ ಕನಸೇ ಕಮರಿ ಹೋಗಿದೆ!' ಇದು ದಲಿತ ಉದ್ದಿಮೆದಾರರು ತೋಡಿಕೊಂಡ ಅಳಲು.

ಕರ್ನಾಟಕ ದಲಿತ ಉದ್ದಿಮೆದಾರರ ಸಂಘ ಆಯೋಜಿಸಿದ್ದ ಮಾಧ್ಯಮ ಮಿತ್ರರೊಡನೆ ದಲಿತ ಉದ್ದಿಮೆದಾರರ ಸಮಾಲೋಚನಾ ಕಾರ್ಯಕ್ರಮದಲ್ಲಿ ಉದ್ಯಮಿಗಳು ತಮ್ಮ ಸಮಸ್ಯೆಗಳನ್ನು ವಿವರಿಸಿದರು.

'ಮೈಸೂರಿನ ಕೂರ್ಗಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಕೆಐಎಡಿಬಿ ಜಾಗ ಹಂಚಿಕೆ ಮಾಡಿದೆ. ಆದರೆ, ಸ್ಥಳೀಯರು ಜಾಗ ಬಿಟ್ಟುಕೊಡುತ್ತಿಲ್ಲ. ಹಲವು ವರ್ಷಗಳಿಂದ ಈ ಸಮಸ್ಯೆ ನನೆಗುದಿಗೆ ಬಿದ್ದಿದ್ದರೂ ಅಧಿಕಾರಿಗಳು ತಲೆಕೆಡಿಸಿಕೊಳ್ಳುತ್ತಿಲ್ಲ' ಎಂದು ಮೈಸೂರು ಜಿಲ್ಲಾ ದಲಿತ ಉದ್ದಿಮೆದಾರರ ಸಂಘದ ಅಧ್ಯಕ್ಷ ಮಂಜುನಾಥ್ ಹೇಳಿದರು.



ಸಮಾಲೋಚನಾ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಎಲ್‌.ಹನುಮಂತಯ್ಯ, ಪತ್ರಕರ್ತರಾದ ರಮಾಕಾಂತ್ ಆರ್ಯನ್, ಇಂದೂಧರ ಹೊನ್ನಾಪುರ, ಎಲ್‌.ಎಂ.ನಾಗರಾಜು, ಸಂಯುಕ್ತ ಕರ್ನಾಟಕ ಸಂಪಾದಕ ಹುಣಸವಾಡಿ ರಾಜನ್, ಸಂಘದ ಕಾರ್ಯಾಧ್ಯಕ್ಷ ಸಿ.ಜಿ. ಶ್ರೀನಿವಾಸನ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

'ಹಾಸನದ ಬ್ಲಾಕ್ -3 ಕೈಗಾರಿಕಾ ಪ್ರದೇಶದಲ್ಲಿ ದಲಿತರಿಗೆ ಮಂಜೂರು ಮಾಡಿದ್ದ ಜಾಗದಲ್ಲಿ ಕೆಎಂಎಫ್ ಕಟ್ಟಡ ನಿರ್ಮಿಸುತ್ತಿದೆ. ಕೆಲವರು ಮನೆ ಕಟ್ಟುತ್ತಿದ್ದರೆ, ಹಲವರು ಜೋಳ ಬಿತ್ತನೆ ಮಾಡಿದ್ದಾರೆ. ಜಾಗ ಬಿಡಿಸಿಕೊಡಬೇಕಾದ ಅಧಿಕಾರಿಗಳು ಅಸಹಾಯಕತೆ ವ್ಯಕ್ತಪಡಿಸುತ್ತಿದ್ದಾರೆ. ಹಣ ಪಾವತಿಸಲು ವಿಳಂಬ ಮಾಡಿದ ಕಾರಣಕ್ಕೆ ಬಡ್ಡಿ ವಿಧಿಸುತ್ತಿದ್ದಾರೆ' ಎಂದು ಹಾಸನ ಜಿಲ್ಲಾ ದಲಿತ ಉದ್ದಿಮೆದಾರರ ಸಂಘದ ಅಧ್ಯಕ್ಷ ಪ್ರಸನ್ನ ಮತ್ತು ಕಾರ್ಯಾಧ್ಯಕ್ಷ ಸಂತೋಷ್ ಅಳಲು ತೋಡಿಕೊಂಡರು. 'ನೆಲಮಂಗಲದಲ್ಲಿ ಕೈಗಾರಿಕಾ ಪ್ರದೇಶಕ್ಕೆ ಹೋಗಲು ದಾರಿಯೇ ಇಲ್ಲ. ವ್ಯಾಜ್ಯದ ಜಾಗಗಳನ್ನೇ ಹುಡುಕಿ ದಲಿತ ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗುತ್ತಿದೆ. ದಲಿತ ಉದ್ದಿಮೆದಾರರು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಮನವರಿಕೆ ಮಾಡಿಸಲು ಈ ಸಮಾಲೋಚನೆ ಆಯೋಜಿಸಲಾಗಿದೆ' ಎಂದು ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಶ್ರೀನಿವಾಸನ್ ಹೇಳಿದರು.

ಸಹಾಯಧನ ಹೆಚ್ಚಳಕ್ಕೆ ಆಗ್ರಹ

'ದಲಿತ ನಿರುದ್ಯೋಗಿಗಳು ವಾಹನಗಳ ಖರೀದಿಗೆ ನೀಡುತ್ತಿದ್ದ ₹5 ಲಕ್ಷ ಸಹಾಯಧನವನ್ನು ಈಗ ₹2 ಲಕ್ಷಕ್ಕೆ ಇಳಿಸಲಾಗಿದೆ. ಇದನ್ನು ಮರಳಿ ಹೆಚ್ಚಿಸಬೇಕು' ಎಂದು ರಾಜ್ಯಸಭೆ ಸದಸ್ಯ ಎಲ್.ಹನುಮಂತಯ್ಯ ಆಗ್ರಹಿಸಿದರು.

ಸಹಾಯಧನ ಇಳಿಸಿದ ಬಳಿಕ ಟ್ಯಾಕ್ಸಿಗಾಗಿ ವಾಹನ ಖರೀದಿ ಮಾಡುವ ದಲಿತ ಯುವಕರ ಸಂಖ್ಯೆ ಕಡಿಮೆಯಾಗಿದೆ. ಸಹಾಯಧನ ಸಿಕ್ಕರೆ ದಲಿತ ಯುವಕರು ವಾಹನ ಮಾಲೀಕರಾಗುತ್ತಾರೆ. ಇಡೀ ಕುಟುಂಬವೇ ಅದನ್ನು ಆಧರಿಸಿ ಜೀವನ ನಿರ್ವಹಿಸುತ್ತದೆ ಎಂದರು.



ನೂರು ಕ್ಷೇತ್ರಗಳಿಗೆ ಜೆಡಿಎಸ್ ಅಭ್ಯರ್ಥಿಗಳ ಘೋಷಣೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಕೋಲಾರ: ಗಡಿ ಜಿಲ್ಲೆಯ ಕುರುಡುಮಲೆಯ ಗಣಪತಿಗೆ ಮಂಗಳವಾರ (ನ.1) ಬೆಳಿಗ್ಗೆ 9 ಗಂಟೆಗೆ ಪೂಜೆ ಸಲ್ಲಿಸಿ ಜೆಡಿಎಸ್‌ನ ಮಹತ್ವಾಕಾಂಕ್ಷೆಯ 'ಪಂಚರತ್ನ' ರಥಯಾತ್ರೆ ಹಾಗೂ ಚುನಾವಣಾ ಪ್ರಚಾರಕ್ಕೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡರು ಅಧಿಕೃತ ಚಾಲನೆ ನೀಡಲಿದ್ದಾರೆ.

ವಿಧಾನಸಭೆ ಚುನಾವಣೆ ಘೋಷಣೆಗೆ ಮುನ್ನವೇ ಪಕ್ಷದ 100 ಅಭ್ಯರ್ಥಿಗಳ ಪಟ್ಟಿಯನ್ನೂ ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡುತ್ತಿದ್ದು ರಾಜಕೀಯ ವಲಯದಲ್ಲಿ ಕುತೂಹಲ ಮೂಡಿಸಿದೆ.

ಮಧ್ಯಾಹ್ನ 2.30ಕ್ಕೆ ಮುಳಬಾಗಿಲು ನಗರದ ಬಾಲಾಜಿ ಭವನದ ಪಕ್ಕದ ಮೈದಾನದಲ್ಲಿ ಬೃಹತ್ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ರಾಜ್ಯ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಭಾಗವಹಿಸಲಿದ್ದಾರೆ.


ಮೊದಲ ಹಂತದಲ್ಲಿ ನ.1ರಿಂದ ಡಿ.6ರವರೆಗೆ 6 ಜಿಲ್ಲೆಯ 35 ಕ್ಷೇತ್ರಗಳಲ್ಲಿ ಈ ಯಾತ್ರೆ ಸಾಗಲಿದೆ. ಯಾತ್ರೆ ಜೊತೆ ನಿತ್ಯ ಆಯಾ ಕ್ಷೇತ್ರದಲ್ಲಿ ಗ್ರಾಮ ವಾಸ್ತವ್ಯ ಇರಲಿದೆ.

ಪ್ರಜಾವಾಣಿ@75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ
ಇನ್ನಷ್ಟು ಪ್ರತಿಕ್ರಿಯೆಗಳನ್ನು prajavani.net ನಲ್ಲಿ ಓದಬಹುದು...

ಪ್ರಜಾವಾಣಿಗೆ ಋಣಿ



ಅರವತ್ತರ ದಶಕದಿಂದ ಪ್ರಜಾವಾಣಿ ನನ್ನ ಬಾಳಿನ ಏಳಿಗೆಗೆ ಇಂಬಾಗಿದೆ; ನನ್ನ ಅರಿವಿನ ಪರಧಿಯನ್ನು ವಿಸ್ತರಿಸಿದೆ. ಎನಿತೆನಿತೋ ವಿಷಯಗಳನ್ನು ನೇರ ತಿಳಿಸಿದೆ; ಎನಿತೆನಿತೊ ಜ್ಞಾನಗಳ ಮನದಟ್ಟು ಮಾಡಿಕೊಟ್ಟಿದೆ. ಒಂದು ದಿನ ಓದದಿದ್ದರೆ ಏನೋ ಕಳಕೊಂಡಂತೆ ಅನಿಸುತ್ತದೆ. ಬೆಳಗಿನ ಕಾಫಿ ಜೊತೆಗೇ ನನ್ನ ಕೈಯಲಿ ಇರಲೇಬೇಕು ಮುಂಜಾನೆಯ ಪತ್ರಿಕೆ!

'ಪ್ರಜಾವಾಣಿ' ಓದಿನಿಂದ ನನ್ನ ಭಾಷಾಕೋಶ ತುಂಬಿದೆ. ಪ್ರಜಾವಾಣಿ ಅಕ್ಕರೆ ಮಡಿಲಿನಲ್ಲಿ ನನ್ನ ಕಥೆ, ಕವಿತೆ, ಲೇಖನ, ವಿಮರ್ಶೆ ಬೆಳಕು ಕಂಡಿವೆ. ನಾನು ಇಷ್ಟರಮಟ್ಟಿಗೆ ಬೆಳೆಯಲಿಕ್ಕೆ ಪ್ರಜಾವಾಣಿ ಒಡನಾಟ ಸಹಕಾರಿಯಾಗಿದೆ! ಸಾಹಿತ್ಯದ ಅಭಿರುಚಿ ಹೆಚ್ಚಿಸುವಲ್ಲಿ, ಬುದ್ಧಿ ಚುರುಕುಗೊಳಿಸುವಲ್ಲಿ, ಸಾಮಾನ್ಯಜ್ಞಾನ ಪಡೆಯುವಲ್ಲಿ... ಬೌದ್ಧಿಕತೆ ಬೆಳೆಯುವಲ್ಲಿ, ನಾನೊಂದು ಹೆಸರು ಮಾಡುವಲ್ಲಿ ಪ್ರಜಾವಾಣಿ ಪಾತ್ರ ಬಹಳವಾಗಿದೆ. ಅದಕ್ಕಾಗಿ ನಾನು ಋಣಿ.

ಡಾ.ದೊಡ್ಡರಂಗೇಗೌಡ, ಬೆಂಗಳೂರು

ಭಾಷೆ ಬೆಳೆಸಿತು



'ಪ್ರಜಾವಾಣಿ' ತನ್ನ ಅಮೃತ ಮಹೋತ್ಸವ ಆಚರಿಸಿಕೊಳ್ಳುವ ಹೊತ್ತಲ್ಲಿ ನಾವೆಲ್ಲರು ಸೇರಿ ಅದರ ಉತ್ಸವದಲ್ಲಿ ಪಾಲ್ಗೊಂಡು ಅದರ ವ್ಯಕ್ತಿತ್ವವನ್ನು ಹಾಡಿ ಹೊಗಳದಿದ್ದರೆ, ಇಷ್ಟು ವರ್ಷ ಆ ಪತ್ರಿಕೆ ಓದಿಯೂ ನಿಷ್ಪ್ರಯೋಜಕರು ಅನ್ನಿಸುತ್ತದೆ.

ನಾನು 'ಪ್ರಜಾವಾಣಿ' ಓದಲು ಪ್ರಜಾ ಮತ್ತು ವಾಣಿ ಮಧ್ಯದಲ್ಲಿ ಇರುವ ಬಸವನೇ ಮುಖ್ಯಕಾರಣ. ಅದೇ ಆಕರ್ಷಣೆ ಕೂಡ. ಪತ್ರಿಕೆಯನ್ನು ನಾನು ಗುರುತಿಸುತ್ತಿದ್ದದ್ದೇ ಬಸವನ ಮೂಲಕವಾಗಿ.

'ಈರಣ್ಣನ ಮುಂದೆ ಬಸವ ಕೂರುತ್ತಾನೆ. ಬಸವ ಕಿವಿಯಲ್ಲಿ ಭಕ್ತಾದಿಗಳು ತಮ್ಮ ಸಂದೇಶ ಉಸುರಿದರೆ, ಅದನ್ನು ಬಸವ ಈರಣ್ಣನಿಗೆ ಅಂದರೆ ಶಿವನಿಗೆ ಮುಟ್ಟಿಸುತ್ತಾನೆ' ಎಂದು ನನ್ನ ಅಜ್ಜಿ ಸುಂದರಮ್ಮ ಮತ್ತು ಅಮ್ಮ ಹೇಳುತ್ತಿದ್ದರು. ಹಾಗೇ ಈ ಬಸವ ಕೂಡ ಇರಬೇಕೆನ್ನುವ ಕುತೂಹಲ ನನಗೆ ಆಗ. ಜೊತೆಗೆ ಅಮ್ಮ ನನಗೆ ಈ ಪತ್ರಿಕೆಯಲ್ಲಿ ಬರುತ್ತಿದ್ದ 'ಮೊದ್ದುಮಣಿ'ಯನ್ನು ಕತ್ತರಿಸಿ ಕ್ರಮವಾಗಿ ಜೋಡಿಸಿ ನನಗೆ ಕತೆ ಹೇಳುತ್ತಿದ್ದರು. ಈ ಎರಡು ವಿಷಯಗಳೂ ನನ್ನನ್ನು ಬಾಲ್ಯದಿಂದಲೇ ಈ ಪತ್ರಿಕೆಯನ್ನು ಓದುವಂತೆ ಮಾಡಿದೆ. ನನ್ನ ಭಾಷೆಯನ್ನೂ ತಿದ್ದಿತು ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆ ಇದೆ. ಪ್ರಜಾವಾಣಿ ಅಮೃತ ಮಹೋತ್ಸವ ಆಚರಿಸಿಕೊಳ್ಳುತ್ತಿರುವುದಕ್ಕೆ ಅಭಿನಂದನೆಗಳು.

ಬಿ. ಜಯಶ್ರೀ, ಬೆಂಗಳೂರು

ವಿದ್ಯಾರ್ಥಿ ದಿನದಿಂದಲೂ ಒಡನಾಡಿ



ಪ್ರಜಾವಾಣಿ ಪತ್ರಿಕೆ ನನಗೆ ವಿದ್ಯಾರ್ಥಿ ದಿನದಿಂದ ಸದ್ಯದವರೆಗೂ ನನ್ನ ಒಡನಾಡಿ ಹಾಗೂ ಸ್ನೇಹಿತ. ಕಾಫೀ ಚಹಾ ಬಿಡಬಹುದು, ಆದರೆ ಬೆಳಿಗ್ಗೆ ಎದ್ದ ತಕ್ಷಣ ಪ್ರಜಾವಾಣಿ ಓದದಿದ್ದರೆ ಏನೋ ಒಂಥರಾ ಬೇಸರ ಯಾವುದನ್ನೋ ಕಳೆದುಕೊಂಡಂತೆ ಕಳವಳ. ರಾಜ್ಯದ ಹಲವಾರು ಕಡೆಗಳಲ್ಲಿ ನಾನು ಸರ್ಕಾರಿ ಸೇವೆ ಸಲ್ಲಿಸಿದರೂ ಪ್ರಜಾವಾಣಿ ಓದುವುದನ್ನು ಬಿಟ್ಟಿಲ್ಲ. ಹಲವಾರು ಮೈಲುಗಳನ್ನು ದಾಟಿ ಅಮೃತ ಮಹೋತ್ಸವ ಆಚರಿಸುತ್ತಿದೆ. ಇದು ಕರ್ನಾಟಕದ ಹೆಮ್ಮೆ.

ಗುರುಸಿದ್ಧಯ್ಯ ಹಿರೇಮಠ, ಕವಿ, ಲೇಖಕರು, ಬೆಳಗಾವಿ

ಮೊರ್ಬಿ ಅವಘಡ: ಮಸಣದಂತಾದ ಮಚ್ಚು ನದಿ ದಂಡೆ, ತಮ್ಮವರಿಗಾಗಿ ಆಸ್ಪತ್ರೆ – ನದಿ ದಡದಲ್ಲಿ ಜನರ ಹುಡುಕಾಟ

ಬದುಕು ಮುಳುಗಿಸಿದ ತೂಗುಸೇತುವೆ

ಮೊರ್ಬಿ/ಅಹಮದಾಬಾದ್/ವರ್ಧಮಾನ್ (ಪಿಟಿಐ): ಮೊರ್ಬಿ ತೂಗುಸೇತುವೆ ಕುಸಿತವು ಹಲವರ ಬದುಕುಗಳನ್ನು ಕಿತ್ತುಕೊಂಡಿದೆ. ಕೆಲವು ಕುಟುಂಬಗಳು ತಮ್ಮ ಅಪ್ಪಂದಿರನ್ನು ಕಳೆದು ಕೊಂಡಿದ್ದರೆ, ಕೆಲವು ಕುಟುಂಬಗಳೇ ನಾಶವಾಗಿ ಹೋಗಿವೆ. ಕೆಲವು ಮಕ್ಕಳು ತಮ್ಮ ಹೆತ್ತವರನ್ನು ಕಳೆದುಕೊಂಡಿದ್ದರೆ, ಕೆಲವರು ತಮ್ಮ ಎಲ್ಲಾ ಮಕ್ಕಳನ್ನು ಕಳೆದು ಕೊಂಡಿದ್ದಾರೆ. ನೂರಾರು ಜನರು ತಮ್ಮವರಿಗಾಗಿ ಮೊರ್ಬಿ ಆಸ್ಪತ್ರೆಯ ಶವಾಗಾರದಲ್ಲಿ ಹುಡುಕಾಡುತ್ತಿದ್ದರೆ, ನೂರಾರು ಜನರು ಮಚ್ಚು ನದಿ ದಡದಲ್ಲಿ ನಿಂತು ತಮ್ಮವರಿಗಾಗಿ ಕಾಯುತ್ತಿದ್ದಾರೆ.

10 ವರ್ಷದ ಶಿವಂ ತನ್ನ ಕಣ್ಣೆದುರೇ ಅಪ್ಪ–ಅಮ್ಮ ಮತ್ತು ಅಣ್ಣ ನೀರಿನಲ್ಲಿ ಮುಳುಗಿ ಸತ್ತಿದ್ದನ್ನು ಕಂಡಿದ್ದಾನೆ. ಕುಟುಂಬದ ಎಲ್ಲರೂ ನೀರಿಗೆ ಬಿದ್ದರೆ, ಶಿವಂ ಸೇತುವೆಯ ಬೇಲಿಗೆ ಸಿಲುಕಿ ಬದುಕುಳಿದಿದ್ದಾನೆ. ಎಲ್ಲರನ್ನೂ ಕಳೆದು ಕೊಂಡ ಬಾಲಕನನ್ನು ಸಂತೈಸಲು ಯತ್ನಿಸಿ ಅವನ ಸಂಬಂಧಿಕರು ಸೋತಿದ್ದಾರೆ.


ಮೊರ್ಬಿ ಆಸ್ಪತ್ರೆಯ ಶವಾಗಾರದ ಹೊರಗೆ ತಮ್ಮವರಿಗಾಗಿ ಸಾರ್ವಜನಿಕರು ಹುಡುಕಾಡಿದರು –ಎಎಫ್‌ಪಿ ಚಿತ್ರ

ಮೊರ್ಬಿ ಪಟ್ಟಣದಲ್ಲಿ ಸಣ್ಣ ಹೋಟೆಲ್ ನಡೆಸುವ ಜಡೇಜಾ ಸೋದರರ ಕುಟುಂಬವೇ ಬಹುತೇಕ ನಾಶವಾಗಿದೆ. ಮೂವರು ಸೋದರರ ಕುಟುಂಬದ ಏಳು ಮಂದಿ ಮೊರ್ಬಿ ಸೇತುವೆಗೆ ಭಾನುವಾರ ಭೇಟಿ ನೀಡಿದ್ದರು. ಆದರೆ, ಒಬ್ಬರೂ ಮರಳಿಲ್ಲ.

ಮೂವರೂ ಸೋದರರು ತಮ್ಮ ಹೋಟೆಲ್ ಕೆಲಸದಲ್ಲಿ ನಿರತರಾಗಿ ರಾತ್ರಿ ಮನೆಗೆ ವಾಪಸಾಗಿದ್ದಾರೆ. ಆದರೆ ಮನೆಯ ಬಾಗಿಲಿಗೆ ಬೀಗ ಹಾಕಿತ್ತು. ಮೂವರು ತಮ್ಮ ತಮ್ಮ ಪತ್ನಿಯರಿಗೆ ಕರೆ ಮಾಡಿದ್ದಾರೆ. ಆದರೆ, ಯಾರೊಬ್ಬರ ಫೋನ್ ಸಹ ಕರೆ ವ್ಯಾಪ್ತಿಗೆ ಬಂದಿಲ್ಲ. ಹಲವು ಗಂಟೆಗಳ ಹುಡುಕಾಟದ ನಂತರ ಮೂವರು ಸೋದರರ ಪತ್ನಿಯರು ಮತ್ತು ನಾಲ್ವರು ಮಕ್ಕಳ ಶವಗಳು ಮೊರ್ಬಿ ಆಸ್ಪತ್ರೆಯ ಶವಾಗಾರದಲ್ಲಿ ಪತ್ತೆಯಾಗಿವೆ. ತಮ್ಮವರನ್ನು ಕಳೆದುಕೊಂಡ ಜಡೇಜಾ ಸೋದರರು ಶವಾಗಾರದ ಹೊರಗೆ ದಿಗ್ಭ್ರಾಂತರಾಗಿ ಕೂತಿದ್ದರು.

ರಾಜ್‌ಕೋಟ್ ಲೋಕಸಭಾ ಕ್ಷೇತ್ರದ ಸಂಸದ ಮೋಹನ್ ಕುಂದಾರಿಯಾ ಅವರ ಸೋದರನ ಸಂಬಂಧಿಯ ಕುಟುಂಬದ ಎಲ್ಲಾ 12 ಜನರು ಮಚ್ಚು ನದಿ ನೀರಿನಲ್ಲಿ ಸಿಲುಕಿ ಮೃತ-ಪಟ್ಟಿದ್ದಾರೆ. ಕುಂದಾರಿಯಾ ಅವರ ಸೋದರನ ಮಾವನ ಕುಟುಂಬದ ಮೂವರು ಪುರುಷರು, ನಾಲ್ವರು ಮಹಿಳೆಯರು ಮತ್ತು ಐವರು ಮಕ್ಕಳು ಈ ದುರಂತದಲ್ಲಿ ಮೃತಪಟ್ಟು ಇಡೀ ಕುಟುಂಬವೇ ಇಲ್ಲದಂತಾಗಿದೆ.

ಮೊರ್ಬಿಯಲ್ಲಿ ಇಂತಹ ಹತ್ತಾರು, ಕಣ್ಣೀರಿನ ಕಥೆಗಳು ಇವೆ.

ನೆನಪಾದ ಅಣೆಕಟ್ಟೆ ದುರಂತ

ಭಾನುವಾರದ ತೂಗುಸೇತುವೆ ದುರಂತವು 43 ವರ್ಷ ಹಿಂದಿನ ಭೀಕರ ದುರಂತವನ್ನು ನೆನಪಿಸಿದೆ. ಮೊರ್ಬಿ ನಗರದ ಉತ್ತರಕ್ಕೆ ಮಚ್ಚು ನದಿಗೆ ನಿರ್ಮಿಸಲಾಗಿದ್ದ ಮೊರ್ಬಿ ಅಣೆಕಟ್ಟೆ 1979ರಲ್ಲಿ ಒಡೆದಿತ್ತು. ಆ ವರ್ಷದ ಆಗಸ್ಟ್‌ನಲ್ಲಿ ಸತತ ಎರಡು ವಾರ ಸುರಿದಿದ್ದ ಭಾರಿ ಮಳೆಯಿಂದ ಅಣೆಕಟ್ಟೆ ಭರ್ತಿಯಾಗಿತ್ತು. ಹೊರಹರಿವಿಗಿಂತ ಒಳಹರಿವು ಹೆಚ್ಚಾದ ಕಾರಣ, ಅಣೆಕಟ್ಟೆ ದುರ್ಬಲವಾಗಿತ್ತು.

'ಇದನ್ನು ಗಮನಿಸದ ಮೊರ್ಬಿ ನಿವಾಸಿಗಳು ಆಗಸ್ಟ್ 10ರಂದು ನಿದ್ರೆಗೆ ಜಾರಿದ್ದರು. ಆದರೆ, ಆಗಸ್ಟ್ 11ರ ನಸುಕಿನಲ್ಲಿ ಅಣೆಕಟ್ಟೆ ಒಡೆಯಿತು. ಭಾರಿ ಪ್ರಮಾಣದ ನೀರು ಮೊರ್ಬಿ ಪಟ್ಟಣವನ್ನು ಮುಳುಗಿಸಿತು. ಆ ಅವಘಡದಲ್ಲಿ ಮೃತಪಟ್ಟವರೆಷ್ಟು ಎಂಬುದರ ನಿಖರ ದಾಖಲೆ ಇಲ್ಲ. 1,800 ಜನರು ಮೃತಪಟ್ಟಿದ್ದರು ಎಂದು ಸರ್ಕಾರಿ ದಾಖಲೆಗಳು ಹೇಳಿದರೆ, 26,000ಕ್ಕೂ ಹೆಚ್ಚು ಜನರು ಆ ಅವಘಡದಲ್ಲಿ ಮೃತಪಟ್ಟಿದ್ದರು ಎಂದು ಮತ್ತೆ ಕೆಲವು ದಾಖಲೆಗಳು ಹೇಳುತ್ತವೆ.

ಗಿನ್ನೆಸ್ ವಿಶ್ವ ದಾಖಲೆ ಪುಸ್ತಕದಲ್ಲಿ ಇದು ಅತ್ಯಂತ ದೊಡ್ಡ ಅಣೆಕಟ್ಟೆ ದುರಂತ ಎಂದು ದಾಖಲಾಗಿತ್ತು. ಈ ಅವಘಡವನ್ನು 'ನೋ ಒನ್ ಹ್ಯಾಡ್ ಎ ಟಂಗ್ ಟು ಸ್ಪೀಕ್: ದಿ ಅನ್‌ಟೋಲ್ಡ್ ಸ್ಟೋರಿ ಆಫ್ ಒನ್ ಆಫ್ ಹಿಸ್ಟರೀಸ್ ಡೆಡ್ಲಿಯೆಸ್ಟ್ ಫ್ಲಡ್' ಎಂಬ ಪುಸ್ತಕದಲ್ಲಿ ಚಿತ್ರಿಸಲಾಗಿದೆ. ಮೊರ್ಬಿ ತೂಗುಸೇತುವೆ ದುರಂತದ ಸಂದರ್ಭದಲ್ಲಿ ಇಲ್ಲಿನ ಜನ, 43 ವರ್ಷಗಳ ಹಿಂದಿನ ಭೀಕರ ದುರಂತವನ್ನು ನೆನಪಿಸಿಕೊಳ್ಳುತ್ತಿದ್ದಾರೆ.

ಟೆಂಡರ್ ದಾಖಲೆ ಲಭ್ಯವಿಲ್ಲ, ಜಾಲತಾಣವೂ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊರ್ಬಿ ತೂಗು ಸೇತುವೆಯ ನವೀಕರಣ ಮತ್ತು ನಿರ್ವಹಣೆಯನ್ನು ಒರೆವಾ ಗ್ರೂಪ್‌ಗೆ ವಹಿಸಲಾಗಿತ್ತು ಎಂದು ಮೊರ್ಬಿ ಜಿಲ್ಲಾಡಳಿತವು ಹೇಳಿದೆ. 'ಸೇತುವೆಯನ್ನು ₹ 2 ಕೋಟಿ ವೆಚ್ಚದಲ್ಲಿ ಸಂಪೂರ್ಣವಾಗಿ ನವೀಕರಣ ಮಾಡಲಾಗಿದೆ' ಎಂದು ಒರೆವಾ ಗ್ರೂಪ್‌ನ ಅಧಿಕಾರಿಗಳು ಇದೇ ಅಕ್ಟೋಬರ್ 24ರಂದು ಹೇಳಿಕೆ ನೀಡಿದ್ದರು. ಆದರೆ, ನವೀಕರಣಕ್ಕೆ ಸಂಬಂಧಿಸಿದ ಟೆಂಡರ್ ಅಥವಾ ಒಪ್ಪಂದ ದಾಖಲೆಗಳು ಲಭ್ಯವಿಲ್ಲ.

ಮೊರ್ಬಿ ಜಿಲ್ಲಾಡಳಿತದ ಅಧಿಕೃತ ಜಾಲತಾಣದಲ್ಲಿ 2018ರ ನಂತರದ ಯಾವುದೇ ಟೆಂಡರ್ ದಾಖಲೆಗಳು ಇಲ್ಲ. ಹೀಗಾಗಿ ನವೀಕರಣಕ್ಕೆ ಸಂಬಂಧಿಸಿದ ಯಾವುದೇ ಲಿಖಿತ ದಾಖಲೆ ಲಭ್ಯವಿಲ್ಲ.

ಅಜಂತಾ ಗಡಿಯಾರ ತಯಾರಿಸುವ ಒರೆವಾ ಗ್ರೂಪ್ ಈ ಸೇತುವೆಯ ನಿರ್ವಹಣೆಯ ಜವಾಬ್ದಾರಿ ಹೊತ್ತುಕೊಂಡಿತ್ತು. ನವೀಕರಣದ ಗುತ್ತಿಗೆ ಪಡೆದಿದ್ದ ಒರೆವಾ ಕಂಪನಿಯು, ಕಾಮಗಾರಿ ನಡೆಸಲು ಬೇರೆ ಕಂಪನಿಗೆ ಉಪಗುತ್ತಿಗೆ ನೀಡಿದೆ. ಈ ಬಗ್ಗೆ ಒರೆವಾ ಕಂಪನಿಯ ವಕ್ತಾರರೇ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ. ಆದರೆ, ಈ ಗುತ್ತಿಗೆ ಮತ್ತು ಉಪಗುತ್ತಿಗೆಗೆ ಸಂಬಂಧಿಸಿದಂತೆ ದಾಖಲೆಗಳು ಲಭ್ಯವಿಲ್ಲ. ಒರೆವಾ ಕಂಪನಿಯ ಜಾಲತಾಣಗಳು ಸೋಮವಾರ ಬೆಳಿಗ್ಗೆಯಿಂದ ಕಾರ್ಯನಿರ್ವಹಿಸುತ್ತಿಲ್ಲ. ಹೀಗಾಗಿ ಯಾವ ದಾಖಲೆಗಳೂ ಲಭ್ಯವಿಲ್ಲ.

'ಟೆಂಡರ್ ಇಲ್ಲದೆಯೇ ಕಂಪನಿಗೆ ನವೀಕರಣದ ಗುತ್ತಿಗೆ ನೀಡಲಾಗಿದೆ' ಎಂದು ಎನ್‌.ಡಿ.ಟಿವಿ ವರದಿ ಮಾಡಿದೆ.

ಗುಜರಾತ್ ಹ್ಯಾಶ್‌ಟ್ಯಾಗ್‌ಗೆ ತಡೆ

ಮೊರ್ಬಿ ತೂಗುಸೇತುವೆ ಅವಘಡವು ವರದಿಯಾಗುತ್ತಿದ್ದಂತೆಯೇ ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ #Gujarat ಮತ್ತು #Morbi ಹ್ಯಾಶ್‌ಟ್ಯಾಗ್ ಟ್ರೆಂಡ್ ಆಗಿದ್ದವು. 'ಅಭಿವೃದ್ಧಿಯ ಗುಜರಾತ್ ಮಾದರಿ'ಯ ಅಸಲಿಯತ್ತು ಜಗಜ್ಜಾಹೀರಾಗಿದೆ ಎಂದು ಹಲವರು #Gujarat ಹ್ಯಾಶ್‌ಟ್ಯಾಗ್ ಬಳಸಿ ಪೋಸ್ಟ್ ಮಾಡಿದ್ದರು. ಗುಜರಾತ್ ಸರ್ಕಾರ, ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸಲು ಈ ಹ್ಯಾಶ್‌ಟ್ಯಾಗ್ ಅನ್ನು ಬಳಸಲಾಗಿತ್ತು. ಈ ಹ್ಯಾಶ್‌ಟ್ಯಾಗ್‌ನಲ್ಲಿ ಪೋಸ್ಟ್‌ಗಳ ಸಂಖ್ಯೆ ಹೆಚ್ಚಾದ ಬೆನ್ನಲ್ಲೇ, ಸೋಮವಾರ ಬೆಳಿಗ್ಗೆ ಈ ಹ್ಯಾಶ್‌ಟ್ಯಾಗ್ ಅನ್ನು ಫೇಸ್‌ಬುಕ್ ಸ್ಥಗಿತಗೊಳಿಸಿತು.

'ಸಮುದಾಯ ನೀತಿಗಳನ್ನು ಉಲ್ಲಂಘಿಸಿದ ಕಾರಣ #Gujarat ಹ್ಯಾಶ್‌ಟ್ಯಾಗ್ ಬಳಸಿದ ಪೋಸ್ಟ್‌ಗಳು ಲಭ್ಯವಿಲ್ಲ' ಎಂದು ಫೇಸ್‌ಬುಕ್‌ನಲ್ಲಿ ಬಿತ್ತರವಾಗುತ್ತಿತ್ತು. ಇದಕ್ಕೆ ಭಾರಿ ಆಕ್ಷೇಪ ವ್ಯಕ್ತವಾಯಿತು. ತನ್ನ ವಿರುದ್ಧದ ಟೀಕೆಯನ್ನು ಹತ್ತಿಕ್ಕಲು ಬಿಜೆಪಿ ಸರ್ಕಾರವು ಫೇಸ್‌ಬುಕ್ ಅನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಹಲವರು ಆರೋಪಿಸಿದ್ದಾರೆ. ಫೇಸ್‌ಬುಕ್ ನಡೆಗೆ ಟೀಕೆ ವ್ಯಕ್ತವಾಗಿದೆ.



#Gujarat ಹ್ಯಾಶ್‌ಟ್ಯಾಗ್‌ಗೆ ಸಂಬಂಧಿಸಿದಂತೆ ಫೇಸ್‌ಬುಕ್‌ನಲ್ಲಿ ಬಿತ್ತರವಾದ ಸೂಚನೆ

ಸಂಕ್ಷಿಪ್ತ ಸುದ್ದಿ

ದೇಶದ್ರೋಹ: ಕೇಂದ್ರಕ್ಕೆ ಕಾಲಾವಕಾಶ ನೀಡಿದ 'ಸುಪ್ರೀಂ'

ನವದೆಹಲಿ: ದೇಶದ್ರೋಹಕ್ಕೆ ಸಂಬಂಧಿಸಿದ ಸೆಕ್ಷನ್ 124(ಎ)ಗೆ ಈ ವರ್ಷದ ಮೇ 11ರಂದು ತಡೆ ನೀಡಿದ್ದ ಸುಪ್ರೀಂ ಕೋರ್ಟ್, ಬ್ರಿಟಿಷರ ಕಾಲದ ಈ ಸೆಕ್ಷನ್ ಕುರಿತು ಪುನರ್‌ಪರಿಶೀಲನೆ ನಡೆಸಲು ಕೇಂದ್ರ ಸರ್ಕಾರಕ್ಕೆ ಸೋಮವಾರ ಹೆಚ್ಚುವರಿ ಕಾಲಾವಕಾಶ ಮಂಜೂರು ಮಾಡಿದೆ.

'ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಸರ್ಕಾರ ಏನಾದರೂ ತೀರ್ಮಾನ ತೆಗೆದುಕೊಳ್ಳಬಹುದು. ಹೀಗಾಗಿ ಹೆಚ್ಚುವರಿ ಸಮಯಾವಕಾಶ ನೀಡಿ' ಎಂದು ಅಟಾರ್ನಿ ಜನರಲ್ ಆರ್‌.ವೆಂಕಟರಮಣಿ ಅವರು ಮುಖ್ಯ ನ್ಯಾಯಮೂರ್ತಿ ಯು.ಯು.ಲಲಿತ್, ನ್ಯಾಯಮೂರ್ತಿಗಳಾದ ಎಸ್‌.ರವೀಂದ್ರ ಭಟ್ ಮತ್ತು ಬೇಲಾ ಎಂ.ತ್ರಿವೇದಿ ಅವರನ್ನೊಳಗೊಂಡ ನ್ಯಾಯಾಪೀಠಕ್ಕೆ ಮನವಿ ಮಾಡಿದರು.

'ನ್ಯಾಯಾಲಯ ಈಗಾಗಲೇ ಮಧ್ಯಂತರ ತೀರ್ಪು ಪ್ರಕಟಿಸಿರುವುದ-ರಿಂದ ಈ ವಿಚಾರವಾಗಿ ಆತಂಕಪಡುವ ಅಗತ್ಯವೇನಿಲ್ಲ. ಸಂಸತ್ತಿನ ಚಳಿಗಾಲದ ಅಧಿವೇಶನದ ಬಳಿಕ ಈ ಕುರಿತ ವಿಚಾರಣೆ ನಡೆಸುವುದು ಸೂಕ್ತ' ಎಂದೂ ಅವರು ಪೀಠಕ್ಕೆ ತಿಳಿಸಿದರು.

ಅವರ ಮನವಿ ಪುರಸ್ಕರಿಸಿದ ನ್ಯಾಯಪೀಠವು 2023ರ ಜನವರಿಗೆ ವಿಚಾರಣೆ ಮುಂದೂಡಿತು.

ಚರ್ಮಗಂಟು ರೋಗ: 'ಸುಪ್ರೀಂ' ನೋಟಿಸ್

ನವದೆಹಲಿ (ಪಿಟಿಐ): 'ಜಾನುವಾರುಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಚರ್ಮಗಂಟು ರೋಗ ತಡೆಗೆ ರಾಷ್ಟ್ರೀಯ ಆರೋಗ್ಯ ಯೋಜನೆ ರೂಪಿಸುವಂತೆ ಕೋರಿರುವ ಅರ್ಜಿ ಸಂಬಂಧ ತಕ್ಷಣ ಪ್ರತಿಕ್ರಿಯೆ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ಕೇಂದ್ರ ಸರ್ಕಾರ ಮತ್ತು ಆರು ರಾಜ್ಯಗಳಿಗೆ ಸೂಚನೆ ನೀಡಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜೆ.ಬಿ. ಪಾರ್ದಿವಾಲಾ ಅವರಿದ್ದ ಪೀಠವು, ಪುಣೆ ಮೂಲದ ಸರ್ಕಾರೇತರ ಸಂಸ್ಥೆ ಆಯುರ್ವೇದ ಮಹಾಸಭಾ ಫೌಂಡೇಷನ್ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿತು.

ಬಿಎಸ್‌ವೈ ವಿರುದ್ಧ ತನಿಖೆ: ತಡೆಯಾಜ್ಞೆ ವಿಸ್ತರಣೆ

ನವದೆಹಲಿ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವಸತಿ ಯೋಜನೆಯೊಂದರ ಕಾಮಗಾರಿಯ ಗುತ್ತಿಗೆ ನೀಡಲು ಗುತ್ತಿಗೆದಾರರಿಂದ ಲಂಚ ಪಡೆದ ಆರೋಪದ ಮೇಲೆ ಬಿಜೆಪಿ ಶಾಸಕ ಬಿ.ಎಸ್‌.ಯಡಿಯೂರಪ್ಪ ವಿರುದ್ಧ ಲೋಕಾಯುಕ್ತ ಪೊಲೀಸರು ದಾಖಲಿಸಿರುವ ಎಫ್‌ಐಆರ್‌ನ ತನಿಖೆಗೆ ನೀಡಿದ್ದ ತಡೆಯಾಜ್ಞೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಿಸ್ತರಿಸಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಹಿಮಾ ಕೊಹ್ಲಿ ಅವರನ್ನು ಒಳಗೊಂಡ ಪೀಠವು ಬಿಜೆಪಿಯ ಹಿರಿಯ ನಾಯಕನ ಮನವಿಯ ಮೇರೆಗೆ ಕರ್ನಾಟಕ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿತು.

ಯಡಿಯೂರಪ್ಪ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಸಿದ್ಧಾರ್ಥ ದವೆ, 'ಈ ಪ್ರಕರಣದಲ್ಲಿ ಕರ್ನಾಟಕ ಸರ್ಕಾರವು ಪ್ರತಿವಾದಿಯಲ್ಲ' ಎಂದು ಗಮನ ಸೆಳೆದರು. ಆಗ ನ್ಯಾಯಪೀಠವು, 'ಸಾಮಾಜಿಕ ಕಾರ್ಯಕರ್ತ ಟಿ.ಜೆ. ಅಬ್ರಹಾಂ ಅವರ ಖಾಸಗಿ ದೂರಿನ ಪ್ರಕರಣ ಇದಾಗಿದ್ದರೂ ನಾವು ರಾಜ್ಯ ಸರ್ಕಾರದ ಸಹಾಯ ಪಡೆಯಬಹುದು' ಎಂದಿತು.

ಯಡಿಯೂರಪ್ಪ ವಿರುದ್ಧದ ತನಿಖೆಗೆ ಸೆಪ್ಟೆಂಬರ್ 23ರಂದು ನೀಡಿದ್ದ ತಡೆಯಾಜ್ಞೆ ಮುಂದಿನ ಆದೇಶದ ವರೆಗೆ ಮುಂದುವರಿಯಲಿದೆ ಎಂದಿತು.

ಗುಜರಾತ್‌ನಲ್ಲಿ ಕಾಂಗ್ರೆಸ್ ಗೆಲುವು: ರಾಹುಲ್ ವಿಶ್ವಾಸ

ಕೊತ್ತೂರು (ತೆಲಂಗಾಣ): 'ಗುಜರಾತಿನಲ್ಲಿ ಕಾಂಗ್ರೆಸ್ ಭದ್ರ ನೆಲೆ ಹೊಂದಿದೆ. ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆಯಿದ್ದು, ಮುಂಬರುವ ಚುನಾವಣೆಯಲ್ಲಿ ಪಕ್ಷ ಗೆಲ್ಲಲಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸೋಮವಾರ ಹೇಳಿದ್ದಾರೆ.

ಭಾರತ್ ಜೋಡೊ ಯಾತ್ರೆಯಲ್ಲಿರುವ ಅವರು ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದರು. ಆಮ್ ಆದ್ಮಿ ಪಕ್ಷವು ರಾಜ್ಯದಲ್ಲಿ ಕಾಂಗ್ರೆಸ್‌ಗೆ ಸವಾಲು ಒಡ್ಡಲಿದೆ ಎಂಬುದನ್ನು ಅವರು ಒಪ್ಪಲಿಲ್ಲ. 'ಚುನಾವಣೆಯಲ್ಲಿ ಎಎಪಿ ಎಲ್ಲಿಯೂ ಕಾಣಿಸುತ್ತಿಲ್ಲ. ಎಎಪಿ ನೀಡಿರುವ ಜಾಹೀರಾತುಗಳನ್ನು ನೋಡಿ ಮಾಧ್ಯಮಗಳು ಎಎಪಿಯನ್ನು ಪ್ರಬಲ ಎಂಬಂತೆ ಬಿಂಬಿಸುತ್ತಿವೆ' ಎಂದಿದ್ದಾರೆ.

ಗುಜರಾತ್, ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ತಾವು ಹೇಗೆ ತೊಡಗಿಸಿಕೊಳ್ಳಬೇಕು ಎಂಬ ಬಗ್ಗೆ ಮಲ್ಲಿಕಾರ್ಜುನ ಖರ್ಗೆ ಅವರು ನಿರ್ಧರಿಸುತ್ತಾರೆ ಎಂದರು.

ಸತ್ತವರ ಸಂಖ್ಯೆ 134ಕ್ಕೆ ಏರಿಕೆ

ಒಂದನೇ ಪುಟದಿಂದ...

ಹೀಗಿದ್ದೂ ಸೇತುವೆಯನ್ನು ಮರುಉದ್ಘಾಟನೆ ಮಾಡಲಾಗಿದೆ. ಜನರ ಜೀವಕ್ಕೆ ಅಪಾಯವಿದೆ ಎಂಬ ಅರಿವಿದ್ದರೂ ಕಂಪನಿಯ ಸಿಬ್ಬಂದಿಯು ನಿರ್ಲಕ್ಷ್ಯ ತೋರಿದ್ದಾರೆ. ಸಾಮರ್ಥ್ಯಕ್ಕಿಂತ ಹೆಚ್ಚು ಜನರನ್ನು ಸೇತುವೆ ಮೇಲೆ ಬಿಟ್ಟಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ವಿವರಿಸಲಾಗಿದೆ.

ರಾಜ್ಯ ಸರ್ಕಾರವು ರಚಿಸಿರುವ ತನಿಖಾ ತಂಡವು, ಅವಘಡಕ್ಕೆ ಕಾರಣ ಏನು ಎಂಬುದನ್ನು ಪತ್ತೆ ಮಾಡುವತ್ತ ಗಮನ ಕೇಂದ್ರೀಕರಿಸಿದೆ. ತನಿಖಾ ತಂಡದಲ್ಲಿರುವ ವಿಧಿವಿಜ್ಞಾನ ಅಧಿಕಾರಿಗಳು, ಸೇತುವೆಯ ಭಾಗಗಳ ಮಾದರಿಗಳನ್ನು ಸಂಗ್ರಹಿಸಿದ್ದಾರೆ.

ಮೋದಿ ಭೇಟಿ ನೀಡದ್ದಕ್ಕೆ ಟೀಕೆ

ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತ್‌ನಲ್ಲೇ ಇದ್ದರೂ, ಮೊರ್ಬಿಗೆ ಭೇಟಿ ನೀಡಿಲ್ಲ ಎಂದು ವಿರೋಧ ಪಕ್ಷಗಳು ಆರೋಪಿಸಿವೆ. ರಾಜ್ಯದ ನರ್ಮದಾ ಜಿಲ್ಲೆಯ ಕೆವಾಡಿಯಾದಲ್ಲಿ ನಡೆದ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಜನ್ಮದಿನಾಚರ-ಣೆಯಲ್ಲಿ ಮೋದಿ ಭಾಗಿಯಾಗಿದ್ದರು. ಇದನ್ನು ವಿರೋಧ ಪಕ್ಷಗಳು ಟೀಕಿಸಿವೆ. ಮೋದಿ ಅವರು ಮಂಗಳವಾರ ಮೊರ್ಬಿಗೆ ಭೇಟಿ ನೀಡಲಿದ್ದಾರೆ. ಮೋದಿ ಅವರು ಗಾಂಧಿನಗರದಲ್ಲಿನ ರಾಜಭವನದಲ್ಲಿ ಸೋಮವಾರ ಸಂಜೆ ಉನ್ನತ ಮಟ್ಟದ ಸಭೆ ನಡೆಸಿದ್ದಾರೆ. ರಕ್ಷಣಾ ಕಾರ್ಯಾಚರಣೆಯ ಮಾಹಿತಿ ಪಡೆದಿದ್ದಾರೆ.

ಆಧಾರ್‌ಗೆ ಮತದಾರರ ಚೀಟಿ ಜೋಡಣೆ: ಅರ್ಜಿ ವಿಚಾರಣೆಗೆ ಸಮ್ಮತಿ

ನವದೆಹಲಿ (ಪಿಟಿಐ): ಆಧಾರ್‌ನೊಂದಿಗೆ ಮತದಾರರ ಗುರುತಿನ ಪತ್ರ ಜೋಡಿಸುವ ಕೇಂದ್ರ ಸರ್ಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಸೋಮವಾರ ಸಮ್ಮತಿಸಿದೆ.

ನ್ಯಾಯಮೂರ್ತಿಗಳಾದ ಎಸ್. ಕೆ.ಕೌಲ್ ಮತ್ತು ಅಭಯ್ ಎಸ್. ಓಕಾ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಮಾಜಿ ಮೇಜರ್ ಜನರಲ್ ಎಸ್.ಜಿ. ಒಂಬತ್ಕೆರೆ ಅವರು ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಿದೆ.


'ಭಾರತ್ ಜೋಡೊ' ಉಪ ಯಾತ್ರೆಗೆ ಚಾಲನೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷ ಹಮ್ಮಿಕೊಂಡಿರುವ ಭಾರತ್ ಜೋಡೊ ಉಪ ಯಾತ್ರೆಗೆ ಭುವನೇಶ್ವರದಲ್ಲಿ ಸೋಮವಾರ ಚಾಲನೆ ನೀಡಲಾಗಿದೆ. ಅಸ್ಸಾಂನಲ್ಲಿ ಆಯೋಜಿಸಲಾಗಿರುವ ಇದೇ ಮಾದರಿಯ ಮತ್ತೊಂದು ಯಾತ್ರೆಗೆ ಮಂಗಳವಾರ (ನ.1) ಹಸಿರು ನಿಶಾನೆ ದೊರೆಯಲಿದೆ.

ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ (ಒಟ್ಟು 3,570 ಕಿ.ಮೀ) ಯಾತ್ರೆ ಹಮ್ಮಿಕೊಂಡಿದ್ದಾರೆ. ಈ ಯಾತ್ರೆ ಹಾದು ಹೋಗದೆ ಇರುವ ರಾಜ್ಯಗಳಲ್ಲಿ ಇದೇ ಮಾದರಿಯ ಉಪ ಯಾತ್ರೆಗಳನ್ನು ಹಮ್ಮಿಕೊಳ್ಳಲು ಕಾಂಗ್ರೆಸ್ ನಿರ್ಧರಿಸಿದೆ.

'ಒಡಿಶಾದಲ್ಲಿ ಹಮ್ಮಿಕೊಳ್ಳಲಾಗಿರುವ ಯಾತ್ರೆಗೆ ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಪುಣ್ಯ ಸ್ಮರಣೆಯ ದಿನ (ಅ.31) ಚಾಲನೆ ನೀಡಲಾಗಿದೆ. ರಾಜ್ಯದ 24 ಜಿಲ್ಲೆಗಳಲ್ಲಿ ಈ ಯಾತ್ರೆ ಸಂಚರಿಸಲಿದ್ದು ಒಟ್ಟು 2,250 ಕಿ.ಮೀ. ಕ್ರಮಿಸಲಿದೆ. ಭುವನೇಶ್ವರದಲ್ಲೇ ಇದು ಕೊನೆಗೊಳ್ಳಲಿದೆ. ಅಸ್ಸಾಂನಲ್ಲಿ ನಿಗದಿಯಾಗಿರುವ ಯಾತ್ರೆಯು (830 ಕಿ.ಮೀ) ಗೋಲೊಕ್ ಗಂಜ್‌ನಲ್ಲಿ ಆರಂಭವಾಗಲಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,787
ಇಂದಿನ ಅಂತ್ಯ	18,012
▲	225
ದಿನದ ಗರಿಷ್ಠ	18,022

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹520
12 ಮೊಟ್ಟೆಗೆ	₹67
ಮೈಸೂರು	
100 ಮೊಟ್ಟೆಗೆ	₹520

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹400-650
ದ್ವಿತಳಿ (ಬಿ.ವಿ)	₹455-825

ಖಾದ್ಯ ತೈಲ ಮುಂಬೈ

(10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1590 (1600)
ಸೋಯಾ (ರಿಫೈನ್ಡ್)	₹1342 (1330)
ಸೂರ್ಯಕಾಂತಿ (ರಿಫೈನ್ಡ್)	₹1570 (1560)
ಪಾಮೋಲಿನ್	₹985 (980)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)	
ದಪ್ಪ	₹2600-3200
ಮಧ್ಯಮ	₹2000-2600
ಸಣ್ಣ	₹1000-2000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹145.50
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹132

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-14000

ಏರ್‌ಟೆಲ್ ಲಾಭ ಶೇ 89ರಷ್ಟು ಏರಿಕೆ

ನವದೆಹಲಿ (ಪಿಟಿಐ): ಭಾರ್ತಿ ಏರ್‌ಟೆಲ್ ಕಂಪನಿಯು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 2,145 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಲಾಭವು ಶೇಕಡ 89ರಷ್ಟು ಏರಿಕೆ ಆಗಿದೆ ಎಂದು ಕಂಪನಿಯು ತಿಳಿಸಿದೆ.

ಪ್ರತಿ ಗ್ರಾಹಕರಿಂದ ಬರುವ ಆದಾಯ (ಎಆರ್‌ಪಿಯು) ₹ 153 ಇದ್ದಿದ್ದು ₹190ಕ್ಕೆ ಏರಿಕೆ ಆಗಿದೆ. ಇದರಿಂದಾಗಿ ಲಾಭವು ಈ ಪ್ರಮಾಣದಲ್ಲಿ ಹೆಚ್ಚಾಗಿದೆ ಎಂದು ಹೇಳಿದೆ. ಒಟ್ಟು ವರಮಾನ ಶೇ 22ರಷ್ಟು ಹೆಚ್ಚಾಗಿ ₹ 34,527 ಕೋಟಿಗೆ ತಲುಪಿದೆ ಎಂದು ತಿಳಿಸಿದೆ.

ಸ್ವರ್ಣ ಮಹಲ್‌ನಲ್ಲಿ ಹೊಸ ಆಭರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎವಿಆರ್ ಸ್ವರ್ಣ ಮಹಲ್ ಜುವೆಲ್ಲರಿ ಕಂಪನಿಯು 95ನೆಯ ವರ್ಷಾಚರಣೆಯ ಸಂಭ್ರಮದಲ್ಲಿದ್ದು, ಈ ಕಾರಣಕ್ಕಾಗಿ 'ಫ್ಲವರ್ಸ್ ಆಫ್ ಎಟರ್ನಿಟಿ' ಹೆಸರಿನ ಹೊಸ ಆಭರಣಗಳ ಸಂಗ್ರಹವನ್ನು ಬಿಡುಗಡೆ ಮಾಡಿದೆ.

ದೇವ, ದೇವತೆಯರಿಗೆ ಇಷ್ಟವಾದ ಹೂವುಗಳಿಂದ ಪ್ರೇರಣೆ ಪಡೆದು ಈ ಹಗುರ ಆಭರಣಗಳನ್ನು ಸಿದ್ಧಪಡಿಸಲಾ-ಗಿದೆ. ಆಭರಣಗಳು ₹ 25 ಸಾವಿರದಿಂದ ಆರಂಭವಾಗಲಿವೆ ಎಂದು ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

31–10-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	9400-9500
ದಪ್ಪ ಗುಜರಾತ್(ಹೊಸ)	10100-10200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1610)
ಒಂದು ವಾರದ ಡೆಲಿವರಿ	1595 (1605)
ಸೋಯಾ ಕಚ್ಚಾ	1265 (1260)
ಪಾಮ್ ವಾರದ ಡೆಲಿವರಿ	983 (978)
ಸೂರ್ಯಕಾಂತಿ ಎಣ್ಣೆ ಕಚ್ಚಾ	1500 (1480)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,200 (50,175)
ಬೆಳ್ಳಿ ಕೆ.ಜಿ 57,300 (57,200)

ಆವರಣದಲ್ಲಿ ಶನಿವಾರದ ಧಾರಣೆ

ಡಿಜಿಟಲ್ ರೂಪಾಯಿ: ಇಂದಿನಿಂದ ಪ್ರಾಯೋಗಿಕ ಬಳಕೆ ಆರಂಭ

ಮುಂಬೈ (ಪಿಟಿಐ): ದೇಶದ ಮೊದಲ ಡಿಜಿಟಲ್ ರೂಪಾಯಿಯ ಪ್ರಾಯೋಗಿಕ ಬಳಕೆಯು ಮಂಗಳವಾರದಿಂದ ಆರಂಭವಾಗಲಿದೆ. ಆರಂಭಿಕ ಹಂತದಲ್ಲಿ ಸರ್ಕಾರಿ ಟ್ರೆಷರಿ ಬಿಲ್, ಬಾಂಡ್ ವಹಿವಾಟುಗಳಲ್ಲಿ ಈ ವರ್ಚುವಲ್ ಕರೆನ್ಸಿ ಬಳಕೆ ಮಾಡಲು ಅವಕಾಶ ಇರಲಿದೆ.

ಎಸ್‌ಬಿಐ, ಬ್ಯಾಂಕ್ ಆಫ್ ಬರೋಡ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಕೋಟಕ್ ಮಹೀಂದ್ರ ಬ್ಯಾಂಕ್, ಯೆಸ್ ಬ್ಯಾಂಕ್, ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಮತ್ತು ಎಚ್‌ಎಸ್‌ಬಿಸಿ ಡಿಜಿಟಲ್ ರೂಪಾಯಿ ನೀಡಲಿವೆ.

ಡಿಜಿಟಲ್ ರೂಪಾಯಿಯ ಪ್ರಾಯೋಗಿಕ ರಿಟೇಲ್ ವಹಿವಾಟು ದೇಶದ ಕೆಲವು ಆಯ್ದ ಪ್ರದೇಶ-ಗಳಲ್ಲಿ, ಕೆಲವು ಗ್ರಾಹಕರು ಮತ್ತು ವ್ಯಾಪಾರಿಗಳ ನಡುವೆ ಒಂದು ತಿಂಗಳಲ್ಲಿ ಆರಂಭವಾಗಲಿದೆ ಎಂದು ಆರ್‌ಬಿಐ ಹೇಳಿದೆ.

ಪ್ರಾಯೋಗಿಕ ಬಳಕೆಯಲ್ಲಿ ಸಿಗುವ ಅನುಭವ ಆಧರಿಸಿ ಇತರ ಸಗಟು ವಹಿವಾಟುಗಳಲ್ಲಿ ಹಾಗೂ ಬೇರೆ ಬೇರೆ ದೇಶಗಳಲ್ಲಿ ಇರುವವರ ನಡುವಿನ ಪಾವತಿಗಳಲ್ಲಿ ಇದನ್ನು ಬಳಸಲು ಆದ್ಯತೆ ನೀಡಲಾಗುತ್ತದೆ.

ಈಚೆಗೆ ಸಿದ್ಧಪಡಿಸಿರುವ ಪರಿಕಲ್ಪನಾ ಟಿಪ್ಪಣಿಯಲ್ಲಿ ಆರ್‌ಬಿಐ, ಕೇಂದ್ರೀಯ ಬ್ಯಾಂಕ್‌ನ ಡಿಜಿಟಲ್ ಕರೆನ್ಸಿಯನ್ನು (ಸಿಬಿಡಿಸಿ) ಸೃಷ್ಟಿಸುವುದು ಚಾಲ್ತಿಯಲ್ಲಿ ಇರುವ ಕರೆನ್ಸಿಗೆ ಪೂರಕವೇ ವಿನಾ, ಪರ್ಯಾಯ ಅಲ್ಲ ಎಂದು ಹೇಳಿದೆ. ಬಳಕೆದಾರರಿಗೆ ಹೆಚ್ಚುವರಿ ಪಾವತಿ ವ್ಯವಸ್ಥೆಯೊಂದನ್ನು ಇದು ಕಲ್ಪಿಸುತ್ತದೆ. ಈಗ ಇರುವ ಪಾವತಿ ವ್ಯವಸ್ಥೆಗಳನ್ನು ತೆಗೆದುಹಾಕುವುದಿಲ್ಲ ಎಂದು ಕೂಡ ಹೇಳಿದೆ.

ಸಿಬಿಡಿಸಿ ಎಂಬುದು ಕೇಂದ್ರೀಯ ಬ್ಯಾಂಕ್ ಹೊರಡಿಸುವ ಡಿಜಿಟಲ್ ಕರೆನ್ಸಿ. ಈ ವರ್ಷದ ಫೆಬ್ರುವರಿ 1ರಂದು ಮಂಡಿಸಿದ ಬಜೆಟ್‌ನಲ್ಲಿ ಕೇಂದ್ರ ಸರ್ಕಾರವು ಸಿಬಿಡಿಸಿ ಚಲಾವಣೆಗೆ ತರುವ ಘೋಷಣೆ ಮಾಡಿತ್ತು. ಜಾಗತಿಕವಾಗಿ 60ಕ್ಕೂ ಹೆಚ್ಚು ಕೇಂದ್ರೀಯ ಬ್ಯಾಂಕ್‌ಗಳು ಸಿಬಿಡಿಸಿ ಬಗ್ಗೆ ಆಸಕ್ತಿ ತೋರಿವೆ. ಕೆಲವು ದೇಶಗಳಲ್ಲಿ ಈ ಕರೆನ್ಸಿಯನ್ನು ಚಲಾವಣೆಗೆ ತರುವ ಪ್ರಾಯೋಗಿಕ ಕಾರ್ಯ ನಡೆದಿದೆ.

ಟಾಟಾ ಸ್ಟೀಲ್: ಕುಸಿದ ಲಾಭ

ನವದೆಹಲಿ (ಪಿಟಿಐ): ಟಾಟಾ ಸ್ಟೀಲ್ ಕಂಪನಿಯ ಸೆಪ್ಟೆಂಬರ್ ತ್ರೈಮಾಸಿಕದ ಲಾಭ ಶೇಕಡ 90ರಷ್ಟು ಕುಸಿದಿದೆ. ವೆಚ್ಚಗಳು ಹೆಚ್ಚಾದ ಕಾರಣ ನಿವ್ವಳ ಲಾಭ ₹ 1,297 ಕೋಟಿಗೆ ಇಳಿಕೆಯಾಗಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯ ನಿವ್ವಳ ಲಾಭ ₹ 12,547 ಕೋಟಿ ಆಗಿತ್ತು. ಕಂಪನಿಯ ಆದಾಯದಲ್ಲಿ ಹೆಚ್ಚಿನ ಕುಸಿತ ಆಗಿಲ್ಲ. ಆದರೆ ವೆಚ್ಚಗಳು ₹ 10 ಸಾವಿರ ಕೋಟಿಯಷ್ಟು ಹೆಚ್ಚಾಗಿವೆ. ವಿಶ್ವದಲ್ಲಿ ಉಕ್ಕು ತಯಾರಿಸುವ ಪ್ರಮುಖ ಕಂಪನಿಗಳ ಪೈಕಿ ಟಾಟಾ ಸ್ಟೀಲ್ ಕೂಡ ಒಂದು.

ಕಂಪನಿಯ ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕ ಟಿ.ವಿ. ನರೇಂದ್ರನ್ ಅವರು, 'ಪ್ರಮುಖ ದೇಶಗಳಲ್ಲಿ ಆರ್ಥಿಕ ಮಂದಗತಿ, ಜಾಗತಿಕ ಬಿಕ್ಕಟ್ಟುಗಳು ಅಸ್ಥಿರ ವಾತಾವರಣ ಸೃಷ್ಟಿಸಿವೆ' ಎಂದು ಹೇಳಿದ್ದಾರೆ. 'ಹೀಗಿದ್ದರೂ, ದೇಶಿ ಮಾರಾಟವು ಅತ್ಯುತ್ತಮ ಮಟ್ಟದಲ್ಲಿದೆ' ಎಂದಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಬಿಳಿಗೋಟು	14290-31389	ತಟ್ಟಿಬೆಟ್ಟೆ	37619-38469
ಬಂಟ್ವಾಳ		ಚಾಲಿ	26110-39099	ಶಿರಸಿ	
ಕೋಕ	12500-25000	ಕೋಕ	13290-31899	ಬೆಟ್ಟೆ	36199-45099
ಹೊಸತು	27500-38000	ಕೆಂಪುಗೋಟು	26989-36399	ಬಿಳಿಗೋಟು	18601-36299
ಹಳತು	48000-56000			ಚಾಲಿ	36699-42439
ಚಿತ್ರದುರ್ಗ		ರಾಶಿ	36899-49019	ರಾಶಿ	44689-48099
ಆಪಿ	47119-47559	ಸಿಪ್ಪೆಗೋಟು	16890-22609	ಯಲ್ಲಾಪುರ	
ಬೆಟ್ಟೆ	37429-37869	ಶಿವಮೊಗ್ಗ		ಬಿಳಿಗೋಟು	27899-35899
ಕೆಂಪುಗೋಟು	29500-29900	ಬೆಟ್ಟೆ	49090-52800	ಚಾಲಿ	37619-42399
		ಗೊರಬಲು	16550-37130	ಕೋಕ	22612-30169
ರಾಶಿ	46639-47099	ಹೊಸತು	46509-48019	ಕೆಂಪುಗೋಟು	28619-34199
ಕುಮಟ		ರಾಶಿ	44009-49129	ರಾಶಿ	48001-53919
ಚಿಪ್ಪು	24199-33089	ಸರಕು	60019-79400	ತಟ್ಟಿಬೆಟ್ಟೆ	37969-47799
ಕೋಕ	17509-30099	ಸಿದ್ದಾಪುರ		ಕಾಫಿ ಧಾರಣೆ 50ಕೆ.ಜಿಗೆ	
ಫ್ಯಾಕ್ಟರಿ	12019-20911	ಬಿಳಿಗೋಟು	27109-33799	ಮುದ್ರೆಮನೆ	
ಹೊಸಚಾಲಿ	38019-41209	ಚಾಲಿ	37499-41739	ಎಪಿ	14500
ಪುತ್ತೂರು		ಕೋಕ	27099-33899	ಎಸಿ	7280
ಹೊಸತು	32000-38000	ಕೆಂಪುಗೋಟು	33199-33199	ಆರ್‌ಪಿ	8500
ಸಾಗರ		ರಾಶಿ	46099-48099	ಆರ್‌ಸಿ	4600

ಟ್ವಿಟರ್: ಶೇ 25ರಷ್ಟು ಉದ್ಯೋಗ ಕಡಿತ ಸಂಭವ

ಬೆಂಗಳೂರು (ರಾಯಿಟರ್ಸ್): ಇಲಾನ್ ಮಸ್ಕ್ ಅವರು ಟ್ವಿಟರ್ ಕಂಪನಿಯನ್ನು ಖರೀದಿಸಿದ ಬಳಿಕ ಮೊದಲ ಸುತ್ತಿನಲ್ಲಿ ಶೇಕಡ 25ರಷ್ಟು ಉದ್ಯೋಗಿಗಳನ್ನು ಕೆಲಸದಿಂದ ತೆಗೆಯಲು ಕಂಪನಿ ಮುಂದಾಗಿದೆ ಎಂದು ವಾಷಿಂಗ್ಟನ್ ಪೋಸ್ಟ್ ವರದಿ ಮಾಡಿದೆ.

ವರದಿಯ ಪ್ರಕಾರ, ಮಸ್ಕ್ ಅವರ ಕಾನೂನು ಸಲಹೆಗಾರ ಅಲೆಕ್ಸ್ ಸ್ಪಿರೊ ಅವರು ಈ ಉದ್ಯೋಗ ಕಡಿತದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಷೇರುಪೇಟೆಯಲ್ಲಿ ಇರುವ ಮಾಹಿತಿಯ ಪ್ರಕಾರ, 2021ರ ಅಂತ್ಯಕ್ಕೆ ಟ್ವಿಟರ್‌ನಲ್ಲಿ 7 ಸಾವಿರಕ್ಕೂ ಅಧಿಕ ಉದ್ಯೋಗಿಗಳು ಇದ್ದಾರೆ. ಇವರಲ್ಲಿ ಶೇ 25ರಷ್ಟು ಅಂದರೆ ಸುಮಾರು 2 ಸಾವಿರ ಉದ್ಯೋಗಿಗಳನ್ನು ಕಂಪನಿ ಮನೆಗೆ ಕಳುಹಿಸಲಿದೆ.

ಈ ಕುರಿತು ಟ್ವಿಟರ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಸಿಬ್ಬಂದಿ ಕಡಿತದ ಕುರಿತು ನ್ಯೂಯಾರ್ಕ್ ಟೈಮ್ಸ್ ವರದಿಯನ್ನು ಇಲಾನ್ ಮಸ್ಕ್ ನಿರಾಕರಿಸಿದ್ದಾರೆ.


ಸತತ ಮೂರನೇ ದಿನವೂ ಮುಂದುವರಿದ ಸಕಾರಾತ್ಮಕ ಓಟ

60 ಸಾವಿರದ ಗಡಿ ದಾಟಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಸೋಮವಾರದ ವಹಿವಾಟಿನಲ್ಲಿ ಮತ್ತೆ 60 ಸಾವಿರದ ಗಡಿ ದಾಟಿ ವಹಿವಾಟು ಅಂತ್ಯಗೊಳಿಸಿತು. ನಿಫ್ಟಿ 18 ಸಾವಿರದ ಗಡಿ ದಾಟಿತು. ಜಾಗತಿಕ ಮಾರುಕಟ್ಟೆಗ-ಳಲ್ಲಿನ ಮಿಶ್ರ ವಹಿವಾಟಿನ ನಡುವೆಯೂ ದೇಶದಲ್ಲಿ ನಡೆದ ಉತ್ತಮ ಖರೀದಿಯಿಂದಾಗಿ ಸೂಚ್ಯಂಕಗಳು ಏರಿಕೆ ಕಂಡವು.

ಸೆನ್ಸೆಕ್ಸ್ 786 ಅಂಶ ಜಿಗಿತ ಕಂಡು 60,746 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು. ಎನ್‌ಎಸ್‌ಇ ನಿಫ್ಟಿ 225 ಅಂಶ ಹೆಚ್ಚಾಗಿ 18,012 ಅಂಶಗಳಿಗೆ ತಲುಪಿತು.


ಅಮೆರಿಕದ ಫೆಡರಲ್ ರಿಸರ್ವ್, ಬಡ್ಡಿದರ ಹೆಚ್ಚಳವನ್ನು ಕಡಿಮೆ ಪ್ರಮಾಣದಲ್ಲಿ ಮಾಡಲಿದೆ ಎಂಬ ನಿರೀಕ್ಷೆಯನ್ನು ಹೂಡಿಕೆದಾರರು ಇಟ್ಟುಕೊಂಡಿದ್ದಾರೆ. ಇದರಿಂದಾಗಿ ಷೇರುಪೇಟೆಗಳ ಸೂಚ್ಯಂಕಗಳು ಉತ್ತಮ ಗಳಿಕೆ ಕಂಡುಕೊಂಡವು ಎಂದು ಕೋಟಕ್ ಸೆಕ್ಯುರಿಟೀಸ್ ಲಿಮಿಟೆಡ್‌ನ ಈಕ್ವಿಟಿ ಸಂಶೋಧನಾ ವಿಭಾಗದ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.



ಒಂದೊಮ್ಮೆ ಅಮೆರಿಕದ ಕೇಂದ್ರೀಯ ಬ್ಯಾಂಕ್ ಹೆಚ್ಚಿನ ಪ್ರಮಾಣದಲ್ಲಿ ಬಡ್ಡಿದರ ಏರಿಕೆಗೆ ಮುಂದಾದಲ್ಲಿ ಷೇರುಪೇಟೆಯಲ್ಲಿ ಹೆಚ್ಚಿನ ಇಳಿಕೆ ಕಾಣುವ ಸಾಧ್ಯತೆ ಇದೆ ಎಂದೂ ಅವರು ಎಚ್ಚರಿಕೆ ನೀಡಿದ್ದಾರೆ. ಬಿಎಸ್‌ಇ ಮಿಡ್‌ಕ್ಯಾಪ್ ಶೇ 1.24 ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಶೇ 0.45ರಷ್ಟು ಏರಿಕೆ ಕಂಡವು.

ಏಷ್ಯಾದಲ್ಲಿ ಸೋಲ್ ಮತ್ತು ಟೋಕಿಯೊ ಷೇರುಪೇಟೆಗಳು ಗಳಿಕೆ ಕಂಡರೆ, ಶಾಂಘೈ ಮತ್ತು ಹಾಂಗ್‌ಕಾಂಗ್ ಷೇರುಪೇಟೆಗಳ ವಹಿವಾಟು ಇಳಿಕೆ ಕಂಡಿತು. ಬ್ರೆಂಟ್ ಕಚ್ಚಾ ತೈಲ ದರ ಶೇ 0.31ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 95.47 ಡಾಲರ್‌ಗೆ ತಲುಪಿತು.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಸೋಮವಾರ ₹4,178 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದರು.



ರೂಪಾಯಿ 34 ಪೈಸೆ ಇಳಿಕೆ

ಕರೆನ್ಸಿ ವಿನಿಮಯ ಮಾರುಕಟ್ಟೆಯ-ಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಸೋಮವಾರ 34 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹82.81ರಂತೆ ವಿನಿಮಯಗೊಂಡಿತು.

ಜಾಗತಿಕ ಮಾರುಕಟ್ಟೆಯ-ಲ್ಲಿ ಡಾಲರ್ ಮೌಲ್ಯ ಹೆಚ್ಚಳ ಆಗಿರುವುದರಿಂದ ರೂಪಾಯಿ ಮೌಲ್ಯ ಇಳಿಕೆ ಕಾಣುವಂತಾಯಿತು.

ಕಚ್ಚಾ ತೈಲ ದರ ಇಳಿಕೆ ಮತ್ತು ದೇಶಿ ಮಾರುಕಟ್ಟೆಯ ಗಳಿಕೆಯು ರೂಪಾಯಿಯನ್ನು ಹೆಚ್ಚು ಕುಸಿತ ಕಾಣದಂತೆ ತಡೆಯಿತು ಎಂದು ಬಿಎನ್‌ಪಿ ಪಾರಿಬಾಸ್‌ನ ಸಂಶೋಧನಾ ವಿಶ್ಲೇಷಕ ಅನುಜ್ ಚೌಧರಿ ಹೇಳಿದ್ದಾರೆ.

ಪ್ರಮುಖ ವಲಯಗಳಲ್ಲಿ ಶೇ 7.9ರಷ್ಟು ಬೆಳವಣಿಗೆ

ನವದೆಹಲಿ (ಪಿಟಿಐ): ಎಂಟು ಮೂಲಸೌಕರ್ಯ ವಲಯಗಳು ಸೆಪ್ಟೆಂಬರ್‌ನಲ್ಲಿ ಶೇಕಡ 7.9ರಷ್ಟು ಬೆಳವಣಿಗೆ ಸಾಧಿಸಿವೆ. ಇದು ಮೂರು ತಿಂಗಳ ಗರಿಷ್ಠ ಪ್ರಮಾಣ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಈ ವಲಯಗಳಲ್ಲಿ ಶೇ 5.4ರಷ್ಟು ಬೆಳವಣಿಗೆ ಆಗಿತ್ತು.

ಆಗಸ್ಟ್‌ನಲ್ಲಿ ಬೆಳವಣಿಗೆಯು ಶೇ 4.1ರಷ್ಟು ಇತ್ತು. ಜೂನ್ ತಿಂಗಳಲ್ಲಿ ಬೆಳವಣಿಗೆ ಪ್ರಮಾಣವು ಶೇ 13.1ರಷ್ಟು ಆಗಿತ್ತು.

ಪ್ರಸಕ್ತ ಹಣಕಾಸು ವರ್ಷದ ಮೊದಲ ಆರು ತಿಂಗಳಲ್ಲಿ (ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗೆ) ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ಸಂಸ್ಕರಣಾ ಉತ್ಪನ್ನಗಳು, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ವಲಯಗಳ ಬೆಳವಣಿಗೆ ಪ್ರಮಾಣ ಶೇ 9.6ರಷ್ಟು ಆಗಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಶೇ 16.9ರಷ್ಟು ಬೆಳವಣಿಗೆ ದಾಖಲಾಗಿತ್ತು.

'ಪ್ರಮುಖ ಕೈಗಾರಿಕಾ ವಲಯಗಳ ಶಕ್ತಿಯ ಕಾರಣದಿಂದಾಗಿಯೇ ಭಾರತವನ್ನು ಜಾಗತಿಕ ಮಟ್ಟದಲ್ಲಿ ಪ್ರ-ಕಾಶಮಾನವಾಗಿ ಹೊಳೆಯುತ್ತಿರುವ ತಾಣ ಎಂದು ಗುರುತಿಸಲಾಗುತ್ತಿದೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಟ್ವೀಟ್ ಮಾಡಿದ್ದಾರೆ.

ಬೆಳವಣಿಗೆ ಪ್ರಮಾಣದ ಕುರಿತು ಪ್ರತಿಕ್ರಿಯೆ ನೀಡಿರುವ ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ 'ಎರಡು ತಿಂಗಳ ಕಾಲ ಮಂದಗತಿಯಲ್ಲಿದ್ದ ಬೆಳವಣಿಗೆ ಪ್ರಮಾಣವು ಸೆಪ್ಟೆಂಬರ್‌ನಲ್ಲಿ ಪುಟಿದೆದ್ದಿದೆ. ಇದರಿಂದಾಗಿ, ಕೈಗಾರಿಕಾ ಉತ್ಪಾದನೆಯ ಸೂಚ್ಯಂಕವು ಶೇ 4ರಿಂದ ಶೇ 6ರ ಮಟ್ಟಕ್ಕೆ ಬೆಳವಣಿಗೆ ಕಾಣುವ ನಿರೀಕ್ಷೆ ಇದೆ' ಎಂದು ಹೇಳಿದ್ದಾರೆ.

ಮಾರುತಿ: ಪ್ರೀಮಿಯಂ ಕಾರಿನಲ್ಲೂ ಸಿಎನ್‌ಜಿ ಆಯ್ಕೆ

ನವದೆಹಲಿ (ಪಿಟಿಐ): ನೆಕ್ಸಾ ಮಳಿಗೆಗಳ ಮೂಲಕ ಮಾರಾಟವಾಗುವ ಪ್ರೀಮಿಯಂ ಕಾರುಗಳಲ್ಲಿಯೂ ಸಿಎನ್‌ಜಿ ಇಂಧನ ಆಯ್ಕೆಯನ್ನು ಮಾರುತಿ ಸುಜುಕಿ ಇಂಡಿಯಾ ಕಂಪನಿ ಒದಗಿಸಲಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಕಂಪನಿಯು ಸಿಎನ್‌ಜಿ ಇಂಧನ ಆಯ್ಕೆ ಇರುವ ಒಟ್ಟು 4 ಲಕ್ಷ ಕಾರುಗಳನ್ನು ಮಾರಾಟ ಮಾಡುವ ಗುರಿ ಹೊಂದಿದೆ.

ಕಂಪನಿಯು 'ಎಸ್–ಸಿಎನ್‌ಜಿ' ಆಯ್ಕೆಯನ್ನು ಪ್ರೀಮಿಯಂ ಹ್ಯಾಚ್‌ಬ್ಯಾಕ್ ಕಾರು ಬಲೆನೊ ಹಾಗೂ ಬಹುಉಪಯೋಗಿ ವಾಹನ ಎಕ್ಸ್‌ಎಲ್6ನಲ್ಲಿ ಒದಗಿಸಲಿದೆ ಎಂದು ಮಾರಾಟ ಮತ್ತು ಮಾರುಕಟ್ಟೆ ವಿಭಾಗದ ಹಿರಿಯ ಕಾರ್ಯನಿರ್ವಾಹಕ ನಿರ್ದೇಶಕ ಶಶಾಂಕ್ ಶ್ರೀವಾಸ್ತವ ಅವರು ತಿಳಿಸಿದ್ದಾರೆ. ಇವುಗಳ ಬೆಲೆಯು ₹ 8.28 ಲಕ್ಷದಿಂದ ₹ 12.24 ಲಕ್ಷದ ನಡುವೆ ಇರಲಿದೆ.

ಇಕೊ, ಆಲ್ಟೊ ಮತ್ತು ವ್ಯಾಗನ್‌ಆರ್ ಮಾದರಿಗಳಲ್ಲಿ 2010ರಲ್ಲಿ ಸಿಎನ್‌ಜಿ ಆಯ್ಕೆ ನೀಡಲು ಆರಂಭಿಸಿದ ನಂತರದಲ್ಲಿ ಕಂಪನಿಯು ಈ ಆಯ್ಕೆ ಇರುವ ಒಟ್ಟು 11.4 ಲಕ್ಷ ಕಾರುಗಳನ್ನು ಮಾರಾಟ ಮಾಡಿದೆ. ಈಗ ಕಂಪನಿಯು 10 ಮಾದರಿಗಳಲ್ಲಿ ಸಿಎನ್‌ಜಿ ಆಯ್ಕೆ ನೀಡುತ್ತಿದೆ.

ಸಿಎನ್‌ಜಿ ಆಯ್ಕೆ ಇರುವ ಬಲೆನೊ ಮತ್ತು ಎಕ್ಸ್‌ಎಲ್6 ವಾಹನಗಳ ಉತ್ಪಾದನೆಯು ಈಗಾಗಲೇ ಶುರುವಾಗಿದ್ದು, ನವೆಂಬರ್ ಮೊದಲ ವಾರದಿಂದಲೇ ಅವುಗಳ ಮಾರಾಟ ಆರಂಭ ಆಗಲಿದೆ.

ಆಸ್ಟ್ರೇಲಿಯಾ ಬೌಲರ್‌ಗಳ ಶಿಸ್ತಿನ ದಾಳಿ: ಐರ್ಲೆಂಡ್ ತಂಡದ ವಿರುದ್ಧ 42 ರನ್‌ಗಳ ಗೆಲುವು

ಆ್ಯರನ್ ಫಿಂಚ್ ಬ್ಯಾಟಿಂಗ್ ಸೊಬಗು


ಆ್ಯರನ್ ಫಿಂಚ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಬ್ರಿಸ್ಬೇನ್ (ಪಿಟಿಐ): ನಾಯಕ ಆ್ಯರನ್ ಫಿಂಚ್ ಅವರ ಅರ್ಧಶತಕ ಹಾಗೂ ಬೌಲರ್‌ಗಳ ಶಿಸ್ತಿನ ದಾಳಿಯ ನೆರವಿನಿಂದ ಆಸ್ಟ್ರೇಲಿಯಾ ತಂಡ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಐರ್ಲೆಂಡ್ ತಂಡವನ್ನು 42 ರನ್‌ಗಳಿಂದ ಮಣಿಸಿತು.

ಬ್ರಿಸ್ಬೇನ್‌ನಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಆತಿಥೇಯ ತಂಡ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 179 ರನ್ ಪೇರಿಸಿತು. ಐರ್ಲೆಂಡ್ 18.1 ಓವರ್‌ಗಳಲ್ಲಿ 137 ರನ್‌ಗಳಿಗೆ ಆಲೌಟಾಯಿತು. ಲೋರ್ಕನ್ ಟಕರ್ (ಔಟಾಗದೆ 71, 48 ಎ., 4X9, 6X1) ನಡೆಸಿದ ಏಕಾಂಗಿ ಹೋರಾಟ ವ್ಯರ್ಥವಾಯಿತು.

4 ಪಂದ್ಯಗಳಿಂದ ಐದು ಪಾಯಿಂಟ್ಸ್ ಸಂಗ್ರಹಿಸಿರುವ ಫಿಂಚ್ ಬಳಗ 'ಗುಂಪು 1' ರಲ್ಲಿ 2ನೇ ಸ್ಥಾನಕ್ಕೇರಿತು.

ಫಿಂಚ್ ಆಸರೆ: ಟಾಸ್ ಗೆದ್ದ ಐರ್ಲೆಂಡ್ ತಂಡದ ನಾಯಕ ಆ್ಯಂಡಿ ಬಲ್ಬಿರ್ನಿ, ಎದುರಾಳಿ ತಂಡವನ್ನು ಬ್ಯಾಟಿಂಗ್‌ಗೆ ಕಳುಹಿಸಿದರು. ಬ್ಯಾರಿ ಮೆಕಾರ್ಥಿ ಅವರು ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್ (3) ಅವರನ್ನು ಮೂರನೇ ಓವರ್‌ನಲ್ಲಿ ಔಟ್ ಮಾಡಿದರು.

ಆದರೆ ಎರಡನೇ ವಿಕೆಟ್‌ಗೆ ಫಿಂಚ್ (63 ರನ್, 44 ಎ., 4X5, 6X3) ಮತ್ತು ಮಿಷೆಲ್ ಮಾರ್ಷ್ (28 ರನ್, 22 ಎ.) 52 ರನ್ ಸೇರಿಸಿದರು. ಮಾರ್ಷ್ ಹಾಗೂ ಗ್ಲೆನ್ ಮ್ಯಾಕ್ಸ್‌ವೆಲ್ (13) ಅಲ್ಪ ಅಂತರದಲ್ಲಿ ಔಟಾದಾಗ ಐರ್ಲೆಂಡ್ ಬೌಲರ್‌ಗಳಿಗೆ ಮೇಲುಗೈ ಸಾಧಿಸುವ ಅವಕಾಶವಿತ್ತು. ಫಿಂಚ್ ಹಾಗೂ ಮಾರ್ಕಸ್ ಸ್ಟೊಯಿನಿಸ್ (35 ರನ್, 25 ಎ.) ಅದಕ್ಕೆ ತಡೆಯಾದರು. ನಾಲ್ಕನೇ ವಿಕೆಟ್‌ಗೆ ಬಿರುಸಿನ ವೇಗದಲ್ಲಿ 70 ರನ್ ಸೇರಿಸಿ ತಂಡದ ಉತ್ತಮ ಮೊತ್ತಕ್ಕೆ ಕಾರಣರಾದರು.

ಸವಾಲಿನ ಗುರಿ ಬೆನ್ನಟ್ಟಿದ ಐರ್ಲೆಂಡ್ 25 ರನ್ ಗಳಿಸುವಷ್ಟರಲ್ಲೇ ಐದು ವಿಕೆಟ್ ಕಳೆದುಕೊಂಡು ಕುಸಿತ ಅನುಭವಿಸಿತು. ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಅತಿಯಾದ ಆಕ್ರಮಣಕ್ಕೆ ಮುಂದಾಗಿ ವಿಕೆಟ್ ಒಪ್ಪಿಸಿದರು. ಪ್ಯಾಟ್ ಕಮಿನ್ಸ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಐರ್ಲೆಂಡ್‌ಗೆ ಆರಂಭಿಕ ಆಘಾತ ನೀಡಿದರೆ, ಮಿಚೆಲ್ ಸ್ಟಾರ್ಕ್ ಮಧ್ಯಮ ಕ್ರಮಾಂಕಕ್ಕೆ ಪೆಟ್ಟುಕೊಟ್ಟರು.

ಒಂದು ಬದಿಯಲ್ಲಿ ವಿಕೆಟ್ ಬೀಳುತ್ತಿದ್ದರೂ, ಮತ್ತೊಂದು ಬದಿಯಲ್ಲಿ ಲೋರ್ಕನ್ ಟಕರ್ ಕೆಚ್ಚೆದೆಯ ಹೋರಾಟ ನಡೆಸಿದರು. ಅವರಿಗೆ ಇತರರಿಂದ ತಕ್ಕ ಸಾಥ್ ಸಿಗಲಿಲ್ಲ. ನಾಲ್ಕು ಪಂದ್ಯಗಳಿಂದ ಮೂರು ಪಾಯಿಂಟ್ಸ್ ಹೊಂದಿರುವ ಐರ್ಲೆಂಡ್ ನಾಲ್ಕನೇ ಸ್ಥಾನದಲ್ಲಿದೆ.

ಸಂಕ್ಷಿಪ್ತ ಸ್ಕೋರ್: ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 179 (ಆ್ಯರನ್ ಫಿಂಚ್ 63, ಮಿಚೆಲ್ ಮಾರ್ಷ್ 28, ಗ್ಲೆನ್ ಮ್ಯಾಕ್ಸ್‌ವೆಲ್ 13, ಮಾರ್ಕಸ್ ಸ್ಟೊಯಿನಿಸ್ 35, ಟಿಮ್ ಡೇವಿಡ್ ಔಟಾಗದೆ 15, ಬ್ಯಾರಿ ಮೆಕಾರ್ಥಿ 29ಕ್ಕೆ 3, ಜೋಶ್ ಲಿಟ್ಲ್ 21ಕ್ಕೆ 2)

ಐರ್ಲೆಂಡ್ 18.1 ಓವರ್‌ಗಳಲ್ಲಿ 137 (ಲೋರ್ಕನ್ ಟಕರ್ ಔಟಾಗದೆ 71, ಗರೆತ್ ಡೆಲಾನಿ 14, ಮಾರ್ಕ್ ಅಡೇರ್ 11, ಪ್ಯಾಟ್ ಕಮಿನ್ಸ್ 28ಕ್ಕೆ 2, ಗ್ಲೆನ್ ಮ್ಯಾಕ್ಸ್‌ವೆಲ್ 14ಕ್ಕೆ 2, ಮಿಚೆಲ್ ಸ್ಟಾರ್ಕ್ 43ಕ್ಕೆ 2, ಆ್ಯಡಂ ಜಂಪಾ 19ಕ್ಕೆ 2, ಮಾರ್ಕಸ್ ಸ್ಟೊಯಿನಿಸ್ 6ಕ್ಕೆ 1) ಫಲಿತಾಂಶ: ಆಸ್ಟ್ರೇಲಿಯಾಕ್ಕೆ 42 ರನ್ ಜಯ

ಇಂದಿನ ಪಂದ್ಯಗಳು

ನ್ಯೂಜಿಲೆಂಡ್– ಇಂಗ್ಲೆಂಡ್
ಆರಂಭ: ಮಧ್ಯಾಹ್ನ 1.30

ಅಫ್ಗಾನಿಸ್ತಾನ– ಶ್ರೀಲಂಕಾ
ಆರಂಭ: ಬೆಳಿಗ್ಗೆ 9.30

ಸ್ಥಳ: ಗಾಬಾ ಕ್ರೀಡಾಂಗಣ, ಬ್ರಿಸ್ಬೇನ್

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಫಲಿತಾಂಶವಿಲ್ಲ	ಪಾಯಿಂಟ್ಸ್	ರನ್ ರೇಟ್
ಗುಂಪು 1						
ನ್ಯೂಜಿಲೆಂಡ್	3	2	0	1	5	3.850
ಆಸ್ಟ್ರೇಲಿಯಾ	4	2	1	1	5	-0.304
ಇಂಗ್ಲೆಂಡ್	3	1	1	1	3	0.239
ಐರ್ಲೆಂಡ್	4	1	2	1	3	-1.544
ಶ್ರೀಲಂಕಾ	3	1	2	0	2	-0.890
ಅಫ್ಗಾನಿಸ್ತಾನ	3	0	1	2	2	-0.620
ಗುಂಪು 2						
ದಕ್ಷಿಣ ಆಫ್ರಿಕಾ	3	2	0	1	5	2.772
ಭಾರತ	3	2	1	0	4	0.844
ಬಾಂಗ್ಲಾದೇಶ	3	2	1	0	4	-1.533
ಜಿಂಬಾಬ್ವೆ	3	1	1	1	3	-0.050
ಪಾಕಿಸ್ತಾನ	3	1	2	0	2	0.765
ನೆದರ್ಲೆಂಡ್ಸ್	3	0	3	0	0	-1.948

ಹಾರ್ದಿಕ್ ಪಾಂಡ್ಯಗೆ ನಾಯಕತ್ವ

ಕಿವೀಸ್ ವಿರುದ್ಧದ ಟಿ20 ಸರಣಿ: ಪ್ರಮುಖರಿಗೆ ವಿಶ್ರಾಂತಿ


ಹಾರ್ದಿಕ್ ಪಾಂಡ್ಯ

ಅಡಿಲೇಡ್ (ಪಿಟಿಐ): ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಈ ತಿಂಗಳ ಕೊನೆಯಲ್ಲಿ ನ್ಯೂಜಿಲೆಂಡ್ ಪ್ರವಾಸಕ್ಕೆ ತೆರಳಲಿರುವ ಭಾರತ ಟಿ20 ಕ್ರಿಕೆಟ್ ತಂಡವನ್ನು ಮುನ್ನಡೆಸಲಿದ್ದಾರೆ.

ನಾಯಕ ರೋಹಿತ್ ಶರ್ಮ, ವಿರಾಟ್ ಕೊಹ್ಲಿ, ಕೆ.ಎಲ್.ರಾಹುಲ್, ದಿನೇಶ್ ಕಾರ್ತಿಕ್ ಮತ್ತು ಆರ್.ಅಶ್ವಿನ್‌ಗೆ ವಿಶ್ರಾಂತಿ ನೀಡಲಾಗಿದೆ. ನ್ಯೂಜಿಲೆಂಡ್ ವಿರುದ್ಧದ ಏಕದಿನ ಸರಣಿಗೆ ಶಿಖರ್ ಧವನ್ ನಾಯಕತ್ವ ವಹಿಸುವರು.

ವಿಕೆಟ್ ಕೀಪರ್ ಬ್ಯಾಟರ್ ರಿಷಭ್ ಪಂತ್ ಅವರು ಎರಡೂ ಮಾದರಿಗಳಲ್ಲಿ ಉಪನಾಯಕನ ಜವಾಬ್ದಾರಿ ನಿಭಾಯಿಸುವರು. ಮೂರು ಪಂದ್ಯಗಳ ಟಿ20 ಸರಣಿ ನ.18 ರಿಂದ ನಡೆಯಲಿದೆ. ಏಕದಿನ ಪಂದ್ಯಗಳು ನ.25, 27 ಹಾಗೂ 30 ರಂದು ನಡೆಯಲಿವೆ.

ಡಿಸೆಂಬರ್‌ನಲ್ಲಿ ನಡೆಯಲಿರುವ ಬಾಂಗ್ಲಾದೇಶ ವಿರುದ್ಧದ ಏಕದಿನ ಮತ್ತು ಟೆಸ್ಟ್ ಸರಣಿಗೂ ತಂಡವನ್ನು ಪ್ರಕಟಿಸಲಾಗಿದೆ. ತಂಡವನ್ನು ರೋಹಿತ್ ಮುನ್ನಡೆಸಲಿದ್ದು, ರಾಹುಲ್ ಮತ್ತು ಕೊಹ್ಲಿ ಆಡಲಿದ್ದಾರೆ. ಮಂಡಿನೋವಿನಿಂದ ವಿಶ್ವಕಪ್ ಟೂರ್ನಿಯಿಂದ ಹೊರಗುಳಿದಿರುವ ರವೀಂದ್ರ ಜಡೇಜ ಅವರು ಬಾಂಗ್ಲಾದೇಶದ ಎದುರು ಆಡಲಿದ್ದಾರೆ. ಆದರೆ ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಎರಡೂ ಸರಣಿಗಳಿಗೆ ಅಲಭ್ಯರಾಗಿದ್ದಾರೆ.

'ಯಾವುದೇ ಆಟಗಾರರೂ ವಿಶ್ರಾಂತಿ ಬಯಸಿಲ್ಲ. ಆದರೆ ಒತ್ತಡ ಕಡಿಮೆ ಮಾಡಲು ಬಿಸಿಸಿಐ ವೈದ್ಯರ ತಂಡದ ಸಲಹೆಯಂತೆ ಕೆಲವರಿಗೆ ವಿಶ್ರಾಂತಿ ನೀಡಿದ್ದೇವೆ' ಎಂದು ಸೋಮವಾರ ತಂಡಗಳನ್ನು ಪ್ರಕಟಿಸಿದ ರಾಷ್ಟ್ರೀಯ ಆಯ್ಕೆ ಸಮಿತಿ ಮುಖ್ಯಸ್ಥ ಚೇತನ್ ಶರ್ಮಾ ತಿಳಿಸಿದರು.

ನ್ಯೂಜಿಲೆಂಡ್ ಸರಣಿಗೆ ತಂಡಗಳು:

ಟಿ20: ಹಾರ್ದಿಕ್ ಪಾಂಡ್ಯ (ನಾಯಕ) ರಿಷಭ್ ಪಂತ್, ಶುಭಮನ್ ಗಿಲ್, ಇಶಾನ್ ಕಿಶನ್, ದೀಪಕ್ ಹೂಡಾ, ಸೂರ್ಯಕುಮಾರ್ ಯಾದವ್, ಶ್ರೇಯಸ್ ಅಯ್ಯರ್, ಸಂಜು ಸ್ಯಾಮ್ಸನ್, ವಾಷಿಂಗ್ಟನ್ ಸುಂದರ್, ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ಅರ್ಷದೀಪ್ ಸಿಂಗ್, ಹರ್ಷಲ್ ಪಟೇಲ್, ಮೊಹಮ್ಮದ್ ಸಿರಾಜ್, ಭುವನೇಶ್ವರ್ ಕುಮಾರ್, ಉಮ್ರನ್ ಮಲಿಕ್


ಏಕದಿನ: ಶಿಖರ್ ಧವನ್ (ನಾಯಕ), ಪಂತ್, ಗಿಲ್, ಹೂಡಾ, ಸೂರ್ಯಕುಮಾರ್, ಅಯ್ಯರ್, ಸಂಜು, ವಾಷಿಂಗ್ಟನ್, ಶಾರ್ದೂಲ್ ಠಾಕೂರ್, ಶಹಬಾಜ್ ಅಹ್ಮದ್, ಚಾಹಲ್, ಕುಲದೀಪ್ ಯಾದವ್, ಅರ್ಷದೀಪ್, ದೀಪಕ್ ಚಾಹರ್, ಕುಲದೀಪ್ ಸೇನ್, ಮಲಿಕ್

ಬಾಂಗ್ಲಾದೇಶ ವಿರುದ್ಧದ ಏಕದಿನ ಸರಣಿ: ರೋಹಿತ್ ಶರ್ಮ (ನಾಯಕ), ಕೆ.ಎಲ್.ರಾಹುಲ್, ಧವನ್, ವಿರಾಟ್ ಕೊಹ್ಲಿ, ರಜತ್ ಪಾಟೀದಾರ್, ಅಯ್ಯರ್, ರಾಹುಲ್ ತ್ರಿಪಾಠಿ, ಪಂತ್, ಇಶಾನ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ವಾಷಿಂಗ್ಟನ್, ಶಾರ್ದೂಲ್, ಮೊಹಮ್ಮದ್ ಶಮಿ, ಸಿರಾಜ್, ಚಾಹರ್, ಯಶ್ ದಯಾಳ್

ಟೆಸ್ಟ್ ಸರಣಿ: ರೋಹಿತ್ (ನಾಯಕ), ರಾಹುಲ್, ಗಿಲ್, ಚೇತೇಶ್ವರ ಪೂಜಾರ, ಕೊಹ್ಲಿ, ಅಯ್ಯರ್, ಪಂತ್, ಕೆ.ಎಸ್. ಭರತ್ (ವಿಕೆಟ್ ಕೀಪರ್), ಆರ್. ಅಶ್ವಿನ್, ಜಡೇಜ, ಅಕ್ಷರ್, ಕುಲದೀಪ್ ಯಾದವ್, ಶಾರ್ದೂಲ್, ಶಮಿ, ಸಿರಾಜ್, ಉಮೇಶ್ ಯಾದವ್

ಹೋಟೆಲ್ ಕೊಠಡಿ ವಿಡಿಯೊ ಬಹಿರಂಗ: ಕೊಹ್ಲಿ ಗರಂ

ಇನ್ನೆಲ್ಲಿ ಖಾಸಗಿತನ ನಿರೀಕ್ಷಿಸಲಿ?



ಪರ್ತ್ (ಪಿಟಿಐ): ಪರ್ತ್‌ನಲ್ಲಿ ತಾವು ತಂಗಿದ್ದ ಹೋಟೆಲ್‌ನ ಕೊಠಡಿಯ ವಿಡಿಯೊವನ್ನು ಅಭಿಮಾನಿಯೊಬ್ಬರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿರುವುದಕ್ಕೆ ಭಾರತದ ಬ್ಯಾಟರ್ ವಿರಾಟ್ ಕೊಹ್ಲಿ ತೀವ್ರ ಅಸಮಾಧಾನ ಹೊರಹಾಕಿದ್ದಾರೆ.

ದಕ್ಷಿಣ ಆಫ್ರಿಕಾ ವಿರುದ್ಧದ ಪಂದ್ಯವನ್ನು ಆಡಲು ಭಾರತ ತಂಡ ಪರ್ತ್‌ನಲ್ಲಿ ತಂಗಿತ್ತು. ವಿರಾಟ್ ಇಲ್ಲದ ಸಮಯದಲ್ಲಿ ಯಾರೋ ಅವರ ಕೊಠಡಿಯ ವಿಡಿಯೊ ಮಾಡಿದ್ದರು. ಅದು ವೈರಲ್ ಆಗಿದೆ.

ಆ ವಿಡಿಯೊವನ್ನು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಪೋಸ್ಟ್ ಮಾಡಿರುವ ಕೊಹ್ಲಿ, 'ತಮ್ಮ ನೆಚ್ಚಿನ ಆಟಗಾರನನ್ನು ಕಂಡಾಗ ಅಭಿಮಾನಿಗಳು ಸಂತೋಷಪಡುವರು ಮತ್ತು ಭೇಟಿಯಾಗಲು ಬಯಸುವರು ಎಂಬುದು ನನಗೆ ಗೊತ್ತಿರುವ ವಿಚಾರ. ಆದರೆ ಈ ವಿಡಿಯೊ ಮಾತ್ರ ನನ್ನನ್ನು ದಿಗಿಲುಗೊಳಿಸಿದೆ. ಇದರಿಂದ ನನ್ನ ಖಾಸಗಿತನಕ್ಕೆ ಧಕ್ಕೆ ಉಂಟಾಗಿದೆ' ಎಂದು ಬರೆದುಕೊಂಡಿದ್ದಾರೆ.

'ನನ್ನ ಹೋಟೆಲ್‌ನ ಕೊಠಡಿಯಲ್ಲೂ ಖಾಸಗಿತನ ಎಂಬುದು ಇಲ್ಲವಾದರೆ, ಬೇರೆ ಎಲ್ಲಿ ಖಾಸಗಿತನ ನಿರೀಕ್ಷಿಸಲು ಸಾಧ್ಯ? ಇನ್ನೊಬ್ಬರ ಖಾಸಗಿತನದ ಮೇಲೆ ಎರಗುವಂತಹ ಈ ರೀತಿಯ ದುರಭಿಮಾನವನ್ನು ನಾನು ಒಪ್ಪುವುದಿಲ್ಲ. ದಯವಿಟ್ಟು ಇನ್ನೊಬ್ಬರ ಖಾಸಗಿತನವನ್ನು ಗೌರವಿಸಿ. ಅವರನ್ನು ಮನರಂಜನೆಯ ಸರಕು ಎಂದು ಪರಿಗಣಿಸಬೇಡಿ' ಎಂದು ಮನವಿ ಮಾಡಿಕೊಂಡಿದ್ದಾರೆ.

ವಿಡಿಯೊದಲ್ಲಿ ಏನಿದೆ?: 'ಕಿಂಗ್ ಕೊಹ್ಲಿಯ ಹೋಟೆಲ್ ಕೊಠಡಿ' ಎಂಬ ಶೀರ್ಷಿಕೆ ಹೊಂದಿರುವ ವಿಡಿಯೊವನ್ನು ವ್ಯಕ್ತಿಯೊಬ್ಬರು ಕೊಠಡಿಯಲ್ಲಿ ನಡೆದಾಡುತ್ತಾ ಚಿತ್ರೀಕರಿಸಿದ್ದಾರೆ. ಈ ವೇಳೆ ಹೋಟೆಲ್‌ನ ಸಿಬ್ಬಂದಿ ಸೇರಿದಂತೆ ಒಂದಕ್ಕಿಂತ ಹೆಚ್ಚು ಮಂದಿ ಅಲ್ಲಿರುವುದು ಗೋಚರಿಸುತ್ತದೆ.

ಕೊಹ್ಲಿ ಅವರು ಜೋಡಿಸಿಟ್ಟಿರುವ ಶೂಗಳು, ತೆರೆದ ಸ್ಥಿತಿಯಲ್ಲಿರುವ ಸೂಟ್‌ಕೇಸ್ ಹಾಗೂ ಅದರಲ್ಲಿರುವ ಜೆರ್ಸಿ, ಪ್ರೊಟೀನ್ ಪೌಡರ್, ಟೇಬಲ್ ಮೇಲಿಟ್ಟಿರುವ ಕ್ಯಾಪ್‌ಗಳನ್ನು ವಿಡಿಯೊದಲ್ಲಿ ತೋರಿಸಲಾಗಿದೆ.

ಕಬಡ್ಡಿ: ಜೈಂಟ್ಸ್ ಮಣಿಸಿದ ಪಟ್ನಾ ಪೈರೇಟ್ಸ್

ಪುಣೆ (ಪಿಟಿಐ): ಸಚಿನ್ ಅವರ ಚುರುಕಾದ ಆಟದ ಬಲದಿಂದ ಪಟ್ನಾ ಪೈರೇಟ್ಸ್ ತಂಡ ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ಜಯ ಸಾಧಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಪೈರೇಟ್ಸ್ 34–28 ರಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು. ಸಚಿನ್ 13 ಪಾಯಿಂಟ್ಸ್ ತಂದಿತ್ತರು. ಮೊದಲಾರ್ಧ ಕೊನೆಗೊಳ್ಳಲು ಕೆಲವೇ ನಿಮಿಷಗಳು ಇರುವಾಗ ಪೈರೇಟ್ಸ್, ಎದುರಾಳಿ ತಂಡವನ್ನು ಆಲೌಟ್ ಮಾಡಿ 21–13 ರಲ್ಲಿ ಮುನ್ನಡೆ ಗಳಿಸಿತು.

ಸಚಿನ್ ಮತ್ತು ರೋಹಿತ್ ಗುಲಿಯಾ (7) ದ್ವಿತೀಯಾರ್ಧದಲ್ಲೂ ಮೇಲಿಂದ ಮೇಲೆ ಪಾಯಿಂಟ್ಸ್ ಗಳಿಸಿ ತಂಡದ ಗೆಲುವಿಗೆ ಕಾರಣರಾದರು.

ದಿನದ ಇನ್ನೊಂದು ಪಂದ್ಯದಲ್ಲಿ ಯು.ಪಿ. ಯೋಧಾಸ್ 43–24 ರಲ್ಲಿ ತೆಲುಗು ಟೈಟನ್ಸ್ ತಂಡವನ್ನು ಮಣಿಸಿತು. ಸುರೇಂದರ್ ಗಿಲ್ (13) ಮತ್ತು ಪ್ರದೀಪ್ ನರ್ವಾಲ್ (9) ಯೋಧಾಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಇಂದಿನ ಪಂದ್ಯಗಳು

ಪುಣೇರಿ ಪಲ್ಟನ್– ದಬಾಂಗ್ ಡೆಲ್ಲಿ (ಆರಂಭ: ರಾತ್ರಿ 7.30)

ಬೆಂಗಳೂರು ಬುಲ್ಸ್– ಹರಿಯಾಣ ಸ್ಟೀಲರ್ಸ್ (ಆರಂಭ: ರಾತ್ರಿ 8.30)

ಪಾಯಿಂಟ್ಸ್ ಪಟ್ಟಿ (ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ಬೆಂಗಳೂರು	9	6	2	1	34
ಡೆಲ್ಲಿ	9	5	4	0	28
ಜೈಪುರ	9	5	4	0	27
ಪುಣೇರಿ	8	4	2	2	27
ಮುಂಬಾ	8	5	3	0	26
ಗುಜರಾತ್	9	4	4	1	25


ಪಂಜಾಬ್‌ನ ಜಲಂಧರ್‌ನಲ್ಲಿ ಮಂಗಳವಾರದಿಂದ ನಡೆಯಲಿರುವ ರಾಷ್ಟ್ರಮಟ್ಟದ ಕಬಡ್ಡಿ ಚಾಂಪಿಯನ್‌ಷಿಪ್‌ಗೆ ಆಯ್ಕೆಯಾದ ಕರ್ನಾಟಕ ಕೇಂದ್ರೀಯ ವಿದ್ಯಾಲಯ ತಂಡ: (ಎಡದಿಂದ) ನಿಂತವರು– ರಣಬೀರ್ (ಕೋಚ್), ಗೌರವ್, ಸುದೀಪ್, ಜೋಶುವಾ, ಅಂಕುರ್, ಬಲ್ವೇಶ್, ಯೋಗೇಶ್, ಪ್ರೀತಂ, ಕೃಷ್ಣ (ಮ್ಯಾನೇಜರ್). ಕುಳಿತವರು– ನಿಶಾಂತ್ ಕೆ, ಸುಜಿತ್, ರಾಮು, ಗೌತಮ್ ಮತ್ತು ವರುಣ್

ಸಾತ್ವಿಕ್– ಚಿರಾಗ್, ಶಂಕರ್‌ಗೆ ತಲಾ ₹ 5 ಲಕ್ಷ ಬಹುಮಾನ

ನವದೆಹಲಿ (ಪಿಟಿಐ): ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಗೆದ್ದ ಶಂಕರ್ ಮುತ್ತುಸ್ವಾಮಿ ಮತ್ತು ಫ್ರೆಂಚ್‌ದ ಓಪನ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಚಾಂಪಿಯನ್ ಆದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರಿಗೆ ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ತಲಾ ₹ 5 ಲಕ್ಷ ಬಹುಮಾನ ಪ್ರಕಟಿಸಿದೆ.

ಶಂಕರ್ ಅವರು ಭಾನುವಾರ ಸ್ಪೇನ್‌ನಲ್ಲಿ ನಡೆದ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್ ಬೆಳ್ಳಿ ಜಯಿಸುವ ಮೂಲಕ ಈ ಸಾಧನೆ ಮಾಡಿದ ಭಾರತದ ಎರಡನೇ ಪುರುಷ ಆಟಗಾರ ಎನಿಸಿಕೊಂಡಿದ್ದರು. ಫೈನಲ್‌ನಲ್ಲಿ ಅವರು ಚೀನಾ ತೈಪೆಯ ಕುವು ಕುವಾನ್ ಲಿನ್ ಎದುರು ಸೋತಿದ್ದರು.

ಸಾತ್ವಿಕ್–ಚಿರಾಗ್ ಜೋಡಿಯು ಪ್ಯಾರಿಸ್‌ನಲ್ಲಿ ಭಾನುವಾರ ಕೊನೆಗೊಂಡ ಫ್ರೆಂಚ್ ಓಪನ್ ಟೂರ್ನಿಯ ಫೈನಲ್‌ನಲ್ಲಿ 21–13, 21–19 ರಲ್ಲಿ ಚೀನಾ ತೈಪೆಯ ಲು ಚಿಂಗ್ ಯಾವೊ ಮತ್ತು ಯಾಂಗ್ ಪೊ ಹಾನ್ ವಿರುದ್ಧ ಗೆದ್ದಿದ್ದರು.

ಹೈಲೊ ಓಪನ್ ಇಂದಿನಿಂದ: ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿಯು ಜರ್ಮನಿಯ ಸಾರ್‌ಬ್ರೂಕನ್‌ನಲ್ಲಿ ಮಂಗಳವಾರ ಆರಂಭವಾಗುವ ಹೈಲೊ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಲಯ ಮುಂದುವರಿಸುವ ತವಕದಲ್ಲಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬಾಂಗ್ಲಾ ಪಂದ್ಯಕ್ಕೆ ಕಾರ್ತಿಕ್ ಅನುಮಾನ

ಅಡಿಲೇಡ್ (ಪಿಟಿಐ): ದಕ್ಷಿಣ ಆಫ್ರಿಕಾ ಎದುರಿನ ಪಂದ್ಯದಲ್ಲಿ ಬೆನ್ನು ನೋವಿಗೆ ಒಳಗಾಗಿರುವ ಭಾರತ ತಂಡದ ವಿಕೆಟ್ ಕೀಪರ್ ಬ್ಯಾಟರ್ ದಿನೇಶ್ ಕಾರ್ತಿಕ್ ಅವರು ಬುಧವಾರ ಬಾಂಗ್ಲಾದೇಶದ ವಿರುದ್ಧ ಕಣಕ್ಕಿಳಿಯುವುದು ಅನುಮಾನ. 'ಕಾರ್ತಿಕ್ ಅವರ ಗಾಯದ ಗಂಭೀರತೆ ಎಷ್ಟು ಎಂಬುದು ಇನ್ನೂ ತಿಳಿದಿಲ್ಲ. ಫಿಟ್‌ನೆಸ್ ಮರಳಿ ಪಡೆಯಲು ವೈದ್ಯಕೀಯ ತಂಡ ಅವರಿಗೆ ನೆರವಾಗುತ್ತಿದೆ' ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕಾರ್ತಿಕ್ ಅಲಭ್ಯರಾದರೆ, ರಿಷಭ್ ಪಂತ್‌ಗೆ ವಿಶ್ವಕಪ್ ಟೂರ್ನಿಯಲ್ಲಿ ಇದೇ ಮೊದಲ ಬಾರಿಗೆ ಅಂತಿಮ 11ರ ಬಳಗದಲ್ಲಿ ಸ್ಥಾನ ಲಭಿಸಲಿದೆ.

ಮಿಜೋರಾಂ ಫುಟ್‌ಬಾಲ್– ರಿಲಯನ್ಸ್ ಒಪ್ಪಂದ

ಐಜ್ವಾಲ್: ಮಿಜೋರಾಂ ರಾಜ್ಯದಲ್ಲಿ ತಳಮಟ್ಟದಿಂದಲೇ ಫುಟ್‌ಬಾಲ್ ಕ್ರೀಡೆಯ ಬೆಳವಣಿಗೆಯ ನಿಟ್ಟಿನಲ್ಲಿ ರಿಲಯನ್ಸ್ ಫೌಂಡೇಷನ್, ಮಿಜೋರಾಂ ಫುಟ್‌ಬಾಲ್ ಸಂಸ್ಥೆಯ ಜತೆ ಕೈಜೋಡಿಸಿದೆ.ರಿಲಯನ್ಸ್ ಫೌಂಡೇಷನ್ ಯಂಗ್ ಚಾಂಪ್ಸ್ ಮೂಲಕ ಮಕ್ಕಳಿಗೆ ಫುಟ್‌ಬಾಲ್ ಟೂರ್ನಿಗಳನ್ನು ಆಯೋಜಿಸಿ ಯುವ ಪ್ರತಿಭೆಗಳನ್ನು ಗುರುತಿಸುವ ಕೆಲಸ ಮಾಡಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರೊ ಸಾಕರ್‌ನಿಂದ ಪ್ರೀಮಿಯರ್ ಲೀಗ್ ಸ್ಕೌಟ್ಸ್

ಬೆಂಗಳೂರು: ಪ್ರೊ ಸಾಕರ್ ಗ್ಲೋಬಲ್ ಸಂಸ್ಥೆಯು ಭಾರತದಲ್ಲಿ ನವೆಂಬರ್ 12ರಿಂದ ಪ್ರೀಮಿಯರ್ ಲೀಗ್ ಸ್ಕೌಟ್ಸ್ ಆಯೋಜಿಸುತ್ತಿದೆ. ಸಂಸ್ಥೆಯ ಕಾರ್ಯಕರ್ತರು 13, 15, 17 ಮತ್ತು 18 ವರ್ಷದೊಳಗಿನ ಮಕ್ಕಳ ಆಟದ ಮೌಲ್ಯಮಾಪನ ಮಾಡಲು ಬೆಂಗಳೂರಿಗೆ ಬರಲಿದ್ದಾರೆ. ಆಯ್ಕೆಯಾದ ಮಕ್ಕಳು ಇಂಡಿಯಾ ಖೇಲೊ ಫುಟ್‌ಬಾಲ್ ಫೈನಲ್‌ಗಳಿಗೆ ನೇರ ಪ್ರವೇಶ ಪಡೆಯಲಿದ್ದಾರೆ. https://workshop.indiakhelofootball.com/ನಲ್ಲಿ ನೋಂದಾಯಿಸಿಕೊಳ್ಳಬಹುದು.

ಟಿ20 ಕ್ರಿಕೆಟ್: ಕರ್ನಾಟಕ ಪಂಜಾಬ್ ಹೋರಾಟ ಇಂದು


ಮಯಂಕ್

ಬೆಂಗಳೂರು: ಕರ್ನಾಟಕ ತಂಡದವರು ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಮಂಗಳವಾರ ಪಂಜಾಬ್ ತಂಡದ ಸವಾಲು ಎದುರಿಸಲಿದ್ದಾರೆ.

ಕೋಲ್ಕತ್ತದ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಗೆಲುವು ಪಡೆದು ಸೆಮಿಫೈನಲ್ ಪ್ರವೇಶಿಸುವ ವಿಶ್ವಾಸವನ್ನು ಮಯಂಕ್ ಅಗರವಾಲ್ ನೇತೃತ್ವದ ಬಳಗ ಹೊಂದಿದೆ.

ಆರಂಭಿಕ ಬ್ಯಾಟರ್ ದೇವದತ್ತ ಪಡಿಕ್ಕಲ್ ಅವರ ಅನುಪಸ್ಥಿತಿ ಕರ್ನಾಟಕಕ್ಕೆ ಅಲ್ಪ ಹಿನ್ನಡೆ ಉಂಟು ಮಾಡಿದೆ. ಇದರಿಂದ ಮಯಂಕ್ ಮತ್ತು ಅನುಭವಿ ಆಟಗಾರ ಮನೀಷ್ ಪಾಂಡೆ ಅವರ ಮೇಲಿನ ಜವಾಬ್ದಾರಿ ಹೆಚ್ಚಿದೆ.

ವಿದ್ವತ್ ಕಾವೇರಪ್ಪ, ವೈಶಾಖ್ ವಿಜಯ ಕುಮಾರ್ ಮತ್ತು ಕೆ.ಗೌತಮ್ ಅವರು ಉತ್ತಮ ಪ್ರದರ್ಶನ ಮುಂದುವರಿಸುವ ವಿಶ್ವಾಸದಲ್ಲಿದ್ದಾರೆ. ಮಂಗಳವಾರ ನಡೆಯಲಿರುವ ಇತರ ಎಂಟರಘಟ್ಟದ ಪಂದ್ಯಗಳಲ್ಲಿ ದೆಹಲಿ–ವಿದರ್ಭ, ಹಿಮಾಚಲ ಪ್ರದೇಶ–ಬಂಗಾಳ ಮತ್ತು ಮುಂಬೈ– ಸೌರಾಷ್ಟ್ರ ತಂಡಗಳು ಪೈಪೋಟಿ ನಡೆಸಲಿವೆ.

ಪಂದ್ಯ ಆರಂಭ: ಬೆಳಿಗ್ಗೆ 11

ಫಾರ್ಮುಲಾ ಒನ್: ವರ್ಸ್ಟ್ಯಾಪನ್ ದಾಖಲೆ



ಮೆಕ್ಸಿಕೊ ಸಿಟಿ (ರಾಯಿಟರ್ಸ್): ರೆಡ್‌ಬುಲ್ ತಂಡದ ಮ್ಯಾಕ್ಸ್ ವರ್ಸ್ಟ್ಯಾಪನ್ ಅವರು ಭಾನುವಾರ ನಡೆದ ಮೆಕ್ಸಿಕೊ ಗ್ರ್ಯಾನ್ ಪ್ರಿ ಫಾರ್ಮುಲಾ ಒನ್ ರೇಸ್ ಗೆದ್ದು ಹೊಸ ದಾಖಲೆ ನಿರ್ಮಿಸಿದರು.

ಈ ಋತುವಿನಲ್ಲಿ ವರ್ಸ್ಟ್ಯಾಪನ್ ಗೆದ್ದ 14ನೇ ರೇಸ್ ಇದು.

ಈ ಮೂಲಕ ಮೈಕಲ್ ಶುಮಾಕರ್ ಮತ್ತು ಸೆಬಾಸ್ಟಿಯನ್ ವೆಟೆಲ್ ಅವರ ಹೆಸರಲ್ಲಿದ್ದ ದಾಖಲೆಯನ್ನು ಮುರಿದು, ಒಂದೇ ಋತುವಿನಲ್ಲಿ ಅತಿಹೆಚ್ಚು ಗೆಲುವು ಪಡೆದ ಚಾಲಕ ಎಂಬ ಗೌರವವನ್ನು ತಮ್ಮದಾಗಿಸಿಕೊಂಡರು.

ಉಕ್ರೇನ್ ಮೇಲೆ ಕ್ಷಿಪಣಿ ದಾಳಿ


ಕೀವ್ (ಎಎಫ್‌ಪಿ): ಉಕ್ರೇನ್ ಮೇಲೆ ರಷ್ಯಾ ಪಡೆಗಳು ಸೋಮವಾರ ಬೆಳಿಗ್ಗೆ 7 ಗಂಟೆ ಸುಮಾರಿಗೆ 50ಕ್ಕೂ ಹೆಚ್ಚು ಕ್ರೂಸ್ ಕ್ಷಿಪಣಿಗಳಿಂದ ದಾಳಿ ನಡೆಸಿದ್ದು, ಹಲವು ಪ್ರದೇಶಗಳಲ್ಲಿ ವಿದ್ಯುತ್ ಮತ್ತು ನೀರಿನ ಸಂಪರ್ಕ ಕಡಿತಗೊಂಡಿದೆ. ಕ್ಷಿಪಣಿಗಳ ದಾಳಿಯಿಂದ ಅತ್ಯವಶ್ಯ ಮೂಲಸೌಕರ್ಯಗಳು ಹಾನಿಗೀಡಾಗಿವೆ ಎಂದು ಉಕ್ರೇನ್ ಸೇನೆ ಟೆಲಿಗ್ರಾಮ್‌ನಲ್ಲಿ ತಿಳಿಸಿದೆ.

ರಷ್ಯಾ ಕಪ್ಪು ಸಮುದ್ರ ಮತ್ತು ಕ್ಯಾಸ್ಪಿಯನ್ ಸಮುದ್ರದಿಂದ ಯುದ್ಧನೌಕೆ, ಯುದ್ಧ ವಿಮಾನಗಳ ಮೂಲಕ ಕ್ಷಿಪಣಿಗಳನ್ನು ಉಡಾಯಿಸಿದೆ. ಕೀವ್, ಹಾರ್ಕಿವ್ ಹಾಗೂ ಇನ್ನಿತರ ನಗರಗಳಲ್ಲಿ ವಿದ್ಯುತ್, ನೀರಹ ಪೂರೈಕೆ ಅಸ್ತವ್ಯಸ್ತಗೊಂಡಿದೆ.

ರಾಜಧಾನಿ ಕೀವ್ ನಗರವೊಂದರಲ್ಲೇ ಶೇ 80ರಷ್ಟು ಜನರು ವಿದ್ಯುತ್ ಮತ್ತು ನೀರಿನ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಕ್ರೆಮೆನ್‌ಚುಕ್‌ನಲ್ಲಿರುವ ಜಲವಿದ್ಯುತ್ ಉತ್ಪಾದನಾ ಸ್ಥಾವರದ ಮೇಲೆ 12ಕ್ಕೂ ಹೆಚ್ಚು ಕ್ಷಿಪಣಿಗಳ ದಾಳಿ ನಡೆದಿದೆ. ಝಪೊರಿಝಿಯಾ ನಗರದಲ್ಲೂ ವಿದ್ಯುತ್ ಸಮಸ್ಯೆ ಉದ್ಭವಿಸಬಹುದು ಎಂದು ಮೇಯರ್ ವಿಟಾಲಿ ಕ್ಲಿಟ್‌ಸ್ಕೊ ತಿಳಿಸಿದ್ದಾರೆ.

ಪ್ರತೀಕಾರದ ದಾಳಿ: ಕ್ರಿಮಿಯಾ ದ್ವೀಪಕಲ್ಪದ ಕರಾವಳಿಯಲ್ಲಿ ಕಪ್ಪು ಸಮುದ್ರದ ನೌಕೆಯ ಮೇಲೆ ಉಕ್ರೇನ್ ಡ್ರೋನ್ ದಾಳಿ ನಡೆಸಿದೆ ಎಂದು ರಷ್ಯಾ ಆರೋಪಿಸಿದ ಎರಡು ದಿನಗಳ ಬಳಿಕ ಪ್ರತೀಕಾರದ ದಾಳಿ ಆಗಿದೆ.

ಬ್ರೆಜಿಲ್ ಅಧ್ಯಕ್ಷರಾಗಿ ಲೂಯಿಸ್ ಲುಲಾ ಆಯ್ಕೆ


ಲೂಯಿಸ್ ಲುಲಾ ಡಾ ಸಿಲ್ವ

ಸಾವೊ ಪಾಲೊ (ಎಪಿ): ವರ್ಕರ್ಸ್ ಪಕ್ಷದ ನಾಯಕ ಲೂಯಿಸ್ ಇನಾಸಿಯೊ ಲುಲಾ ಡಾ ಸಿಲ್ವ ಅವರು ಬ್ರೆಜಿಲ್‌ನ 39ನೇ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷೀಯ ಚುನಾವಣೆಯಲ್ಲಿ 77 ವರ್ಷದ ಲುಲಾ ಅವರು ಹಾಲಿ ಅಧ್ಯಕ್ಷ ಹಾಗೂ ಲಿಬರಲ್ ಪಕ್ಷದ ನಾಯಕ ಜೈರ್ ಬೊಲ್ಸೊನಾರೊ ಅವರನ್ನು ಮಣಿಸಿದ್ದಾರೆ.

'ಚಲಾವಣೆಯಾಗಿದ್ದ ಒಟ್ಟು ಮತಗಳ ಪೈಕಿ ಲುಲಾ ಅವರಿಗೆ ಶೇ 50.9 ರಷ್ಟು ಮತಗಳು ದೊರೆತಿವೆ. ಬೊಲ್ಸೊನಾರೊ ಅವರು ಶೇ 49.1 ರಷ್ಟು ಮತಗಳನ್ನು ಪಡೆದಿದ್ದಾರೆ' ಎಂದು ಚುನಾವಣಾ ಪ್ರಾಧಿಕಾರ ಭಾನುವಾರ ತಿಳಿಸಿದೆ.

ಲುಲಾ ಅವರು 2003 ರಿಂದ 2010ರವರೆಗೂ ಬ್ರೆಜಿಲ್‌ನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಭ್ರಷ್ಟಾಚಾರ ಹಗರಣದಲ್ಲಿ ಭಾಗಿಯಾಗಿದ್ದ ಅವರು ಸೆರೆವಾಸ ಅನುಭವಿಸಿದ್ದರು. ಹೀಗಾಗಿ 2018ರಲ್ಲಿ ನಡೆದಿದ್ದ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶ ಕಳೆದುಕೊಂಡಿದ್ದರು. 2023ರ ಜನವರಿ 1ರಂದು ನಡೆಯುವ ಸಮಾರಂಭದಲ್ಲಿ ಲುಲಾ ಅವರು ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.